
ಪುಸ್ತಕ ಪ್ರಪಂಚ

ಸಂಪುಟ ೪೯ ೧೯೮೪ ಅಕ್ಟೋಬರ್ ಸಂಚಿಕೆ ೩



ವಿಷಯ ಸೂಚಿ

ಮುಖಚಿತ್ರ : ಮಹಾತ್ಮ ಗಾಂಧೀಜಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೨೯ ಅಕ್ಟೋಬರ್ ೧೯೮೪ ಸಂಚಿಕೆ ೨

ಮಹಾನ್ ಕಾದಂಬರಿಯಾದ ಗಯಟೆಯ ಪ್ರೇಮಕಥೆ

ಪ್ರಪ್ರಥಮವಾಗಿ ಗಯಟೆಯನ್ನು ನಾನೊಬ್ಬ ಕವಿಯ ರೂಪದಲ್ಲಿ ಅರಿತಿದ್ದೆ. ಅವರ ಮೂರು ಕಾದಂಬರಿಗಳನ್ನು "ದಿ ಸಾರೋಜ್ ಆಫ್ ಅರ್ಥರ್", "ವಿಲ್‌ಹೆಮ್ ಮೀಸ್ತರ್ಸ್ ಅಪ್ರೆಂಟಿಸ್‌ಶಿಪ್" ಮತ್ತು "ದಿ ಎಲೆಕ್ಟಿವ್ ಅಫಿನಿಟೀಜ್"—ನಾನು ಅದೆಷ್ಟೋ ದಿನಗಳಾದ ಮೇಲೆ ಓದಿದೆ. ಈ ಮೂರು ಕಾದಂಬರಿಗಳಲ್ಲಿ "ವಿಲ್‌ಹೆಮ್ ಮೀಸ್ತರ್ಸ್" ಅತ್ಯಂತ ರೋಮಾಂಚಕಾರಿ ಹಾಗೂ ಮಹತ್ವಪೂರ್ಣವಾಗಿದೆ. ರೋಮ್ಯಾಂಟಿಕ್ ಜೊತೆಗೆ ಯಥಾರ್ಥತೆಯಿಂದಲೂ ಕೂಡಿದೆ. ಇದರ ಸಶಕ್ತ ಮತ್ತು ಸಜೀವ ಪಾತ್ರಗಳು ಸ್ವಲ್ಪ ವಿಚಿತ್ರ ಹಾಗೂ ಅಸಾಧಾರಣವೆನ್ನಿಸುತ್ತವೆ. ಆದರೆ ಅನೇಕ ವಿಶೇಷತೆಗಳಿಂದ ಕೂಡಿದ ಈ ಕಾದಂಬರಿ ಒಂದು ಅಸಫಲ ಕಾದಂಬರಿಯಾಗಿದೆ. ಇದಕ್ಕೆ ಕಾರಣ—ಗಯಟೆಯವರು ಅತ್ಯಂತ ಮೇಧಾವಿಗಳಾಗಿದ್ದರೂ ಓರ್ವ ಸಫಲ ಮತ್ತು ಮಹಾನ್ ಕಾದಂಬರಿಕಾರನಲ್ಲಿರಬೇಕಾದ ವಿಶಿಷ್ಟ ಪ್ರತಿಭೆ ಅವರಲ್ಲಿಲ್ಲ.

ಈ ವಿಶಿಷ್ಟ ಪ್ರತಿಭೆ ಎಂದರೇನೆಂದು ನಾನೂ ಉತ್ತರಿಸಲಾರೆ. ಆದರೆ, ಕಾದಂಬರಿಕಾರನಿಗೆ ಬಹುಮುಖ ಪ್ರತಿಭೆಯಿರುವುದು ಅಗತ್ಯವೆಂಬುದಂತೂ ನಿರ್ವಿವಾದ. ಬಹುಮುಖಿಯಾಗಿದ್ದರೇನೇ ಪಾತ್ರಗಳೊಂದಿಗೆ ಒಂದಾಗಿ, ಅವರ ಭಾವನೆ ಮತ್ತು ವಿಚಾರಗಳನ್ನು ಅರಿತು, ವ್ಯಕ್ತಪಡಿಸಲು ಸಾಧ್ಯ. ಗಯಟೆ

ಜನವರಿ ೧೯೮೨ರ ಹಿಂದಿ ಡೈಜೆಸ್ಟ್ ನವನೀತದಲ್ಲಿ ಪ್ರಕಟಗೊಂಡ 'ಸಾಮರ್ ಸೆಟ್ ಮಾಮ್' ರವರ "ಗಯಟೆ ಕಿ ಪ್ರೇಮ್–ಕಥಾ ಜೋ ಏಕ್ ಮಹಾನ್ ಉಪನ್ಯಾಸ್ ಬನ್ ಗಯಿ" ಲೇಖನದ ಕನ್ನಡಾನುವಾದ.

ಯುವರು ಪರಮ ಅಹಂಕಾರವಾದಿಗಳಾಗಿದ್ದರು, ಹೀಗಾಗಿ ಮಹಾನ್ ಕಾದಂಬರಿಕಾರರಾಗಲು ಸಾಧ್ಯವಾಗಲಿಲ್ಲ.

ಗಯುಟೆಯುವರ ಕಾದಂಬರಿಗಳಲ್ಲಿ ನಾವು ಅವರ ಪಾತ್ರಗಳನ್ನು ಕಡಿಮೆ ಕಾಣುತ್ತೇವೆ, ಆದರೆ ಅವರನ್ನು ಹೆಚ್ಚು ಕಾಣುತ್ತೇವೆ. ಅವರ ಸಮಸ್ತ ಪ್ರೇಮ ಜೀವನ ಮತ್ತು ಭಾವನಾ-ಜೀವನ ಅವರ ಕಥಾ-ಕೃತಿಗಳಲ್ಲಿ ತುಂಬಾ ಸ್ವಚ್ಛ ವಾಗಿ, ಪಾರದರ್ಶಕವಾಗಿ ಕಾಣಿಸುತ್ತದೆ. ಪ್ರೇಮದ ಅವರ ಪ್ರಗಾಢ ಆಕಾಂಕ್ಷೆ, ಕಾತುರ, ಆಳವಾದ ವೇದನೆ ಪಾಠಕರ ಮನಸ್ಸನ್ನು ಸೆರೆಹಿಡಿಯುತ್ತದೆ.

ಇಪ್ಪತ್ತನೆಯ ವಯಸ್ಸಿನಲ್ಲಿ ಗಯುಟೆಯುವರು ಸ್ಟ್ರಾಸ್‌ವರ್ಗ್ ವಿಶ್ವವಿದ್ಯಾ ನಿಲಯದಲ್ಲಿ ಕಾನೂನನ್ನು ಅಭ್ಯಸಿಸಲು ಪ್ರವೇಶಗೊಂಡರು. ವಕೀಲಿ ವೃತ್ತಿ ಯಲ್ಲಿ ಅವರಿಗೆ ಸುತಾರಾಂ ಆಸಕ್ತಿಯಿರಲಿಲ್ಲ. ತಮ್ಮ ತಂದೆಯ ಇಚ್ಛೆಗನುಸಾರ ವಾಗಿ ಅವರು ಕಾನೂನನ್ನು ಓದಬೇಕಾಯಿತು. ಆಗ ಗಯುಟೆಯುವರು ಓರ್ವ ಸ್ಫುರದ್ರೂಪಿ ಯುವಕರಾಗಿದ್ದರು. ಅವರ ರೂಪ ಮನಮೋಹಕವಾಗಿತ್ತು ; ನವಯುವತಿಯರು ಮತ್ತು ಸಣ್ಣ ಮಕ್ಕಳೊಂದಿಗೆ ಅವರು ಗಂಟೆಗಟ್ಟಲೆ ಆಟವಾಡುತ್ತಿದ್ದರು.

ವಿದ್ಯಾಭ್ಯಾಸದ ದಿನಗಳಲ್ಲಿ ಅವರ ಧರ್ಮಗುರುವಿನ ಪುತ್ರಿ 'ಫ್ರಾಯದೆರೀಖ್' ಳೊಂದಿಗೆ 'ಪ್ರಥಮ ದೃಷ್ಟಿಯ ಪ್ರೇಮ' ಉಂಟಾಯಿತು. 'ಫ್ರಾಯದೆರೀಖ್ ಳಿಗೂ ಇದೇ ಅನುಭವವಾಯಿತು. ಇವಳಿಗೆ ಗಯುಟೆಯುವರು ತುಂಬಾ ಆಸಕ್ತಿ ಯಿಂದ 'ವಾಲ್ಜ್' ಎಂಬ ಒಂದು ಹೊಸ ನೃತ್ಯಶೈಲಿಯ ತರಬೇತಿ ಕೊಟ್ಟರು. ಈ ದಿನಗಳಲ್ಲಿ ಅವರೆಲ್ಲಾ ಅನುಭವಗಳು, ಅವರೆಲ್ಲಾ ವ್ಯಕ್ತಿತ್ವಗಳು ಫ್ರಾಯ ದೆರೀಖ್‌ಳಲ್ಲೇ ಕೇಂದ್ರೀಕೃತವಾಗಿತ್ತು ; ಇಬ್ಬರ ಜೀವನ, ಪ್ರೇಮದ ಕಾಂತಿ ಯಿಂದ ಪ್ರದೀಪ್ತವಾಗಿತ್ತು, ಪ್ರೇಮದ ಉನ್ಮಾದ ಎಲ್ಲೆ ಮೀರಿತ್ತು. ನಲ್ವತ್ತು ವರ್ಷಗಳಾದ ಮೇಲೆ, ಗಯುಟೆಯುವರು ತಮ್ಮ ಆತ್ಮಕಥೆಯನ್ನು 'ಡಿಕ್ಟೇಟ್' ಮಾಡಿದಾಗ, ತಮ್ಮ ಮೊದಲ ಪ್ರೇಮ-ಪ್ರಸಂಗವನ್ನು ವರ್ಣಿಸುವಾಗ ಅವರ ಧ್ವನಿಗಳು ಕಂಪಿಸಲಾರಂಭಿಸಿದ್ದವೆಂದು ಹೇಳುತ್ತಾರೆ.

ಕಾರಣಾಂತರಗಳಿಂದ, ಗಯುಟೆಯುವರು ಶೀಘ್ರವೇ ಈ 'ಉನ್ಮಾದ' ದಿಂದ ಮುಕ್ತರಾದರು. ಆದರೆ, ವಿಯೋಗದ ವೇದನೆಯು ಹೃದಯದಲ್ಲಿ ನಾಟಿತು. ಬೀಳ್ಕೊಡುಗೆಯ ಕ್ಷಣಗಳಲ್ಲಿ, ಫ್ರಾಯದೆರೀಖ್‌ಳ ಕಣ್ಣುಗಳು ತೇವವಾಗಿದ್ದಾಗ ಗಯುಟೆಯುವರ ಹೃದಯ ಭಾರವಾಗಿತ್ತು, ಅವರಿಂದ ಮಾತೇ ಹೊರಡಲಿಲ್ಲ. ಈ ಕೆಲಸವನ್ನು ಒಂದು 'ಹೊಯ್ದಾಡುವ' ಪತ್ರ ಮುಖೇನ ಮಾಡಬೇಕಾಯಿತು.

ತಮ್ಮ ವ್ಯಥೆಗಿಂತಲೂ ಹೆಚ್ಚು ತಮ್ಮ ಪ್ರೇಯಸಿಯ ಮನೋವ್ಯಥೆ ಗಯಟೆಯವರಿಗೆ ಅತ್ಯಂತ ವೇದನಾಮಯವಾಗಿತ್ತು, ಸಹಿಸಲಸಾಧ್ಯವಾಗಿತ್ತು. ಅವರು ಮರ್ಮಸ್ಪರ್ಶಿ ಗೀತೆಗಳನ್ನು ಬರೆದಾಗ, ಫ್ರಾಯದೇರಿಖ್‌ಳ ಮನೋವ್ಯಥೆಯಿಂದ ಪೆಟ್ಟುತಿಂದೇ ಬರೆದರೆಂದು ನನಗನ್ನಿಸುತ್ತದೆ.

"ದ ಸಾರೋಜ್ ಆಫ್ ವರ್ಥರ್"ನ ಹಿಂದೆ ಇನ್ನೊಂದು ಪ್ರೇಮಕಾಂಡವಿದೆ. ಇದರ ಪ್ರಾರಂಭ ಇವರು ಕಾನೂನು ಶಿಕ್ಷಣವನ್ನು ಪೂರ್ಣಗೊಳಿಸಿದ ಆರು ತಿಂಗಳ ನಂತರ ನಡೆಯಿತು. ವೆಲ್ಜರ್ ಎಂಬಲ್ಲಿ ವಕಾಲತ್ತಿನ ಶಿಕ್ಷಣವನ್ನು ಪೂರ್ಣಗೊಳಿಸುವಾಗ, ಒಂದು ನೃತ್ಯದಲ್ಲಿ ಅವರಿಗೆ ಕಾರ್ಲೋಟ್ ಬಫ್ ಎಂಬ ಆಕರ್ಷಕ ಯುವತಿಯೊಂದಿಗೆ ನೃತ್ಯಿಸುವ ಅವಕಾಶ ದೊರೆಯಿತು. ಕಾರ್ಲೋಟ್ ಬಫ್‌ಳ ವಿವಾಹ ಜೋಆನ್ ಕ್ರಿಶ್ಚಿಯನ್ ಕೆಸ್ನರ್ ಎಂಬ ಯುವಕನೊಂದಿಗೆ ನಿಶ್ಚಯವಾಗಿತ್ತು. ಇದನ್ನು ಅರಿತೂ, ಗಯಟೆಯವರ 'ಪ್ರಥಮ ನೋಟದ ಪ್ರೇಮ' ಕಾರ್ಲೋಟ್‌ನೊಂದಿಗಾಯಿತು.

ಗಯಟೆ ಮತ್ತು ಕಾರ್ಲೋಟ್ ಈಗ ಪ್ರತಿದಿನಾ ಭೇಟಿಯಾಗಲಾರಂಭಿಸಿದರು. ನಿತ್ಯ ಜೊತೆ-ಜೊತೆಯಾಗಿ ತಿರುಗಾಡಲಾರಂಭಿಸಿದರು. ತನಗೆ ಕೆಲಸವಿಲ್ಲದಿದ್ದಾಗ ಕೆಸ್ನರನೂ ಅವರೊಂದಿಗೆ ಹೋಗುತ್ತಿದ್ದ. ಅವನೊಬ್ಬ ಒಳ್ಳೆಯ ವ್ಯಕ್ತಿಯಾಗಿದ್ದ. ಸಾಕಷ್ಟು ಉದಾರಿ ಮತ್ತು ಸಹನಶೀಲನೂ ಆಗಿದ್ದ. ಆದರೆ ಒಂದೊಂದು ವೇಳೆ ಕಾರ್ಲೋಟ್‌ಳ ಮತ್ತು ಗಯಟೆಯವರ ನಿಕಟತೆಯಿಂದ ತುಂಬಾ ಬೇಜಾರಾಗುತ್ತಿದ್ದ. ತನ್ನ ದಿನಚರಿಯಲ್ಲಿ ಅವನು ಅನೇಕ ಕಡೆ, ತನ್ನ ಈ ಕ್ಷೋಭೆಯನ್ನು ವ್ಯಕ್ತಪಡಿಸಿದ್ದಾನೆ.

ಅವನ ದಿನಚರಿಯ ಈ ಅಂಶ ವಿಶೇಷವಾಗಿ ಉಲ್ಲೇಖನೀಯವಾಗಿದೆ: "ಕಾರ್ಲೋಟ್ ಇಂದು ಗಯಟೆಯವರಿಗೆ ನೀವು ನನ್ನಿಂದ ಗೆಳೆತನವನ್ನು ಹೊರತುಪಡಿಸಿ ಬೇರೇನನ್ನೂ ಆಶಿಸಬಾರದೆಂದು ಮನಬಿಚ್ಚಿಹೇಳಿದಾಗ ಗಯಟೆಯವರ ಮುಖ ಕಳೆಗುಂದಿತು. ಅವರು ಖಿನ್ನರಾಗಿ ಹೊರಟುಹೋದರು."

ತಮ್ಮ ಪ್ರೇಯಸಿಯ ಜೀವನದಿಂದ ಶಾಶ್ವತವಾಗಿ ದೂರವಾಗುವ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಗಯಟೆಯವರಿಗೆ ಅದೆಷ್ಟೋ ತಿಂಗಳುಗಳು ಹಿಡಿದವು. ಪ್ರೇಮದಿಂದ ಶೂನ್ಯವಾಗಲು ಅವರಿಗೆ ಭಯವಾಗುತ್ತಿತ್ತು. ಶೂನ್ಯವಾಗುವುದಕ್ಕೆ ಬದಲು ಪ್ರೇಮದಿಂದ ದುಃಖಿಯಾಗುವುದು ಅವರಿಗೆ ಹೆಚ್ಚು ಪ್ರಿಯವಾಗಿತ್ತು. ಒಂದು ಸಂಜೆ ತಮ್ಮ ಪ್ರೇಯಸಿಯಿಂದ ದೂರವಾಗಲು ನಿಶ್ಚಯ ಮಾಡಿಕೊಂಡರು, ಆದರೆ ಬಾಯಲ್ಲಿ ಏನೂ ಹೇಳದಾದರು. ವೆಲ್ಜರ್

ಬಿಡುವಾಗ ಕಾರ್ಲೋಟ್‌ಳಿಗೆ ಒಂದು ನಿರಾಶದಾಯಕ ಪತ್ರ ಸಿಕ್ಕಿತು. ಅದನ್ನೋದಿ ಅವಳು ಅಳಲಾರಂಭಿಸಿದಳು.

ವೆಲ್ಜಾರ್‌ನಿಂದ ಗಯಟೆಯವರು ಫ್ರೆಂಕ್‌ಫರ್ಟ್‌ಗೆ ಹೋದರು. ಅಲ್ಲಿ ಅನೇಕ ವಾರಗಳಾದ ಮೇಲೆ, ಅವರೊಬ್ಬ ಪರಿಚಿತ ಯುವಕ-ಯೆರೂಶುವರ್ ಪ್ರೇಮದಲ್ಲಿ ಯಶಸ್ಸುಗಾಣದೆ ಆತ್ಮಹತ್ಯೆ ಮಾಡಿಕೊಂಡ ವಿಷಯ ತಿಳಿಯಿತು. ಅವರು ಕೆಸ್ನರ್‌ನಿಗೆ ಪತ್ರ ಬರೆದು ಈ ಪ್ರಕರಣದ ಪೂರ್ಣ ವಿವರಗಳನ್ನು ತಕ್ಷಣ ಕಳಿಸಲು ತಿಳಿಸಿದರು. ಈ ವಿವರಣೆಯೇ, ಅವರು ತಮ್ಮ ಆತ್ಮಕಥೆಯಲ್ಲಿ ಒಪ್ಪಿಕೊಂಡಂತೆ, 'ದ ಸಾರೋಜ್ ಆಫ್ ವರ್ಥರ್'' ನ ಕತೆಗೆ ಆಧಾರವಾಯಿತು.

'ದ ಸಾರೋಜ್ ಆಫ್ ವರ್ಥರ್' ಲೇಖನ ಕಾರ್ಯದ ಯೋಜನೆಯು ಅವರ ಮನಸ್ಸಿನಲ್ಲಿ ಮೂಡುತ್ತಿದ್ದಾಗ ಗಯಟೆಯವರು ತಮ್ಮನ್ನು ಮೂರನೇ ಬಾರಿ ಪ್ರೇಮದ ಬಲೆಯಲ್ಲಿ ಸಿಕ್ಕಿಸಿಕೊಂಡಿರುವ ವಿಷಯ ಮನಗಂಡರು. ಈ ಹೊಸ ಪ್ರೇಮದ ಬಗ್ಗೆ ಅವರು ಹೀಗೆ ಬರೆದಿದ್ದಾರೆ: "ಹಳೆ ಪ್ರೇಮದ ಸೂರ್ಯ ಪೂರ್ಣವಾಗಿ ಅಸ್ತವಾಗದಿದ್ದಾಗ ಹೊಸ ಪ್ರೇಮಯೋಗವೊಂದು ಮನದಲ್ಲಿ ಅಲೆಯೆಬ್ಬಿಸಿದಾಗ ತುಂಬಾ ಸುಖದ ಅನುಭವವಾಗುತ್ತದೆ. ಸೂರ್ಯಾಸ್ತದ ವೇಳೆಗೆ, ಚಂದ್ರ ಉದಯವಾಗುವುದನ್ನು ನೋಡಿದಾಗ ಎರಡು ದೀಪ್ತಿಗಳ ಪ್ರಕಾಶ ಮನಸ್ಸಿಗೆ ಅಪೂರ್ವ ಆನಂದವನ್ನೀಯುತ್ತದೆ."

ಕವಿ ಗಯಟೆಯವರ ಮನದಲ್ಲಿ ಈ ಕಾವ್ಯಮಯ ಉಪಮೆ ಹುಟ್ಟಲು ಕಾರಣಕರ್ತೆಯಾದ ಯುವತಿಯ ಹೆಸರು–ಮ್ಯಾಕ್ಸಿಮಿಲಿಯೆನ್‌ದ ಲಾರೋಶ್. ಅವಳ ತಾಯಿಗೆ ಬರೆದ ಪತ್ರವೊಂದರಲ್ಲಿ ಗಯಟೆಯವರು ಹೇಳುತ್ತಾರೆ: "ನಾನು, ನಿಮ್ಮ ಮ್ಯಾಕ್ಸಿಯಿಲ್ಲದೆ ಬದುಕಲಾರೆ. ಜೀವನವಿಡೀ ಅವಳನ್ನು ಪ್ರೇಮಿಸುತ್ತಿರುವೆ."

ಮ್ಯಾಕ್ಸ್‌ಳ ವಿವಾಹ ಪೀಟರ್ ಬ್ರೆಂಟಾನೋ ಎಂಬ ವ್ಯಾಪಾರಿಯೊಡನೆ ನಿಶ್ಚಯವಾಗಿದೆ ಎಂಬ ವಿಷಯ ಗಯಟೆಯವರಿಗೆ, ಮ್ಯಾಕ್ಸಿಯೊಡನೆ ಪ್ರೇಮಕ್ಕೆ ಮೊದಲು ತಿಳಿಯಿತೋ ಅಥವಾ ನಂತರ ತಿಳಿಯಿತೋ ಎಂಬ ವಿಷಯವಂತೂ ನನಗೆ ಗೊತ್ತಿಲ್ಲ, ಆದರೆ, ಮ್ಯಾಕ್ಸಿಯ ವಿವಾಹವಾದ ಮೇಲೂ ಗಯಟೆಯವರು ಅವಳೊಂದಿಗೆ ಅನೇಕ ಮಧುರ ಕ್ಷಣಗಳನ್ನು ಕಳೆದರು ಎಂಬ ವಿಷಯವಂತೂ ಸರ್ವವಿದಿತ. ಆದರೆ, ಬ್ರೆಂಟಾನೋ ಕೆಸ್ನರನ ಹಾಗೆ ಉದಾರಿಯಾಗಿರಲಿಲ್ಲ. ಶೀಘ್ರವೇ ಮ್ಯಾಕ್ಸಿಯ ಮನೆಗೆ ಗಯಟೆಯವರು ಬರದಂತೆ ಕಟ್ಟಪ್ಪಣೆ ಮಾಡಿದ.

ನೂರು ವರ್ಷಗಳಿಗೂ ಮೊದಲು, ಜಾರ್ಜ್ ಹೆನರಿ ಲೇವಿಸ್‌ನು ಗಯಟೆಯ

ಒಂದು ರೋಮಾಂಚಕಾರಿ ಜೀವನ ಕಥೆಯನ್ನು ಬರೆದಿದ್ದ. 'ಪ್ರೇಮದಲ್ಲಿ ಅಸಫಲರಾದ ಮೇಲೆ ಗಯಟೆಯವರು ಅನೇಕ ಬಾರಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಆಟವಾಡಿದ್ದರು' ಎಂದು ಅದರಲ್ಲಿ ಅವನು ಬರೆದಿದ್ದಾನೆ. 'ಆಟ'ವೆಂಬ ಶಬ್ದ ಅವನದ್ದು, ನನ್ನದಲ್ಲವೆನ್ನುವುದು ಗಮನದಲ್ಲಿರಲಿ. ಹಾಗಂತ, ಈ ಶಬ್ದ ನನಗೆ ಸಾಕಷ್ಟು ಉಪಯುಕ್ತವಾಗಿದೆಯೆಂದು ನನಗನ್ನಿಸುತ್ತದೆ.

ಈ ಜೀವನ-ಚರಿತ್ರೆ ಪ್ರಕಟಗೊಂಡ ಐವತ್ತು ವರ್ಷಗಳ ನಂತರ ಗಯಟೆಯವರು ತಮ್ಮ ಆತ್ಮಕಥೆಯನ್ನು ಬರೆದರು. ಪ್ರೇಮದ ಯಾತನೆಯು ತಮಗೆ ಅನೇಕಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ವಿವಶಗೊಳಿಸಿತು, ಆತ್ಮಹತ್ಯೆಯ ಹಂಬಲದಿಂದ ಪಾರಾಗಲು ನಾವೆಷ್ಟು ಘೋರ ಪ್ರಯಾಸ ಮಾಡಬೇಕಾಯಿತು ಎಂಬುದನ್ನು ನನ್ನ ಹೊರತು ಬೇರ್ಯಾರಿಗೂ ತಿಳಿದಿಲ್ಲ ಎಂದು ತಮ್ಮ ಆತ್ಮಕಥೆಯಲ್ಲಿ ಗಯಟೆ ಒಪ್ಪಿಕೊಂಡಿದ್ದಾರೆ.

'ದ ಸಾರೋಜ್ ಆಫ್ ವರ್ಥರ್'ನ ಸೃಜನಾತ್ಮಕ ಪ್ರಕ್ರಿಯೆಯ ಬಗ್ಗೆ ತಮ್ಮ ಆತ್ಮಕಥೆಯಲ್ಲಿ ಏನು ಬರೆದಿದ್ದಾರೋ ಅದರಿಂದ ಈ ವಿಷಯ ಸ್ಪಷ್ಟವಾಗುತ್ತದೆ : ಕಾದಂಬರಿಯ ಸಾರ, ಕಾರ್ಲೋಟ್‌ಬಫ್‌ಳ ಬಗ್ಗೆ ಅವರ ದುಃಖಭರಿತ ಪ್ರೇಮ ಮತ್ತು ಯೆರೂಶುಮ್‌ನ ಆತ್ಮಹತ್ಯೆ, ಈ ಎರಡು ತೀವ್ರ ಮತ್ತು ಪ್ರಗಾಢ ಅನುಭವಗಳ ಕುಶಲ ಸಂಯೋಜನೆಯ ಮೇಲೆ ಆಧಾರಿತವಾಗಿದೆ. ಕಾದಂಬರಿಯ ಪ್ರಥಮ ಭಾಗದಲ್ಲಿ, ವಾಸ್ತವವಾಗಿ, ಗಯಟೆ ಮತ್ತು ಕಾರ್ಲೋಟ್‌ರ ಪ್ರೇಮ-ಪ್ರಸಂಗಗಳ ತಥ್ಯಾತ್ಮಕ ವರ್ಣನೆಯಿದೆ. ಇದರಲ್ಲಿ ಗಯಟೆಯವರು, ಕಾದಂಬರಿಯ ನಾಯಕ ವರ್ಥರನಿಗೆ ತಮ್ಮದೇ ಸೌಮ್ಯತೆ, ಪ್ರೇಮದ ಪ್ರಗಾಢತೆ ಮತ್ತು ಸಹಜತೆಯನ್ನು ಕರುಣಿಸಿದ್ದಾರೆ. ವಾಸ್ತವಿಕತೆಯೇನೆಂದರೆ, ಅವರು ವರ್ಥರ್‌ನ ಮಾಧ್ಯಮದಿಂದ ತುಂಬಾ ಚಿತ್ತಾಕರ್ಷಕವಾಗಿ ತಮ್ಮ ಸ್ವ-ಚಿತ್ರವನ್ನೇ ಮಾಡಿದ್ದಾರೆ.

ಕಾರ್ಲೋಟ್ ಮತ್ತು ಅವಳ ಪತಿಯ ಚಿತ್ರಣವೂ ಪಾಠಕರ ಮನಸ್ಸಿನಲ್ಲಿ ಸಹಾನುಭೂತಿಯನ್ನು ಹುಟ್ಟಿಸುತ್ತದೆ. ಕಾರ್ಲೋಟ್‌ಳ ಪಾತ್ರದಲ್ಲಿ ಗಯಟೆಯವರು ತಮ್ಮ ಆದರ್ಶ ಪ್ರೇಯಸಿಯ ಚಿತ್ರವನ್ನು—ಸುಂದರ, ಕೋಮಲ, ಸದಯ ಹಾಗೂ ಸಂವೇದನಾಶೀಲ ಪ್ರೇಯಸಿಯ ಚಿತ್ರವನ್ನು—ಪ್ರಸ್ತುತಪಡಿಸಿದ್ದಾರೆ.

ಕಾದಂಬರಿಯ ಮೊದಲ ಭಾಗ ಆತ್ಮಕಥಾತ್ಮವಾಗಿದೆ. ಆತ್ಮಕಥಾತ್ಮಕ ಕಾದಂಬರಿಗಳ ದೊಡ್ಡ ದೋಷವೆಂದರೆ, ಅವುಗಳಲ್ಲಿ ಬರುವ ವಿಖ್ಯಾತತತ್ವಗಳನ್ನು

ಗಮನಿಸಲು ಕಾದಂಬರಿಕಾರನಿಗೆ ಅಸಾಧ್ಯವಾಗುತ್ತದೆ.

ಗಯಟೆಯುವರ ಜೀವನ ಚರಿತ್ರೆಯಿಂದ, ಪ್ರೇಮದಲ್ಲಿ ನಿರಾಸೆ, ಪಶ್ಚಾತ್ತಾಪ ಮತ್ತು ಉದಾಸೀನತೆಗಳ ಕ್ಷಣಗಳಲ್ಲಿ ಅವರು ಕವಿತೆಗಳನ್ನು ಬರೆಯುತ್ತಿದ್ದರು ಇಲ್ಲವೇ ಯುವತಿಯೋರ್ವಳನ್ನು ಪ್ರೀತಿಸಲು ಪ್ರಾರಂಭಿಸುತ್ತಿದ್ದರೆಂಬ ವಿಷಯ ತಿಳಿದುಬರುತ್ತದೆ. ಸುಂದರ ಯುವತಿಯನ್ನು ಕಂಡೊಡನೆಯೇ ಪ್ರಥಮ ನೋಟದಲ್ಲೇ ಪ್ರೇಮವುಂಟಾಗುತ್ತಿತ್ತು. ಆದರೆ ಮೇಲುನೋಟದಲ್ಲಿ ಪ್ರೇಮಿಸು ವಾಗಲೂ ಅವರು ತಮ್ಮ ಮನಸ್ಸಿನಲ್ಲಿ ಮುಂಬರುವ ಕವಿತೆಗಳು, ನಾಟಕಗಳು ಮತ್ತು ಕಥೆಗಳನ್ನು ಕಲ್ಪಿಸಿಕೊಳ್ಳುತ್ತಿದ್ದರು ಎಂಬ ವಿಷಯ ತುಂಬಾ ಕುತೂಹಲ ಕಾರಿಯಾಗಿದೆ. ಆದರೆ, ವರ್ಥರನ್ನು ಚಿತ್ರಿಸುವಾಗ ಗಯಟೆಯುವರಿಗೆ, ಅವನನ್ನು ಈ ವಿಶೇಷತೆಯಿಂದ ತುಂಬಲಾಗಲಿಲ್ಲ.

ವರ್ಥರ್‌ನ ಚರಿತ್ರೆಯ ಈ ಅನನುರೂಪತೆಯು ಕಾದಂಬರಿಯ ಎರಡನೆ ಭಾಗದಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಭಾಗ ಪೂರ್ಣವಾಗಿ ಕಾಲ್ಪನಿಕ, ಮತ್ತು ಇದರ ವರ್ಥರ್ ಮೊದಲ ಭಾಗದಲ್ಲಿನ ವರ್ಥರ್‌ನಿಗಿಂತ ಭಿನ್ನ. ಈ ತಥ್ಯದ ಪುಷ್ಟೀಕರಣವನ್ನು ಸ್ವತಃ ಗಯಟೆಯುವರ ತಾಯಿಯವರು ಒಂದು ಸಂದರ್ಶನದಲ್ಲಿ ವ್ಯಕ್ತಪಡಿಸಿದ್ದಾರೆ.

ವರ್ಥರ್‌ನ ಆತ್ಮಹತ್ಯೆಗೆ ಸಂಬಂಧಿಸಿದ ಅಂತಿಮ ಪುಟವು ಕಾದಂಬರಿಯ ಪಾಠಕರ ಮನಸ್ಸನ್ನು ಅಲುಗಾಡಿಸುತ್ತದೆ.

ಕಾದಂಬರಿಯ ಅಭೂತಪೂರ್ವ ಯಶಸ್ಸನ್ನು ಕಂಡು ಕಾರ್ಲೋಟ್ ಮತ್ತು ಕೆಸ್ನರ್-ಈ ಇಬ್ಬರು ಮಾತ್ರ ತುಂಬಾ ಸಿಟ್ಟಾಗಿದ್ದರು. ಕಾದಂಬರಿಯ ಕಾರ್ಲೋಟ್ ಕಡೆಯವರೆಗೂ ಕಾದಂಬರಿಯ ನಾಯಕನನ್ನು ಪ್ರೇಮಿಸು ವುದು ಮತ್ತು ತಾನು ಮಾತ್ರ ಓರ್ವ ಮೂರ್ಖ ಹಾಗೂ ಅಯೋಗ್ಯಪತಿ ಯಾಗಿರುವುದನ್ನು—ಈ ಚಿತ್ರಣದಿಂದ ಕೆಸ್ನರ್‌ನಿಗೆ ತುಂಬಾ ವಿಷಾದವಾಗಿತ್ತು. ಕೆಸ್ನರ್, ಗಯಟೆಯುವರಿಗೊಂದು ಪತ್ರ ಬರೆದು ತನ್ನ ಈ ಪಾತ್ರ-ಚಿತ್ರಣದ ಬಗ್ಗೆ ಕಠೋರವಾಗಿ ವಿರೋಧಿಸಿ, ಆಕ್ಷೇಪಣೆ ಎತ್ತಿದ್ದ. ಉತ್ತರದಲ್ಲಿ ಗಯಟೆ ಯುವರು ತುಂಬಾ ಒರಟಾಗಿ ಈ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ದ್ದರು: "ದೇವರ ಕರುಣೆ ನಿನ್ನ ಮೇಲಿರಲಿ! ನಿನಗೆ, ಕಾದಂಬರಿಯ ಸಾವಿರಾರು ಪಾಠಕರಿಗಿರುವಂತೆ ವರ್ಥರ ಬಗ್ಗೆ ಆದರ ಮತ್ತು ಸಹಾನುಭೂತಿಯ ಒಂದಂಶ ವಾದರೂ ಇದ್ದಿದ್ದರೆ, ನೀನು ನಿನ್ನ ಪುಕಾರನ್ನು ಮರೆಯುತ್ತಿದ್ದೆ!"

'ದ ಸಾರೋಜ್ ಆಫ್ ವರ್ಥರ್‌ಗೆ' ವೈಭವಭರಿತ ಯಶಸ್ಸು ಸಿಗಲು

ಮತ್ತೊಂದು ಕಾರಣವೇನೆಂದರೆ, ಆಗ ಜರ್ಮನ್ ಪಾಠಕರು ರೊಮ್ಯಾಂಟಿಕ್ ಸಾಹಿತ್ಯವನ್ನು ತುಂಬಾ ಭಾವನಾತ್ಮಕವಾಗಿ ತೆಗೆದುಕೊಳ್ಳುತ್ತಿದ್ದರು. ಹೀಗಾಗಿಯೇ ರಷ್ಯಾದ ರೊಮ್ಯಾಂಟಿಕ್ ರಚನೆಗಳ ಅನುವಾದಗಳೂ ತುಂಬಾ ಜನಪ್ರಿಯವಾಗಿದ್ದವು. ಅವರು ಪ್ರೇಮ ಮತ್ತು ಸಂವೇದನೆಯನ್ನು "ಸುಂದರ ಆತ್ಮಗಳ ಆಭೂಷಣೆಗಳು" ಎಂದು ನಂಬುತ್ತಿದ್ದರು.

ಸಾಹಿತಿಯ ರೂಪದಲ್ಲಿ ಗಯಟೆಯವರಿಗೆ ಈ ಕಾದಂಬರಿಯಿಂದಲೇ ಕೀರ್ತಿ ಸಿಕ್ಕಿತು. ಇದರ ನಂತರ ಅವರು ಬರೆದಿದ್ದೆಲ್ಲವನ್ನೂ 'ದ ಸಾರೋಜ್ ಆಫ್ ವರ್ಥರ್' ಲೇಖಕನ ಇನ್ನೊಂದು ಕೃತಿಯ ರೂಪದಲ್ಲಿ ಓದಲಾಗುತ್ತಿತ್ತು.

ಡಿ. ಎನ್. ಶ್ರೀನಾಥ್



ಯಾವುದೇ ಕೆಲಸ ಮಾಡುವ ಮುನ್ನ ಆಳವಾಗಿ ಆಲೋಚಿಸುವವನು, ಗಡಿಬಿಡಿಯಿಂದ ಹಾಗೂ ತಾತ್ಕಾಲಿಕವಾಗಿ ಹುರುಪಿನಿಂದ ಕೆಲಸ ಮಾಡುವವನಿಗಿಂತ ಹೆಚ್ಚು ಬುದ್ಧಿವಂತಿಕೆಯಿಂದ ಆ ಕೆಲಸ ಮಾಡುತ್ತಾನೆ.

—ಸಿ. ಸಿಮನ್ಸ್

ಅಂಜುಗುಳಿಯು ಅಪಾಯ ಬರುವ ಮೊದಲೇ ಹೆದರುತ್ತಾನೆ; ಪುಕ್ಕನು ಅದು ಎದುರಾದಾಗ ಹೆದರುತ್ತಾನೆ. ಧೈರ್ಯಶಾಲಿಯು ಅದರ ನಂತರ, ಪರಿಣಾಮಗಳನ್ನು ಯೋಚಿಸಿ ಭಯಪಡುತ್ತಾನೆ.

—ರಿಶ್ಚರ್

ಸಹ ಪ್ರಯಾಣಿಕಳು

ರೈಲು ಪ್ರಯಾಣ ಮಾಡುತ್ತಿದ್ದಾಗ ರೋಹನಾವರೆಗೆ ಬೋಗಿಗೆಲ್ಲಾ ನಾನೊಬ್ಬನೇ ಆಗಿದ್ದೆ. ಒಬ್ಬ ಹುಡುಗಿ ಬೋಗಿಗೆ ಹತ್ತಿದಳು. ಬೀಳ್ಕೊಡಲು ಬಂದಿದ್ದವರು ಅವಳ ತಾಯಿ ತಂದೆ ಇರಬೇಕೆನಿಸಿತು. ಅವಳ ಸೌಕರ್ಯದತ್ತ ಅವರು ಬಹಳ ಮುತುವರ್ಜಿ ವ್ಯಕ್ತಪಡಿಸಿದರು. ಅವಳು ಸಾಮಾನುಗಳನ್ನು ಎಲ್ಲಿ ಇರಿಸಿಕೊಳ್ಳಬೇಕು ಎಂಬುದನ್ನು ಆ ಹೆಂಗಸು ತಿಳಿಯಹೇಳಿದರು. ಕಿಟಕಿಯಿಂದ ತಲೆ ಹೊರಕ್ಕೆ ಹಾಕಬಾರದು, ಹೊಸಬರ ಬಳಿ ಹೆಚ್ಚು ಮಾತಿಗೆ ಹೋಗಬೇಡ ಎಂದೆಲ್ಲಾ ಹೇಳುತ್ತಿದ್ದರು.

ನಾನೊಬ್ಬ ಕುರುಡ. ಅವಳು ನೋಡಲು ಹೇಗಿದ್ದಾಳೆಂಬುದನ್ನು ನಾನು ಹೇಳುವಂತಿಲ್ಲ. ಹಿಮ್ಮಡಿಗೆ ತಗುಲಿದಾಗ ಶಬ್ದವಾಗುತ್ತಿದ್ದುದರಿಂದ ಅವಳು ಚಪ್ಪಲಿ ಹಾಕಿಕೊಂಡಿದ್ದಾಳೆಂಬುದು ನನಗರ್ಥವಾಯಿತು. ಅವಳ ಧ್ವನಿ ನನಗೆ ಇಷ್ಟವಾಯಿತು.

ರೈಲು ನಿಲ್ದಾಣದಿಂದ ಹೊರಟಿತ್ತು.

"ನೀವು ಡೆಹರಾಡೂನ್‌ವರೆಗೂ ಪ್ರಯಾಣ ಮಾಡುತ್ತಿದೀರಾ?" ನಾನು ಅವಳನ್ನು ಕೇಳಿದೆ.

ನಾನೆಲ್ಲೋ ಕತ್ತಲೆಯ ಮೂಲೆಯೊಂದರಲ್ಲಿ ಕುಳಿತಿದ್ದೆನೆಂದು ಕಾಣುತ್ತದೆ. ನನ್ನ ಧ್ವನಿ ಅವಳನ್ನು ಚಕಿತಗೊಳಿಸಿತು. ಆಶ್ಚರ್ಯದಿಂದ ಉದ್ಗರಿಸಿ.

"ಬೇರೆಯವರು ಗಾಡಿಯಲ್ಲಿದ್ದಾರೆಂಬುದು ನನಗೆ ಗೊತ್ತಿರಲಿಲ್ಲ" ಎಂದಳು.

ಕಣ್ಣಿನ ದೃಷ್ಟಿಪಾಟ ಚೆನ್ನಾಗಿರುವವರಿಗೇ ಎಷ್ಟೋ ಸಲ ಕಣ್ಣ ಮುಂದಿರುವುದು ಕಾಣಿಸುವುದಿಲ್ಲ. ಅವರು ನೋಡುವಂಥದು ಬಹಳಷ್ಟು ಇರುತ್ತದೆ. ಕುರುಡರ ವಿಚಾರವೇ ಬೇರೆ. ಕಣ್ಣಿಲ್ಲದ ಅವರು ಇತರ ಅಂಗಗಳು ನಿರ್ದೇಶಿಸುವುದಷ್ಟನ್ನು ಮಾತ್ರಗ್ರಹಿಸಬಲ್ಲರು.

"ನಾನೂ ನಿಮ್ಮನ್ನು ಮೊದಲಿಗೆ ನೋಡಲಿಲ್ಲ. ನೀವು ಬಂದದ್ದು ಸದ್ದಿನಿಂದ ತಿಳಿಯಿತು." ನಾನು ಹೇಳಿದೆ. ನನಗೆ ಕಣ್ಣು ಕಾಣಿಸುವುದಿಲ್ಲವೆಂಬುದು ಅವಳಿಗೆ ತಿಳಿಯಗೊಡಬಾರದೆಂದು ನನ್ನ ಮನೀಷೆ. ಇದರಲ್ಲಿ ಎಷ್ಟರಮಟ್ಟಿಗೆ ಸಫಲನಾಗು

೧೯೮೩ ಮೇ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ "ದಿ ಗರ್ಲ್ ಅನ್ ದಿ ಟ್ರೇನ್" ಎಂಬ ಲೇಖನದ ಅನುವಾದ.

ವೆನೋ ಅರಿಯೆ. ನನ್ನ ಸೀಟಿಗೇ ಅಂಟಿಕೊಂಡರೆ ಅದು ಅಷ್ಟು ಕಷ್ಟವಾಗದೆನಿಸಿತು.

"ನಾನು ಷಹರಾನ್‌ಪುರದಲ್ಲಿ ಇಳಿಯುವವಳು." ಹುಡುಗಿ ಮಾತಿಗಾರಂಭಿಸಿದಳು. "ಅತ್ತೆ ಸ್ಟೇಷನ್ನಿಗೆ ಬಂದಿರುತ್ತಾರೆ. ನೀವು ಎಲ್ಲಿಗೆ ಹೊರಟಿದ್ದೀರಿ?"

"ಡೆಹರಾಡೂನಿಗೆ. ಅಲ್ಲಿಂದ ಮಸ್ಸೂರಿಗೆ ಹೋಗ್ತೇನೆ" ನಾನು ಉತ್ತರಿಸಿದೆ.

"ಎಂಥ ಅದೃಷ್ಟವಂತರು ನೀವು? ನನಗೂ ಮಸ್ಸೂರಿಗೆ ಹೋಗಲು ಆಸೆಯಿದೆ. ಪರ್ವತಗಳೆಂದರೆ ನನಗೆ ತುಂಬಾ ಮೆಚ್ಚುಗೆ, ಅಕ್ಟೋಬರ್‌ನಲ್ಲಂತೂ ಅಪೂರ್ವವಾಗಿರುತ್ತೆ".

"ಹೌದು, ಇದೇ ಸಕಾಲ." ಕಣ್ಣು ಕಾಣಿಸುತ್ತಿದ್ದ ದಿನಗಳ ನೆನಪು ಮಾಡಿಕೊಳ್ಳುತ್ತಾ ಹೇಳಿದೆ. ಬೆಟ್ಟಗಳೆಲ್ಲಾ ಕಾಡುಡೇಲಿಯಾಗಳಿಂದ ತುಂಬಿ ಹೋಗಿರುತ್ತೆ. ಸೂರ್ಯ ಅದ್ಭುತ! ರಾತ್ರಿ ಬೆಂಕಿಯ ಮುಂದೆ ಕುಳಿತು ಕೊಂಚ ಬ್ರಾಂದಿ ಕುಡಿಯಬಹುದು, ಪ್ರವಾಸಿಗಳಲ್ಲಿ ಬಹುತೇಕಮಂದಿ ಹೊರಟು ಹೋಗಿರುತ್ತಾರೆ. ರಸ್ತೆಗಳಲ್ಲಿ ಗಲಾಟೆ ಇರೋಲ್ಲ. ಹೆಚ್ಚುಕಮ್ಮಿ ನಿರ್ಜನವಾಗಿರುತ್ತೆ."

ಅವಳು ಮೌನವಾಗಿದ್ದಳು. ನನ್ನ ಮಾತುಗಳು ಅವಳ ಮನಸ್ಸನ್ನು ತಟ್ಟಿರಬಹುದೆ? ಅಥವಾ ನನ್ನನ್ನು ಮೂರ್ಖ ಪ್ರಣಯಿ ಎಂದುಕೊಂಡಳೊ? ಆಗ ನಾನೊಂದು ತಪ್ಪು ಮಾಡಿಬಿಟ್ಟೆ.

"ಹೊರಗಡೆ ಹೇಗಿದೆ?" ಪ್ರಶ್ನೆ ಕೇಳಿದೆ.

ಅವಳಿಗೆ ಪ್ರಶ್ನೆ ವಿಚಿತ್ರವೆನಿಸಲಿಲ್ಲ. ಅವಳೇನಾದರೂ ನಾನು ನೋಡಲಾರೆನೆಂಬುದನ್ನು ಕಂಡುಕೊಂಡಿದ್ದಾಳೊ? ಅವಳ ಮುಂದಿನ ಪ್ರಶ್ನೆ ನನ್ನ ಅನುಮಾನವನ್ನು ಬಡಿದೋಡಿಸಿತು.

"ನೀವೇ ಏಕೆ ಕಿಟಕಿಯಿಂದಾಚೆ ನೋಡಬಾರದು?" ಅವಳು ಕೇಳಿದ್ದು ಸಹಜವಾಗಿತ್ತು.

ನಾನು ಕುಳಿತಿದ್ದೆಡೆಯಿಂದ ನಿಧಾನವಾಗಿ ಸರಿದು ಕಿಟಕಿಯ ಅಂಚು ಹಿಡಿದುಕೊಂಡೆ, ಕಿಟಕಿ ತೆರದಿತ್ತಾಗಿ ಅತ್ತ ಮುಖ ಮಾಡಿಕೊಂಡು ನಾನು ಪ್ರಕೃತಿಯನ್ನು ವಿಮರ್ಶಾದೃಷ್ಟಿಯಿಂದ ನೋಡುತ್ತಿರುವಂತೆ ನಟಿಸಿದೆ.

ನನ್ನ ಮನಸ್ಸಿನ ಕಣ್ಣೆದುರು ಟೆಲಿಗ್ರಾಫ್ ಕಂಬಗಳು ವೇಗವಾಗಿ ಹಾದು ಹೋಗುತ್ತಿರುವಂತೆ ಭಾಸವಾಯಿತು.

"ಮರಗಳು ಚಲಿಸುತ್ತಿರುವಂತೆಯೂ ನಾವು ಇದ್ದಲ್ಲೇ ಇರುವಂತೆಯೂ ಕಾಣಿಸುವುದನ್ನು ನೀವು ಗಮನಿಸಿದ್ದೀರಾ?"

"ಅದು ಯಾವಾಗಲೂ ಹಾಗೆಯೇ"

ನಾನು ಕಿಟಕಿಯಿಂದ ನೋಡುವುದನ್ನು ಬಿಟ್ಟು ಹುಡುಗಿಯ ಕಡೆ ಮುಖ ಮಾಡಿ ಕುಳಿತೆ. ನಾವು ಕೆಲವು ಕಾಲ ಸುಮ್ಮನೆ ಕುಳಿತಿದ್ದೆವು.

"ನಿಮ್ಮ ಮುಖ ಇಂಟರೆಸ್ಟಿಂಗಾಗಿದೆ."

ನಾನು ಮಾತು ಬೆಳೆಸಿದೆ. ನಾನು ಹುಚ್ಚು ಧೈರ್ಯ ಮಾಡಿದ್ದೆ. ಏನೆಂದರೂ ಮಾತು ಮೇರೆಯೊಳಗಿತ್ತು. ಕೆಲವು ಹುಡುಗಿಯರು ಮಾತ್ರ ಹೊಗಳಿಕೆಗೆ ಮಾರುಹೋಗರು.

ಹುಡುಗಿ ಹಿತವಾಗಿ ನಕ್ಕಳು. ನಗು ಶುಭ್ರ, ನಿನದಿತ.

"ಆ ತರಹ ಹೇಳಿದರೆ ಸೊಗಸಾಗಿರುತ್ತದೆ. ಆದರೆ ಜನ ನನ್ನ ಮುಖ ಅಂದ ವಾಗಿದೆ. ಎಂದು ಹೇಳುವುದನ್ನು ಕೇಳಿಕೇಳಿ ಸುಸ್ತಾಗಿಬಿಟ್ಟಿದೀನಿ."

"ಓ....ನಿನಗೆ ಅಂದವಾದ ಮುಖ ಖಂಡಿತ ಇದೆ" ಎಂದು ನಾನು ಮನದ ಲ್ಲಂದುಕೊಂಡೆ. ಬಹಿರಂಗವಾಗಿ—

ಇಂಟರೆಸ್ಟಿಂಗಾಗಿರುವ ಮುಖ ಅಂದವಾಗಿಯೂ ಇರಲು ಸಾಧ್ಯ" ಎಂದೆ.

"ನೀವು ಬಲು ಸಭ್ಯರು. ಆದರೆ ನೀವೇಕೆ ಇಷ್ಟೊಂದು ಗಂಭೀರ?"

ಹಠಾತ್ತನೆ ನಾನು—

"ನಾವು ಇನ್ನೇನು ನಿಮ್ಮ ಸ್ಟೇಷನ್ ತಲುಪಿಬಿಡುತ್ತೇವೆ" ಎಂದು ಹೇಳಿದೆ.

"ದೇವರದಯ ಪ್ರಯಾಣ ಅಲ್ಪ ಕಾಲದ್ದು. ಎರಡು ಅಥವಾ ಮೂರು ಗಂಟೆ ಗಿಂತ ಹೆಚ್ಚು ಕಾಲ ರೈಲಿನಲ್ಲಿ ಪ್ರಯಾಣ ಮಾಡುವುದು ನನ್ನಿಂದ ಸಾಧ್ಯವಿಲ್ಲ."

ನಾನೇನೊ ಅವಳ ಮಾತು ಕೇಳುತ್ತಾ ಅಲ್ಲಿ ಎಷ್ಟು ಸಮಯ ಬೇಕಾದರೂ ಕಳೆಯಲು ಸಿದ್ಧನಾಗಿದ್ದೆ. ಅವಳ ಧ್ವನಿ ಬೆಟ್ಟದ ಝರಿಯಂತೆ ನಿರ್ಮಲ ವಾಗಿತ್ತು. ಅವಳೇನೋ ರೈಲಿನಿಂದ ಇಳಿದ ಮೇಲೆ ನಮ್ಮ ಈ ಅಲ್ಪ ಅವಧಿಯ ಭೇಟಿಯನ್ನು ಮರೆತು ಬಿಡುವಳು. ಆದರೆ ಪ್ರಯಾಣದ ಉಳಿದ ಸಮಯ ಅದು ನನ್ನ ನೆನಪಿನಲ್ಲಿರುತ್ತದೆ; ಅಷ್ಟೇ ಅಲ್ಲ ಅನಂತರ ಸ್ವಲ್ಪ ಸಮಯ ಕೂಡಾ.

ರೈಲಿನ ಸಿಳ್ಳೆ ಕೀರಲಾಗಿ ಹೊಮ್ಮಿತು. ಚಕ್ರದ ಸದ್ದು, ಲಯಬದ್ಧವಾಯಿತು. ಹುಡುಗಿ ತನ್ನ ಸಾಮಾನುಗಳನ್ನು ಶೇಖರಿಸಿಕೊಳ್ಳಲು ಎದ್ದು ನಿಂತಳು. ಹುಡುಗಿ ಹೆರಳು ಹಾಕಿದ್ದಾಳೋ, ಸುಮ್ಮನೆ ಕೂದಲು ಇಳಿಬಿಟ್ಟಿದ್ದಾಳೋ ಅಥವಾ ಚಿಕ್ಕದಾಗಿ ಕತ್ತರಿಸಿಕೊಂಡಿದ್ದಾಳೋ ನನಗೆ ಗೊತ್ತಾಗುವಂತಿರಲಿಲ್ಲ.

ರೈಲು ಸಾವಕಾಶವಾಗಿ ಸ್ಟೇಷನ್ನು ತಲುಪಿತು. ಹೊರಗೆ ಪೋರ್ಟರುಗಳ ಕೂಗಾಟ, ಮಾರಾಟಗಾರರ ಗದ್ದಲವಲ್ಲದೆ ನನ್ನ ಗಾಡಿಯ ಬಾಗಿಲಲ್ಲಿ ಎತ್ತರದ ಧ್ವನಿ–ಬಹುಶಃ ಹುಡುಗಿಯ ಅತ್ತೆಯದಿರಬೇಕು–ಕೇಳಿ ಬಂದುವು.

"ಗುಡ್ ಬೈ" ಎಂದಳವಳು. ಅವಳ ಕೂದಲಿನಿಂದ ಹರಿದು ಬಂದ ಪರಿಮಳ ಕಚಗುಳಿ ಇಡುವಷ್ಟು ಹತ್ತಿರ ಅವಳು ನಿಂತಿದ್ದಳು. ನನಗೆ ಕೈ ಎತ್ತಿ ಅವಳ ಕೂದಲನ್ನು ನೇವರಿಸಬೇಕೆನಿಸಿತು. ಆದರೆ ಅವಳು ಮುಂದಕ್ಕೆ ನಡೆದಿದ್ದಳು. ಆದರೂ ಅವಳು ನಿಂತಿದ್ದ ಸ್ಥಳದಲ್ಲಿ ಸುಗಂಧ ಇನ್ನೂ ಸುಳಿದಾಡುತ್ತಿತ್ತು.

ಬಾಗಿಲಲ್ಲಿ ಏನೋ ಗೊಂದಲವಾಗಿತ್ತು. ಬೋಗಿಗೆ ಹತ್ತುತ್ತಿದ್ದ ವ್ಯಕ್ತಿ ಗಡಿಬಿಡಿಯಿಂದ ಕ್ಷಮೆ ಕೋರಿದರು. ಧಡಾರನೆ ಬಾಗಿಲು ಹಾಕಿ ಬಿಟ್ಟರು. ಹೊರಗಿನ ಪ್ರಪಂಚ ಮುಚ್ಚಿಹೋಯಿತು, ನಾನು ನನ್ನ ಜಾಗಕ್ಕೆ ಮತ್ತೆ ಮರಳಿದೆ. ಗಾರ್ಡ್ ಶೀಟಿ ಊದಿದ. ರೈಲು ಚಲಿಸಲಾರಂಭಿಸಿತು.

ರೈಲು ವೇಗ ಹೆಚ್ಚಿಸಿಕೊಳ್ಳುತ್ತಿತ್ತು. ಚಕ್ರಗಳು ಮತ್ತೆ ಸಂಗೀತ ಆರಂಭಿಸಿದುವು. ಬೋಗಿ ನರಳಿತು, ನಡುಗಿತು. ಕಿಟಕಿ ಇದ್ದ ಸ್ಥಳ ಪತ್ತೆ ಹಚ್ಚಿ ಅದರೆದುರು ಕುಳಿತೆ. ನನ್ನೆದುರು ಬೆಳಗಿನ ಬೆಳಕು ಹರಡಿದ್ದರೂ ನನ್ನ ಭಾಗಕ್ಕದು ಕತ್ತಲಾಗಿತ್ತು. ಮತ್ತೆ ನಾನು ಆಡಬೇಕಾದ ಆಟವಿತ್ತು. ಹೊಸಬ ಸಹ ಪ್ರಯಾಣಿಕನಿದ್ದ.

"ಕ್ಷಮಿಸಿ, ಈಗ ತಾನೆ ಇಲ್ಲಿಂದ ಹೊರಟ ಸಹ ಪ್ರಯಾಣಿಕಳಷ್ಟು ನಾನು ಆಕರ್ಷಕ ಸಹಚರನಲ್ಲ" ಆತ ಮಾತಿಗಾರಂಭಿಸಿದರು.

"ಆ ಹುಡುಗಿ ಇಂಟರೆಸ್ಟಿಂಗ್ ಆಗಿದ್ದಳು. ಅವಳ ಕೂದಲು ಉದ್ದವಾಗಿತ್ತೋ ಅಥವಾ ಕುಳ್ಳಾಗಿದ್ದಿತೋ ಹೇಳಬಲ್ಲಿರಾ?"

"ನನಗೆ ನೆನಪಾಗುತ್ತಿಲ್ಲ. ನಾನು ಗಮನಿಸಿದ್ದು ಅವಳ ಕಣ್ಣುಗಳು ಅದೆಷ್ಟು ಸುಂದರವಾಗಿದ್ದುವು! ಆದರೆ ಅವು ಅವಳಿಗೇನೂ ಉಪಯೋಗವಿಲ್ಲ. ಆಕೆ ಪೂರ್ಣಕುರುಡಿ, ನೀವು ಅದನ್ನು ಗಮನಿಸಲಿಲ್ಲವೆ?"

ಎಂ. ಎನ್. ಸುಮಿತ್ರಾ

ಸೊಕ್ಕು ರಕ್ತಸತಸದ ಪರಮ ಪಾಪವಾಗಿದೆ.

—ಇ. ಎಚ್. ಚಾವೆನ್

ಜಿಪ್ಸಿ ಜನ ಮತ್ತು ಅವರ ಭಾಷೆ

ಪ್ರಪಂಚದಲ್ಲಿಯ ಹಲವಾರು ಅಲೆಮಾರಿ ವರ್ಗಗಳ ಪೈಕಿ ಜಿಪ್ಸಿಯೂ ಒಂದು. ಈ ವರ್ಗದ ಜನ ತಮ್ಮನ್ನು ರೋಮನಿ ಅಥವಾ ರಾಮನಿ ಎಂದು ಕರೆದು ಕೊಳ್ಳುವುದರಿಂದ ಅವರು ಮಾತನಾಡುವ ಭಾಷೆಗೂ ಅದೇ ಹೆಸರು ಬಂದಿದೆ. ಸ್ವೀಡನ್, ಜರ್ಮನಿ, ಸ್ಪೇನ್, ಇಂಗ್ಲೆಂಡ್, ಫ್ರಾನ್ಸ್, ಜೆಕೊಸ್ಲಾವಾಕಿಯ, ಹಂಗೇರಿ, ಬಲ್ಗೇರಿಯ, ಯೂಗೋಸ್ಲಾವಿಯ, ಅಮೇರಿಕ, ರಷ್ಯ ಮುಂತಾದ ರಾಷ್ಟ್ರಗಳಲ್ಲಿ ಚದರಿಹೋಗಿರುವ ಜಿಪ್ಸಿ ಜನಸಂಖ್ಯೆ ಸುಮಾರು ಒಂದೂವರೆ ಕೋಟಿ (೧೯೮೧) ಎಂಬುದಾಗಿ ಅಂದಾಜು ಮಾಡಲಾಗಿದೆ. ಜೀವನ ನಿರ್ವಹಣೆಗೆ ಬುಟ್ಟಿಹೆಣಿಗೆ, ಕುದುರೆವ್ಯಾಪಾರ, ಕಣಿ ಹೇಳುವುದು, ಗಾಯನ ನೃತ್ಯ ಮೊದಲಾದ ಕಸಬುಗಳನ್ನು ಅವಲಂಬಿಸಿರುವ ಈ ಮಂದಿಯ ಬದುಕು ವರ್ಣಮಯ. ಜಿಪ್ಸಿಗಳು ದೃಢಕಾಯವುಳ್ಳವರು; ಸಾಹಸ ಪ್ರವೃತ್ತಿಯವರು; ಪರಿಸರದ ಪ್ರತಿಕೂಲ ಪರಿಸ್ಥಿತಿಯಲ್ಲೂ ಜೀವನ ಮಾಡಬಲ್ಲ ಸಾಮರ್ಥ್ಯ ಪಡೆದವರು, ಇವರದು ಪುರುಷಪ್ರಧಾನ ಸಮಾಜ. ತಮ್ಮದೇ ಆದ ಸಾಮಾಜಿಕ ಕಟ್ಟುಪಾಡುಗಳಿಗೆ ಬದ್ಧರಾದವರು. ಆದುದರಿಂದ ಸಮಾಜದ ನೀತಿ ನಿಯಮಗಳನ್ನು ಉಲ್ಲಂಘಿಸಿದವರು ಕಠಿಣಶಿಕ್ಷೆ ಅನುಭವಿಸಬೇಕಾಗುತ್ತದೆ. ಹಾದರದ ಹೆಣ್ಣಿಗೆ ಅವರು ನೀಡುವ ಶಿಕ್ಷೆಗಳಿವು: ೧) ಕಿವಿ ಅಥವಾ ಮೂಗು ಕತ್ತರಿಸುವುದು (ರುಮೇನಿಯ ಜಿಪ್ಸಿ); ೨) ಕೈಕಾಲುಗಳನ್ನು ಚೂರಿಯಿಂದ ಇರಿದು, ವಿವಸ್ತ್ರಳನ್ನಾಗಿಸಿ, ಒಂದು ದಿನ ಪೂರ್ತಿ ಮರವೊಂದಕ್ಕೆ ಕಟ್ಟಿ ಹಾಕುವುದು (ಹಂಗೇರಿ ಜಿಪ್ಸಿ); ೩) ಲೈಂಗಿಕ ಅವಯವಗಳನ್ನು ಊನ ಮಾಡುವುದು (ಬೊಹೇಮಿಯನ್ ಮತ್ತು ಬಾಲ್ಕನ್ ಜಿಪ್ಸಿ). ಜೀವನವ ನೋವು ನಲಿವಿಗೆ ಸಮಾನವಾಗಿ ಸ್ಪಂದಿಸುವ ಈ ಜನರ ಬಗೆಗೆ ಈ ಶತಮಾನದ ಆರಂಭದ ದಶಕದಲ್ಲಿ ಮಾನವ ಶಾಸ್ತ್ರಜ್ಞರ ಹಾಗೂ ಭಾಷಾವಿಜ್ಞಾನಿಗಳ ದೃಷ್ಟಿ ಹರಿಯಿತು. ಅಧ್ಯಯನ ಆರಂಭವಾಯಿತು, ರೇಡ್ ಊಲಿಕ್, ಕ್ಲೀಬರ್ಟ್, ಪಾಟ್, ಪಿಯರೆ ಮಿಲೆ, ಪಶುಪತಿ, ಚಮನ್‌ಲಾಲ್ ಮುಂತಾದವರು ಜಿಪ್ಸಿ ಜೀವನ ರೀತಿಯನ್ನು ಕುರಿತು ಅಧ್ಯಯನ ಮಾಡಿರುವ ವಿದ್ವಾಂಸರು (ಜಿಪ್ಸಿಯಾಲಜಿಸ್ಟ್ಸ್). ಅವರ ಅಧ್ಯಯನದಿಂದ ತಿಳಿದುಬಂದಿರುವ ಕುತೂಹಲಕರ ವಿಚಾರ

ಗಳು ಇವು: ೧) ಜಿಪ್ಸಿಗಳ ಮೂಲನೆಲೆ ಭಾರತ; ೨) ಜಿಪ್ಸಿ ಭಾಷೆಗೆ ಸಂಸ್ಕೃತವೇ ಮೂಲಭಾಷೆ.

ಜನಾಂಗಿಕವಾಗಿ ಮತ್ತು ಸಾಮಾಜಿಕವಾಗಿ ಭಾರತೀಯರನ್ನೇ ಹೋಲುವ ಜಿಪ್ಸಿಗಳು, ಯಾವ ಕಾರಣದಿಂದ, ಯಾವ ಕಾಲದಲ್ಲಿ, ಯಾವ ಯಾವ ದೇಶಗಳಿಗೆ ವಲಸೆ ಹೋದರು ಎಂಬುದು ಇನ್ನೂ ಸ್ಪಷ್ಟವಾಗಬೇಕಾದ ವಿಷಯ. ಈ ಜನರ ವಲಸೆಗೆ ಸಂಬಂಧಿಸಿದಂತೆ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿವು: (೧) ಭಾರತದ ವಾಯುವ್ಯ ಮತ್ತು ಉತ್ತರ ಭಾಗಗಳಲ್ಲಿ ವಾಸಿಸುತ್ತಿದ್ದ ಜಿಪ್ಸಿಗಳು ಅಲೆಕ್ಸಾಂಡರನ ದಂಡಯಾತ್ರೆ ಸಮಯದಲ್ಲಿ ಪಶ್ಚಿಮ ರಾಷ್ಟ್ರಗಳಿಗೆ ವಲಸೆ ಹೋದರು; (೨) ಘಜ್ನಿ ಮಹಮದನ (೧೧ನೆಯ ಶತಮಾನ) ದಾಳಿಯನ್ನು ಎದುರಿಸಲಾರದೆ ಯೂರೋಪ್ ರಾಷ್ಟ್ರಗಳಿಗೆ ಪಲಾಯನ ಮಾಡಿದರು; (೩) ಕ್ರಿ. ಶ. ೧೩೦೦ರಲ್ಲಿ ಇರಾನ್ ದೇಶದ ಮೂಲಕವಾಗಿ ಆರ್ಮೇನಿಯ, ಸಿರಿಯಾ, ಈಜಿಪ್ಟ್ ಮತ್ತು ಉತ್ತರ ಆಫ್ರಿಕಾ ದೇಶಗಳಿಗೆ ಹೋದರು; (೪) ಕ್ರಿ. ಶ. ೧೫೦೦ರಲ್ಲಿ ಯೂರೋಪ್ ತಲುಪಿದರು. ಅನಂತರ ರುಮೇನಿಯ, ಹಂಗೇರಿ, ಸ್ಪೇನ್, ಫ್ರಾನ್ಸ್, ರಷ್ಯ ಮತ್ತು ಇಂಗ್ಲೆಂಡಿಗೆ ಹೋದರು. ಈ ಪೈಕಿ ಒಂದು ಗುಂಪು ಉತ್ತರ ಅಮೆರಿಕಾ ದೇಶಕ್ಕೂ ಹೋಯಿತು. ಹೀಗೆ ಹೋದ ಗುಂಪಿನ ಸದಸ್ಯರಲ್ಲಿ ಕೆಲವರು ಒಂದು ನಿರ್ದಿಷ್ಟ ಸ್ಥಳದಲ್ಲಿ ತಳ ಊರಿದರು. ಆಧುನಿಕ ನಾಗರಿಕತೆಗೆ ಮನಸೋತು ಸ್ಥಳೀಯರೊಂದಿಗೆ ಬೆರೆತು ಒಂದಾದರು. ಮತ್ತೆ ಕೆಲವರು ವಲಸೆಯನ್ನು ಮುಂದುವರೆಸಿದರು. ನೀರಿರುವ ತಾಣಗಳಲ್ಲಿ, ಬೆಟ್ಟಗುಡ್ಡದ ಗುಹೆಗಳಲ್ಲಿ, ತಮಗೆ ಯುಕ್ತವೆನಿಸಿದ ಜಾಗಗಳಲ್ಲಿ ವಾಸಿಸಲು ತೊಡಗಿದರು. ಸ್ಪೇನ್ ದೇಶದ ಗ್ರೆನಡಾ ಹತ್ತಿರವಿರುವ ಸಿರಾ ನೆವಡಾ ಎಂಬ ಬೆಟ್ಟದ ಗುಹೆಗಳಲ್ಲಿ (ಗುಹಾ ಮನೆಗಳು) ಮೂರು ಸಾವಿರಕ್ಕೂ ಹೆಚ್ಚು ಮಂದಿ ವಾಸಿಸುತ್ತಿದ್ದಾರೆ....! ಒಂದೇ ಒಂದು ಕೋಣೆಯನ್ನು ಒಳಗೊಂಡಿರುವ ಗುಹೆಯಿಂದ ಮೊದಲ್ಗೊಂಡು ಇಪ್ಪತ್ತು ಕೋಣೆಗಳನ್ನು ಒಳಗೊಂಡಿರುವ ದೊಡ್ಡ ಗುಹೆಗಳೂ ಇವೆ. ಇವುಗಳಲ್ಲಿಯೇ ಉಗ್ರಾಣ, ವಿಚಾರಣ ಕೊಠಡಿ, ಅಡುಗೆ ಕೋಣೆ, ಮಲಗುವ ಕೋಣೆ, ನೃತ್ಯಶಾಲೆ ಎಲ್ಲವೂ ವ್ಯವಸ್ಥಿತವಾಗಿ ರೂಪುಗೊಂಡಿವೆ. ಈ ಗುಹೆಗಳಲ್ಲಿ ವಾಸಿಸುವ ಮಂದಿ ಗಾಯನ ಮತ್ತು ನೃತ್ಯಗಳಲ್ಲಿ ನುರಿತವರು. ಸ್ಥಳೀಯರ, ಪ್ರವಾಸಿಗರ ಮುಂದೆ ಹಾಡಿ ನರ್ತಿಸಿ ಹಣ ಮಾಡುವರು. ಈ ಹಣದಿಂದಲೇ ಅವರ ಜೀವನ ನಡೆಯುತ್ತದೆ. ಫ್ಲ್ಯಾಮೆಂಕೊ ನೃತ್ಯ (ಸ್ಪ್ಯಾನಿಷ್ ನೃತ್ಯ) ಮಾಡುವುದರಲ್ಲಿ ಜಿಪ್ಸಿ ಹೆಣ್ಣು ಪರಿಣಿತಳು. ದೇಹದ

ವಿವಿಧ ಭಾಗಗಳ ಆಕರ್ಷಕ ಕುಲುಕಾಟಕ್ಕೆ ಹೆಸರಾದ ಈ ನೃತ್ಯ ಪ್ರೇಕ್ಷಕನಿಗೆ ವಿಶೇಷ ಮನರಂಜನೆಯನ್ನು ನೀಡುವಂತದು. ನರ್ತನ ಕಲೆಯಿಂದಾಗಿಯೇ ಸಿನಿಮಾ ಪ್ರಪಂಚವನ್ನು ಸೇರಿರುವ ಅನೇಕ ಮಂದಿ ಜಿಪ್ಸಿ ತರುಣಿಯರಿದ್ದಾರೆ. ಈ ಪೈಕಿ ಲಾ ಚುಂಗಾ ಎಂಬಾಕೆ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ್ದಾಳೆ....!

ಜಿಪ್ಸಿ ಭಾಷೆ, ಇಂಡೋಯೂರೋಪಿಯನ್ ಭಾಷಾಪರಿವಾರದ ಇಂಡೋ ಆರ್ಯನ್ ವರ್ಗಕ್ಕೆ ಸೇರಿದೆ. ಇಂಡೋ ದಾರದಿಕ್ ವರ್ಗಕ್ಕೆ ಸೇರಿದೆಯೆಂದು ಅಭಿಪ್ರಾಯ ಪಟ್ಟಿರುವವರೂ ಉಂಟು. ಕ್ರಿ.ಶ. ಸುಮಾರು ೧೦೦೦ದ ಹೊತ್ತಿಗೆ ಈ ಭಾಷೆ ಉತ್ತರ ಇಂಡೋ ಆರ್ಯನ್ ಭಾಷೆಗಳಿಂದ ಬೇರೆಯಾಗಿರಬಹುದೆಂದು ತೌಲನಿಕ ಭಾಷಾ ವಿಜ್ಞಾನಿಗಳು ಊಹಿಸಿದ್ದಾರೆ. ಜಿಪ್ಸಿ ಭಾಷೆಯಲ್ಲಿ ಅನೇಕ ಪ್ರಭೇದಗಳಿವೆ. ಅವುಗಳ ಪೈಕಿ ಮುಖ್ಯವಾದವು: ಗ್ರೀಕ್, ರುಮೇನಿಯನ್, ಹಂಗೇರಿಯನ್, ಚೆಕ್-ಸ್ಲಾವಿಕ್, ಜರ್ಮನ್, ಪೋಲಿಷ್, ರಷ್ಯನ್, ಫಿನ್ನಿಶ್, ಸ್ಕ್ಯಾಂಡಿನೇವಿಯನ್, ಇಟಾಲಿಯನ್, ಸರ್ಬೋ-ಕ್ರೋಷಿಯನ್, ವೆಲ್ಷ್ ಮತ್ತು ಸ್ಪಾನಿಷ್. ಜಿಪ್ಸಿ ಭಾಷೆಯ ಸ್ವರ ಮತ್ತು ವ್ಯಂಜನ ಧ್ವನಿವ್ಯವಸ್ಥೆ ಹಿಂದೀ ಭಾಷೆಯಲ್ಲಿದ್ದಂತೆಯೇ ಇದೆ. ಬೇರೆ ಬೇರೆ ಭಾಷೆಗಳ ಪ್ರಭಾವದಿಂದಾಗಿ ಕೆಲವು ಸ್ವರಗಳೂ ವ್ಯಂಜನಗಳೂ ಸೇರಿಕೊಂಡಿವೆ. ಡ್ರ—, ಟ್ರ— ಎಂಬ ಆದಿ ವ್ಯಂಜನ ಗುಚ್ಛಗಳೂ -ಶ್ಟ-, -ಷ್ಟ- ಎಂಬ ಮಧ್ಯ ವ್ಯಂಜನ ಗುಚ್ಛಗಳೂ ಇವೆ. ಸ್ಲಾವಿಕ್ ಭಾಷೆಯ ಸಂಘರ್ಷಿ ಮತ್ತು ಅನುಘರ್ಷಿ ಧ್ವನಿಗಳಿವೆ. ಸರಳ ವಿಭಕ್ತಿ (ಡೈರೆಕ್ಟ್ ಕೇಸ್) ಸಂಸ್ಕೃತದ ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಯನ್ನು ಹೋಲುತ್ತದೆ. ವಿಭಕ್ತಿ ಮೂಲರೂಪವು ಷಷ್ಠಿ ವಿಭಕ್ತಿಯಿಂದ ಸಾಧಿತವಾಗುತ್ತದೆ, ಮೂರು ಬಗೆಯ ಲಿಂಗ ವ್ಯವಸ್ಥೆ, ಎರಡು ಬಗೆಯ ವಚನ ವ್ಯವಸ್ಥೆ, ಐದು ಬಗೆಯ ಕಾಲಸೂಚಕ ವ್ಯವಸ್ಥೆ (ವರ್ತಮಾನ, ಅಪೂರ್ಣ, ಪೂರ್ಣ, ಪೂರ್ಣಭೂತ, ಭವಿಷ್ಯತ್) ಮೂರು ಬಗೆಯ ಕ್ರಿಯಾಭಾವಗಳು ಇವೆ. ಪ್ರಕೃತಿಗಳು ಒಂದು ಅಥವಾ ಎರಡು ಅಕ್ಷರಗಳನ್ನುಳ್ಳವಾಗಿವೆ. ಪದರಚನೆಯಲ್ಲಿ ಪರಪ್ರತ್ಯಯ ಅಂತ್ಯ ಪ್ರತ್ಯಯಗಳ ಬಳಕೆ ಹೆಚ್ಚು. ಕ್ರಿಯಾವಿಶೇಷಣಗಳ ಬಳಕೆ ಕಡಿಮೆ. ನಾಮ ವಿಶೇಷಣಗಳು ವಿಶಿಷ್ಟವಾದವು.

ಜಿಪ್ಸಿ ಭಾಷೆ ಉಳಿದೆಲ್ಲ ಇಂಡೋ ಆರ್ಯನ್ ಭಾಷೆಗಳಿಗಿಂತ ಹಿಂದೀ ಭಾಷೆಯೊಡನೆ ಹೆಚ್ಚು ಸಂಬಂಧ ಪಡೆದಿದೆ (ರೇಡ್ ಊಲಿಕ್ ಪಿಯರಿ ವಿಲೆ).

ಉದಾಹರಣೆಗೆ ಕೆಲವು ಸಂಖ್ಯಾ ವಾಚಕಗಳನ್ನು ಪರಿಶೀಲಿಸಬಹುದು :

ಜಿಪ್ಸಿ	ಹಿಂದೀ	ಕನ್ನಡ	ಜಿಪ್ಸಿ	ಹಿಂದೀ	ಕನ್ನಡ
ಏಕ್	ಏಕ್	ಒಂದು	ಶೋ	ಛೇ	ಆರು
ದುಯಿ	ದೋ	ಎರಡು	ಎಫ್ಟ್ (ಹಾಫ್ಟ್-ಪರ್ಶಿಯನ್)	ಸಾತ್	ಏಳು
ತ್ರಿನ್	ತೀನ್	ಮೂರು	ಆಕ್ತ್-ಆಕ್ತೊ	ಆಠ್	ಎಂಟು
ಸ್ತ್ವೋರ್	ಚಾರ್	ನಾಲ್ಕು	ನು	ನೌ	ಒಂಬತ್ತು
ಪಾನ್ಚ್	ಪಾನ್ಚ್	ಐದು	ದಶ್	ದಸ್	ಹತ್ತು

ದಶ್ ತೋ ಏಕ್ (ಹನ್ನೊಂದು), ದೋ ಬಾರ್ ದಶ್ (ಇಪ್ಪತ್ತು), ಪಾನ್ಚ್ ಬಾರ್ ದಶ್ (ಐವತ್ತು), ಪಾನ್ಚ್ ಬಾರ್ ದಶ್ ತೋ ಶೋ (ಐವತ್ತಾರು). ಈ ಭಾಷೆಯಲ್ಲಿ ಕಂಡುಬರುವ ಅನೇಕ ಸಂಸ್ಕೃತ ಪದಗಳನ್ನು ಗಮನಿಸಿದ ಜಾರ್ಜ್ ಬರೋ, ಜಿಪ್ಸಿ ಭಾಷೆ ಸಂಸ್ಕೃತವನ್ನೇ ಹೋಲುತ್ತದೆ—ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಉದಾಹರಣೆಗೆ ಪ್ರಥಮ ದಿವಸ್ (ಸೋಮವಾರ), ದ್ವಿತೀಯ ದಿವಸ್ (ಮಂಗಳವಾರ), ತೃತೀಯ ದಿವಸ್ (ಬುಧವಾರ), ಶಶ>ಶೋಶೈ (ಮೊಲ). ಇವೇ ಅಲ್ಲದೆ ದುಃಖ್, ದಂತ್, ದೇವತಾ, ಸಪ್ಪ (ಸರ್ಪ) ಮುಂತಾದ ಪದಗಳಿವೆ.

ಜಿಪ್ಸಿ ಜನರ ವಲಸೆಯಿಂದಾಗಿ ಅವರ ಭಾಷೆಗೆ ಬೇರೆ ಬೇರೆ ಭಾಷೆಗಳ ಹಲವಾರು ಪದಗಳು ಸೇರಿಕೊಂಡಿವೆ, ಉದಾಹರಣೆಗೆ :

ಮಧ್ಯಕಾಲೀನ ಗ್ರೀಕ್ —ದ್ರೋಮ್ (ದಾರಿ), ಕೊಕಾಲೋ (ಕಾಲು), ಫ್ರೋಕೋರ್ (ನಗರ), ಆಕ್ತೋ (ಎಂಟು).

ಆರ್ಮೇನಿಯನ್ —ಗ್ರಾಸ್ತ್ (ಕುದುರೆ), ಬೋವ್ (ಬೆಂಕಿ), ಕೊತೊರ್ (ತುಂಡು), ಆಸ್ಸೆಟಿಕ್ (ಗಾಡಿ).

ರುಮೇನಿಯನ್ —ಬೋಲ್ತ್ರ (ಅಂಗಡಿ)

ಹಂಗೇರಿಯನ್ —ಜೈನೊ (ಪಾಪ)

ಸ್ಲಾವಿಕ್ —ಗ್ಲಾಸ್ (ಧ್ವನಿ), ರೆಬ್ನಿಕೊ (ಕೊಳ), ಗ್ರಾಬ್ (ಸ್ತೂಪ), ದೋಸ್ತ್ರ (ಸಾಕು), ಏಲ್ (ಆದರೆ).

ಈ ಪದಗಳೇ ಅಲ್ಲದೆ ರಾಜಾಸ್ತಾನಿ, ಗುಜರಾತಿ, ಪಂಜಾಬಿ ಮುಂತಾದ ಆರ್ಯನ್ ಭಾಷೆಗಳ ಪದಗಳೂ ಇವೆ. ಯೂರೋಪಿನ ಅನೇಕ ಭಾಷೆಗಳ ಮೇಲೆ ಜಿಪ್ಸಿ ಭಾಷೆಯ ಪ್ರಭಾವವೂ ಉಂಟಾಗಿದೆ. ಉದಾಹರಣೆಗೆ ಇಂಗ್ಲಿಷ್ ಉಪಭಾಷೆಗಳಲ್ಲಿ ಪಾಲ್ (ಫ್ರಾಲ್–ಸಹೋದರ) ಕೋಶ್ (ಕ್ರಾಶ್–ಕೋಲು), ಕ್ಯಾಲಿಬನ್ (ಕತ್ತಲೆ/ಕಪ್ಪು) ಮುಂತಾದ ಜಿಪ್ಸಿ ಪದಗಳನ್ನು ಕಾಣಬಹುದು. ಅಂತೆಯೇ ಫ್ರೆಂಚ್ ಆಡುಭಾಷೆಯಲ್ಲಿ ಬರ್ಜ್ (ಬರ್ಸ್–ವರ್ಷ), ಸುರಿನ್ (ಚುರಿ-ಚೂರಿ), ರುಪಿ (ಹಣ), ಔಸ್ತೆ (ಅಸ್ತೆ–ಬಾ, ಹೋಗೋಣ). ಕೊಸ್ಟ್ರಾದ್ (ಕುಸ್ಟೊ-ಶಕ್ತಿಶಾಲಿ) ಮುಂತಾದ ಜಿಪ್ಸಿ ಪದಗಳು ಕಂಡುಬರುತ್ತವೆ. ಫ್ರಾನ್ಸ್ ದೇಶದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಜಿಪ್ಸಿ ಗುಪ್ತಪದಗಳಿವು: ಚೋರ್ಯಾವರ್ (ಚುರಾವ್–ಕಳ್ಳತನ), ಲವ್ (ಹಣ), ಮಿಚೆಟ್, ಮಿಚೆಟನ್ (ಮಿಶ್ರೋ-ವೇಶ್ಯೆಯ ಆಶ್ರಿತ), ನ್ಯಾಚೆವರ್ (ತಪ್ಪಿಸಿಕೊ), ಚೌಕಾರ್ಡ್ (ಶೂಚಾರ್-ಸುಂದರ), ಟ್ರಾಕ್ (ಭಯ), ಚಾವ್ರೋ (ವಿದಾಯ), ಪೆನ್‌ಗೆವ್ (ತೆಗೆದುಕೊ, ಚಿನ್ನೆ). ಗ್ರಾಮ್ಯ ಭಾಷೆಯನ್ನಾಡುವ ಹಾಗೂ ಜಿಪ್ಸಿಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ಮಂದಿ ಬಳಸುವ ಜಿಪ್ಸಿ ಪದಗಳೆಂದರೆ—ಗ್ರೈಲ್ (ಕುದುರೆ), ಟಿವೈಚೆನ್ (ಕೀಸಾರು), ವರ್ಡೈನ್ (ಗಾಡಿ).

೧೯೩೦ರ ಅನಂತರದ ವರ್ಷಗಳಲ್ಲಿ ಜಿಪ್ಸಿ ಜಾನಪದವನ್ನು ಕುರಿತ ಅಧ್ಯಯನ ನಡೆದಿದೆ. ನಾಗರಿಕ ಸಂಪರ್ಕದಿಂದಾಗಿ ನಶಿಸಿಹೋಗುತ್ತಿರುವ ಜಿಪ್ಸಿ ಜನಪದ ಸಾಹಿತ್ಯವನ್ನು ದೇಶಭಾಷೆಗಳಲ್ಲಿ ಹಿಡಿದಿಡುವ ಪ್ರಯತ್ನಗಳು ಸಾಗಿವೆ. ಪೂರ್ವ ಯೂರೋಪಿನ ಕೆಲವು ರಾಷ್ಟ್ರಗಳು ಜಿಪ್ಸಿ ಜನಪದ ಕಾವ್ಯ, ಕತೆಗಳನ್ನು ಪ್ರಕಟಿಸಿವೆ.

ಆರ್. ರಾಮಕೃಷ್ಣ

ನಾವು ರೋಗ-ರುಜಿನಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದೇವಷ್ಟೇ ಅಲ್ಲದೆ ಅವುಗಳನ್ನು ಮಾರಕವಾಗಿಯೇ ಮಾಡಿಕೊಂಡಿದ್ದೇವೆ.

—ಡಾ॥ ಆರ್. ರಕ್ಷ

ತನ್ನ ಬಗೆಗೆ ತಾನು ತಾಳುವ ಮೊದಲ ಸಂಶಯವೇ, ಪತನದಲ್ಲಿ ಮಹಾಪತನ.

—ಕೌಂಟೆಸ್ ಗ್ಯಾಸ್ಪರೀನ್

ಸಾವಿನ ತೆಕ್ಕೆಯಲ್ಲಿ ಕೆಲವು ಗಂಟೆಗಳು

ಈ ರೋಮಾಂಚಕ ಘಟನೆ ಜೋಸೆಫ್ ಡಿಸೌಜಾ ಎಂಬ ಅಂಚೆಯಾಳಿನ ಜೀವನದಲ್ಲಿ ನಡೆದದ್ದು. ಆ ದಿನಗಳಲ್ಲಿ ಅವನು ಹಳ್ಳಿಗಳಿಗೆ ಅಂಚೆ ಬಟವಾಡೆ ಮಾಡುತ್ತಿದ್ದ. ಆ ದಿನ ಅವನು ದೌಲಪುರ ಎಂಬ ಹಳ್ಳಿಗೆ ಅಂಚೆ ಕಾಗದಗಳನ್ನು ಹಂಚಲು ಹೋಗಬೇಕಾಗಿತ್ತು. ದಾರಿಯುದ್ದಕ್ಕೂ ದಟ್ಟವಾದ ಕಾಡು, ಅದರ ಮೇಲೆ ಮಳೆಗಾಲ ಬೇರೆ. ಮೂರು ನಾಲ್ಕು ದಿನಗಳಿಂದ ಎಡಬಿಡದೆ ಧಾರಾಕಾರ ವಾಗಿ ಮಳೆ ಸುರಿಯುತ್ತಲೇ ಇತ್ತು. ಆದ್ದರಿಂದ ಕಾಡಿನ ಹಳ್ಳಕೊಳ್ಳಗಳ ರಸ್ತೆ ಯೆಲ್ಲಾ ಕೆಸರಿನಿಂದ ತುಂಬಿಹೋಗಿತ್ತು. ಒಂದೊಂದು ಹೆಜ್ಜೆಯನ್ನೂ ಬಹಳ ಎಚ್ಚರಿಕೆಯಿಂದ ಮುಂದಿಡಬೇಕಾಗುತ್ತಿತ್ತು. ದಿಕ್ಕೆಟ್ಟ ಅಂಚೆಯಾಳು ಮನಸ್ಸಿ ನಲ್ಲೇ ದೇವರನ್ನು ನೆನೆಸುತ್ತಾ ಕಾಲುಜಾರದಂತೆ ಹೆಜ್ಜೆಯೂರಿ ಮುಂದೆ ಸಾಗು ತ್ತಿದ್ದ. ಆದರೆ, ಇದ್ದಕ್ಕಿದ್ದಂತೆಯೇ ಹಿಂದಿನಿಂದ ಯಾವುದೋ ಭಾರೀ ವಸ್ತು ವೊಂದು ತನ್ನನ್ನು ಹಿಂಬಾಲಿಸಿ ಬರುತ್ತಿದೆ ಅಂತ ಅವನಿಗೆ ಅನಿಸಿತು. ಅದೇನೆಂದು ತಟಕ್ಕನೆ ಹಿಂದೆ ತಿರುಗಿ ನೋಡಿದಾಗ ಅವನಿಗೆ ಜೀವವೇ ಹಾರಿ ಹೋದಂತಾಯಿತು. ಬೃಹದಾಕಾರದ ಆನೆಯೊಂದು ಬಲು ವೇಗವಾಗಿ ಅವನನ್ನು ಅಟ್ಟಿಸಿಕೊಂಡು ಬರುತ್ತಿತ್ತು.

ಓಡಿಬರುತ್ತಿರುವಾಗ ಅದರ ಸೊಂಡಿಲು ಮೇಲೆ ಕೆಳಗೆ ಆಡುತ್ತಿರುವುದರಿಂದಲೇ ಅವನಿಗೆ ಅದು ತುಂಬ ಕೋಪಗೊಂಡಿದೆ ಎಂದು ಗೊತ್ತಾಯಿತು. ಆನೆಯಮುಖ ಕೂಡ ಅತಿ ಭಯಂಕರವಾಗಿದ್ದು ಇದೇ ಮಾತಿಗೆ ಒತ್ತಾಸೆ ಕೊಡುತ್ತಿತ್ತು. ಅವನಿಗೆ ಮತ್ತು ಆನೆಗೆ ಮಧ್ಯೆ ಬಹಳ ಹೆಚ್ಚೆಂದರೆ ೬೦೦–೭೦೦ ಗಜಗಳಷ್ಟು ಅಂತರ ಮಾತ್ರ ಉಳಿದಿತ್ತು. ಹಾಗಾಗಿ ಒಂದು ಕ್ಷಣವನ್ನೂ ವ್ಯರ್ಥಮಾಡದೆ ಅವನು ಆದಷ್ಟು ಬೇಗ ಕಾಲಿಗೆ ಬುದ್ಧಿ ಹೇಳುವುದೇ ಸರಿಯೆಂದುಕೊಂಡ.

ಆನೆಗೆ ಹುಚ್ಚು ಹಿಡಿದಿದೆ ಎಂದು ತಿಳಿಯಲು ಅವನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ ಏಕೆಂದರೆ ಆನೆ ಸರಳವಾದ, ಯಾವುದೇ ತಂಟೆಗೆ ಬರದ ಪ್ರಾಣಿ. ಮನುಷ್ಯನ ಮಾಂಸವನ್ನು ಅದು ಮುಟ್ಟುವುದಿಲ್ಲ. ಅಲ್ಲದೆ ಅವನೂ ಅದಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಿರಲಿಲ್ಲ. ಆದರೂ ಅದು ಅವನನ್ನು ಏಕೆ ಬೆನ್ನಟ್ಟಿ ಬರುತ್ತಿದೆ! ಆದರೆ ಆ ಕ್ಷಣದಲ್ಲಿ ಅದೆಲ್ಲಾ ಯೋಚಿಸುವುದಕ್ಕೆ ಸಮಯವಿರಲಿಲ್ಲ. ಅವನು ಎಷ್ಟು ಜೋರಾಗಿ ಓಡುತ್ತಿದ್ದರೂ ಆನೆ ಇನ್ನೂ

೧೯೮೩ರ ಜೂನ್ ತಿಂಗಳ ನವನೀತದಲ್ಲಿ ಪ್ರಕಟವಾದ ಅಸೀಮ ಚಕ್ರವರ್ತಿ ಅವರ "ಮೌತ್ ಕೆ ಜಂಗುಲ್ ಮೇ ಕಯೀ ಘಂಟೆ" ಸತ್ಯಕಥೆಯ ಕನ್ನಡಾನುವಾದ.

ಜೋರಾಗಿ ಅಟ್ಟಿಸಿಕೊಂಡು ಬರುತ್ತಿತ್ತು. ಅದಕ್ಕೆ ದಾರಿ ತಪ್ಪಿಸಲೆಂದು ಕಲ್ಲು ಮುಳ್ಳುಗಳನ್ನು ಹಾರಿ ಪೊದೆಗಳ ಸಂದಿಯಿಂದ ಬೇರೆ ಬೇರೆ ದಾರಿ ಹಿಡಿದ. ಹೇಗಾದರೂ ಮಾಡಿ ಆನೆಗೆ ಕಣ್ಣು ತಪ್ಪಿಸಬೇಕೆಂದು ಯೋಚಿಸಿದ. ಆದರೆ ಅದು ಸಾಧ್ಯವಾಗಲೇ ಇಲ್ಲ. ಆನೆ ಎಡಬಿಡದೆ ಘೀಳಿಡುತ್ತಾ, ಅವನ ಹಿಂದೆಯೇ ಓಡಿಬರುತ್ತಿತ್ತು.

ಆದರೆ ಎಲ್ಲಿಯವರೆಗೆ ತಾನೆ ಹಾಗೆ ಓಡಲು ಸಾಧ್ಯ. ಓಡುತ್ತಾ ಓಡುತ್ತಾ ಏದುಸಿರು ಬಿಡಲಾರಂಭಿಸಿದ. ಕಾಲುಗಳೆರಡೂ ದಣಿದು ಒಂದು ಹೆಜ್ಜೆಯನ್ನೂ ಮುಂದಿಡಲಾಗುತ್ತಿರಲಿಲ್ಲ. ಆದರೆ, ಆ ಹುಚ್ಚು ಹಿಡಿದ ಆನೆಗೆ ಸ್ವಲ್ಪವೂ ದಣಿವಾಗಿರಲಿಲ್ಲ. ಅದು ಒಂದೇ ಸಮನೆ ಅವನನ್ನು ಹಿಂಬಾಲಿಸಿ ಬರುತ್ತಿತ್ತು. ಅವನ ಓಟದ ವೇಗ ಕಡಿಮೆಯಾದಷ್ಟೂ ಆನೆಯು ಮತ್ತು ಅವನ ನಡುವಣ ಅಂತರ ಕಡಿಮೆಯಾಗುತ್ತಾ ಹೋಗುತ್ತಿತ್ತು. ಅಂತರ ಕೇವಲ ೧೩-೧೪ ಗಜಗಳಿಗೆ ಇಳಿದಾಗ ಅವನಿಗೆ ತನ್ನ ಸಾವೇ ಸಾಕ್ಷಾತ್ತಾಗಿ ಎದುರಾದಂತಾಯಿತು. ಈಗ ಸಾವಿನಿಂದ ತಪ್ಪಿಸಿಕೊಳ್ಳಲು ಅವನು ಅಡಗಿಕೊಳ್ಳುವ ಸ್ಥಳವನ್ನು ಹುಡುಕತೊಡಗಿದ. ಯಾವುದಾದರೂ ಮರವನ್ನು ಹತ್ತುವುದು ತುಂಬಾ ಅಪಾಯದ ಕೆಲಸವಾಗಿತ್ತು. ಏಕೆಂದರೆ ಆ ಹುಚ್ಚು ಆನೆ ಯಾವ ಮರವನ್ನು ಬೇಕಾದರೂ ಸುಲಭವಾಗಿ ಉರುಳಿಸಬಲ್ಲದಾಗಿತ್ತು. ಹಾಗೆಯೇ ಏನೂ ಮಾಡದೆ ಅವನು ಅದಕ್ಕೆ ಈಗಾಗಲೇ ತುಂಬಾ ಸಿಟ್ಟು ಬರಿಸಿದ್ದ. ಆದ್ದರಿಂದ ಯಾವುದಾದರೂ ಮರದ ಸಂದಿಯಲ್ಲಿ ಅವಿತುಕೊಂಡು ಅದರ ಕಣ್ಣಿಗೆ ಮಣ್ಣೆರಚುವುದು ಅಸಾಧ್ಯವಾದ ಕೆಲಸವಾಗಿತ್ತು. ಅವನು ತುಂಬಾ ಹತಾಶಗೊಂಡು ದೇವರ ಧ್ಯಾನ ಮಾಡತೊಡಗಿದ. ಅಷ್ಟರಲ್ಲಿ ಅಲ್ಲೇ ಹತ್ತಿರದಲ್ಲಿದ್ದ ದಿಣ್ಣೆಯ ಮೇಲೆ ಒಂದು ಸಣ್ಣ ಗುಹೆ ಕಾಣಿಸಿತು. ಸಾವಿನಿಂದ ತಪ್ಪಿಸಿಕೊಳ್ಳಲು ಅವನು ಆ ಕಡೆಯೇ ಓಡಿದ. ಆದರೆ ಅವನ ಕಾಲುಗಳು ತುಂಬಾ ನಿತ್ರಾಣವಾಗಿದ್ದವು. ಮೈಕೈ ತರಿದು ತೀವ್ರವಾಗಿ ಗಾಯಗೊಂಡಿದ್ದ. ಕಾಲುಜಾರಿ ಒಂದು ಕಡೆಗೆ ಜೋರಾಗಿ ಬಿದ್ದು ಬಿಟ್ಟ. ಈ ನಡುವೆ ಆನೆ ಮತ್ತು ಅವನ ನಡುವಿನ ಅಂತರ ೧೩-೧೪ ಗಜಗಳಿಂದ ಇಳಿದು ೪-೫ ಗಜಗಳಷ್ಟು ಕಡಿಮೆಯಾಗಿಹೋಯಿತು. ಜೀವಭಯದಿಂದ ಅವನು ಮತ್ತೆ ಎದ್ದು ನಿಂತ.

ಈ ಭಾರಿ ಆನೆ ತುಂಬಾ ಚುರುಕಾಗಿ ಮುನ್ನುಗ್ಗಿತು. ಅವನ ತೀರ ಹತ್ತಿರಕ್ಕೆ ಬಂದು ನಿಂತಿತ್ತು. ಅವನು ಯಾವ ರೀತಿಯಲ್ಲಿ ದಿಣ್ಣೆ ಏರಿಬಿಟ್ಟಿದ್ದನೋ ಅವನಿಗೇ ಗೊತ್ತಿಲ್ಲ. ಗುಹೆ ಒಂದು ಒಂದೂವರೆ ಗಜದಷ್ಟು ಮಾತ್ರ

ದೂರವಿತ್ತು. ಆ ಹುಚ್ಚು ಆನೆ ಮತ್ತೆ ಜೋರಾಗಿ ಘೀಳಿಡುತ್ತಾ ಅವನನ್ನು ಸೊಂಡಿಲಲ್ಲಿ ಎತ್ತುವಷ್ಟರಲ್ಲಿ ಅವನು ಒಂದೇ ಹಾರಿಗೆ ಹಾರಿ ನೇರವಾಗಿ ಗುಹೆಯ ಬಾಗಿಲಲ್ಲಿ ಬಿದ್ದುಬಿಟ್ಟಿದ್ದ. ಈಗ ಒಂದು ಕ್ಷಣ ಕೂಡ ತಡಮಾಡದೆ ಗುಹೆಯ ಒಳಗೆ ಸೇರಿಬಿಟ್ಟ.

ಆನೆ ಗುಹೆಯ ಬಾಗಿಲ ಬಳಿ ಬಂದು ನಿಂತುಬಿಟ್ಟಿತು. ಗುಹೆಯ ಬಾಗಿಲು ತುಂಬ ಚಿಕ್ಕದಾಗಿತ್ತು. ಆ ಬಾಗಿಲಿನ ಒಳಗೆ ನುಸಿಯಲು ಸಾಧ್ಯವಾಗದೆ ಹೋದಾಗ ಅದು ಜೋರಾಗಿ ಕಿರುಚುತ್ತಾ ಹಣೆಯಿಂದ ಮತ್ತು ಸೊಂಡಲಿನಿಂದ ಗುಹೆಯ ಬಾಗಿಲಿನ ಸುತ್ತಮುತ್ತ ಗುದ್ದಲು ಶುರು ಮಾಡಿತು. ಅದರ ತೀವ್ರ ಪ್ರಹಾರಗಳಿಂದ ಗುಹೆಯ ಅಕ್ಕಪಕ್ಕದ ಕಲ್ಲುಮಣ್ಣುಗಳೆಲ್ಲಾ ಅಲ್ಲಾಡಿ ತೊಪತೊಪ ಅಂತ ಬೀಳತೊಡಗಿತು. ಅವನಿಗೆ ತುಂಬಾ ಹೆದರಿಕೆಯಾಯಿತು. ಈಗ ಸಾವು ಎದುರಿನಲ್ಲೇ ಇದೆ, ತಪ್ಪಿಸಿಕೊಳ್ಳಲು ಅಸಾಧ್ಯ ಎಂದು ಮನದಟ್ಟಾಯಿತು. ಎಲ್ಲವನ್ನೂ ಹಣೆಬರಹಕ್ಕೆ ಬಿಟ್ಟು ಸುಮ್ಮನಿದ್ದುಬಿಡುವುದೇ ಲೇಸೆಂದು ಅವನು ಯೋಚಿಸಿದ.

ರಾತ್ರಿ ಸಾಕಷ್ಟು ಹೊತ್ತಾಗಿತ್ತು. ಆದರೆ ಆನೆ ಸ್ವಲ್ಪವೂ ದಣಿಯದೆ ತನ್ನ ಸೊಂಡಿಲ ಪ್ರಹಾರವನ್ನು ಮುಂದುವರಿಸಿತ್ತು. ಗುಹೆಯ ಒಂದೊಂದು ಕಲ್ಲೂ ಮೆಲ್ಲಗೆ ಸರಿಯಲಾರಂಭಿಸಿತ್ತು. ಆ ಅಲುಗಾಟದಿಂದ ಅವನಿಗೆ ತನ್ನ ಸ್ಥಿತಿ ತೀವ್ರ ಚಿಂತಾಜನಕವಾಗಿ ಕಾಣುತ್ತಿತ್ತು. ಜನ ತಮ್ಮ ಕಡೇ ಗಳಿಗೆಯಲ್ಲಿ ದೇವರನ್ನು ನೆನೆಸುತ್ತಾರೆ. ಈಗ ಅವನೂ ಹಾಗೆಯೇ ಮಾಡುತ್ತಿದ್ದ. ಅಲ್ಲದೆ, ಕಳೆದ ಎಳೆಂಟು ಗಂಟೆಗಳ ಕಾಲ ಎಡೆಬಿಡದೆ ಸಾವಿನ ಜೊತೆ ಹೋರಾಡಿದ್ದರಿಂದ ತುಂಬಾ ಸುಸ್ತಾಗಿದ್ದ. ಮೆಲ್ಲಗೆ ಅವನ ಕಣ್ಣುರೆಪ್ಪೆಗಳು ಮುಚ್ಚಿಕೊಳ್ಳತೊಡಗಿದವು. ಬೇರೇನೂ ಮಾಡಲು ತೋರದೆ ತನ್ನ ಗತಿಯನ್ನು ದೇವರಿಗೊಪ್ಪಿಸಿ ಅವನು ನಿದ್ರಾದೇವಿಯ ಮಡಿಲು ಸೇರಿಬಿಟ್ಟ.

ಬೆಳಗ್ಗೆ ಹಕ್ಕಿಗಳ ಚಿಲಿಪಿಲಿ ಸದ್ದಿನಿಂದ ಅವನು ಕಣ್ಣುಬಿಟ್ಟ. ಆದರೆ ಇನ್ನೂ ಬೆಳಕು ಹರಿದಿರಲಿಲ್ಲ ಅಂತ ಅವನಿಗೆ ಗೊತ್ತಾಯಿತು. ಏಕೆಂದರೆ ಗುಹೆಯಲ್ಲಿ ಇನ್ನೂ ಕತ್ತಲೆ ಹರಡಿತ್ತು. ಸೂರ್ಯ ಹುಟ್ಟಿದ್ದರೆ ಅವನ ಬೆಳಕು ಗುಹೆಯ ಬಾಗಿಲಿಗೆ ಬೀಳಬೇಕಾಗಿತ್ತು. ಇದ್ದಕ್ಕಿದ್ದಂತೆ ರಾತ್ರಿಯ ಘಟನೆಯೆಲ್ಲಾ ಅವನಿಗೆ ನೆನಪಾಯಿತು. ತಕ್ಷಣ ಗುಹೆಯ ಬಾಗಿಲಿನ ಕಡೆ ಕಣ್ಣು ಹಾಯಿಸಿದ. ಆದರೆ ಅಲ್ಲೇನು! ಬಾಗಿಲಿಗೆ ಸೇರಿಕೊಂಡಂತೆಯೇ ಆನೆ ಮಲಗಿಬಿಟ್ಟಿತ್ತು.

ತಪ್ಪಿಸಿಕೊಳ್ಳಲು ಬೇರೆದಾರಿ ತೋರದೆ ಅವನು ಅಲ್ಲೇ ದೊಡ್ಡ ಕಲ್ಲೊಂದನ್ನು

ಏರಿ ಆನೆಯನ್ನು ದಾಟಬಿಡೋಣ ಅಂತ ಹಾರಿದ. ಆದರೆ ಕಾಲುಗಳೆರಡೂ ಆನೆಯ ಹೊಟ್ಟೆಯಮೇಲೇ ಇಟ್ಟುಬಿಟ್ಟ. ಆದರೆ ಇದೇನು! ಆನೆಯ ಹೊಟ್ಟೆಯೊಳಗಡೆ ಅವನ ಎರಡೂ ಕಾಲುಗಳು ಇಳಿಯತೊಡಗಿದವು. ಕೆಸರಿನೊಳಗೆ ಕಾಲು ಹೂತುಹೋಗುವಂತೆ ಆನೆಯ ಹೊಟ್ಟೆಯೊಳಗೆ ಅವನ ಕಾಲುಗಳೂ ಹೂತುಹೋಗಿದ್ದವು. ಆದರೆ ಕೆಸರಿನ ಬದಲು ಮಾಂಸದ ರಾಶಿಯೊಳಗೆ ಅವನು ಇಳಿಯುತ್ತಿದ್ದ. ಮಂಡಿಯವರೆಗೆ ಒಳಕ್ಕೆ ಸೇರಿಬಿಟ್ಟ. ಕಾಲುಗಳು ಭಯಂಕರವಾಗಿ ಉರಿಯತೊಡಗಿದವು. ಏನೋ ಮಾಡಲು ಹೋಗಿ ಏನೋ ಆಯಿತಲ್ಲಾ ಅಂತ ಕೈಕೈ ಹಿಸುಕಿಕೊಳ್ಳುವ ಹಾಗಾಯಿತು. ಈಗ ಅವನು ಪೂರ್ತಿಯಾಗಿ ಸಾವಿನ ತೆಕ್ಕೆಯಲ್ಲಿ ಸೇರಿಹೋಗುತ್ತಿದ್ದ. ಉರಿ ಮತ್ತು ನೋವಿನಿಂದ ಅವನ ಸ್ಥಿತಿ ಚಿಂತಾಜನಕವಾಗುತ್ತಿತ್ತು. ಅವನು ಉಳುವಿಗಾಗಿ ಚಡಪಡಿಸತೊಡಗಿದ. ಹೇಗಾದರೂ ಮಾಡಿ ಕಾಲುಗಳನ್ನು ಹೊರಗೆಳೆದುಕೊಳ್ಳಲು ಒದ್ದಾಡುತ್ತಿದ್ದ. ಆದರೆ ಏನೂ ಮಾಡಲಾಗಲಿಲ್ಲ. ಅವನ ಇಡೀ ಶರೀರವೇ ಹೂತುಹೋಗುತ್ತಿತ್ತು. ಆ ಉರಿ ಹಾಗೂ ನೋವನ್ನು ಅವನಿಗೆ ತಡೆಯಲಾಗಲಿಲ್ಲ. ಪ್ರಜ್ಞೆ ಕಳೆದುಕೊಳ್ಳತೊಡಗಿದ. ಸಾವಿನ ಬಾಯೊಳಗೆ ಹೋಗುವ ಮೊದಲು "ಕಾಪಾಡಿ, ಸಾಯುತ್ತಿದ್ದೇನೆ....ಕಾಪಾಡಿ....ಕಾಪಾಡಿ....!" ಅನ್ನುತ್ತಾ ಜೋರಾಗಿ ಕೂಗಿಕೊಂಡ. ಅನಂತರ ಅವನಿಗೆ ಸ್ವಲ್ಪವೂ ಪ್ರಜ್ಞೆ ಇರಲಿಲ್ಲ.

ಅವನಿಗೆ ಎಲ್ಲಿಯವರೆಗೆ ಪ್ರಜ್ಞೆ ಇರಲಿಲ್ಲವೋ ಅವನಿಗೇ ಗೊತ್ತಿಲ್ಲ. ಆದರೆ ಕಣ್ಣುಬಿಟ್ಟಾಗ ಒಂದು ಹಳೆಯ ಹರಕಲು ಹಾಸಿಗೆಯ ಮೇಲೆ ತಾನು ಮಲಗಿರುವುದು ಕಂಡುಬಂದಿತು. ಕಣ್ಣುಗಳನ್ನು ಉಜ್ಜಿ ಮೇಲೇಳುವಷ್ಟರಲ್ಲಿಯೇ ಎರಡು ಬಲಿಷ್ಠವಾದ ತೋಳುಗಳು ಮತ್ತೆ ಹಾಗೇ ಅವನನ್ನು ಮಲಗಿಸಿದವು. ಕಣ್ಣೆತ್ತಿ ನೋಡಿದಾಗ ಆವೆರಡೂ ತೋಳುಗಳು ಒಬ್ಬ ಯುವಕನದೆಂದು ಗೊತ್ತಾಯಿತು. ಎದುರಿಗೆ ದೃಷ್ಟಿ ಹರಿಸಿದಾಗ, ಐವತ್ತು–ಅರವತ್ತು ವರ್ಷದ ಒಬ್ಬ ಮುದುಕ ಅವನನ್ನೇ ನೋಡುತ್ತಿದ್ದ. ಮಲಗಿದ್ದವನು ಏನಾದರೂ ಕೇಳುವುದಕ್ಕೆ ಮುಂಚೆಯೇ ಮುದುಕ ಪ್ರಶ್ನೆ ಮಾಡಿದ "ಏನಪ್ಪಾ ಈಗ ನಿನ್ನ ಕಾಲಿನ ಉರಿ ಹೇಗಿದೆ?"

"ಈಗ ಸಾಕಷ್ಟು ಕಮ್ಮಿಯಾಗಿದೆ. ಆದರೆ ನಾನು ಇಲ್ಲಿಗೆ ಹೇಗೆ ಬಂದೆ? ನಾನು ಆ ಹುಚ್ಚು ಆನೆಯ...."

ಅವನು ತನ್ನ ಮಾತು ಮುಗಿಸುವುದಕ್ಕೆ ಮುಂಚೆಯೆ ಯುವಕ ಮಧ್ಯೆ ಬಾಯಿ ಹಾಕಿ ಹೇಳಿದ "ನೋಡಿ ಸ್ವಾಮಿ, ಗಾಬರಿಯಾಗಬೇಡಿ ನೀವು ಸಾವಿನಿಂದ ಪಾರಾಗಿ ಮತ್ತೆ ಹುಟ್ಟಿಬಂದಿದ್ದಕ್ಕೆ ಆ ದೇವರನ್ನು ನೆನೆಸಿಕೊಳ್ಳಿ."

ಹಾಗೆಯೇ ತಾನು ಸತ್ತು, ಸಾಯುತ್ತಿದ್ದ ನಿಮ್ಮನ್ನು ಉಳಿಸಿಹೋದ ಆ ಹಾವನ್ನು ಕೃತಜ್ಞತೆಯಿಂದ ನೆನೆಸಿಕೊಳ್ಳಿ. ಇಷ್ಟು ಹೇಳಿ ಅವನು ಹೊರಕ್ಕೆ ಹೊರಟುಹೋದ. ಹಿಂದಿರುಗಿ ಬಂದಾಗ ಅವನ ಕೈಯಲ್ಲಿ ಒಂದು ಸಣ್ಣ ಕೋಲು, ಆ ಕೋಲಿಗೆ ತೆಳ್ಳನೆಯ ಮೂರು ಅಡಿ ಉದ್ದದ ಸತ್ತ ಹಾವು ಸುತ್ತಿಕೊಂಡಿತ್ತು. ಮಲಗಿದ್ದವನು ಆಶ್ಚರ್ಯದಿಂದ ಆ ಹಾವನ್ನು ನೋಡಿದ. ಬಹಳ ವಿಚಿತ್ರ ಆಕೃತಿಯ ಹಾವು ಅದು. "ಆದರೆ ಈ ಹಾವು ನನ್ನನ್ನು ಹೇಗೆ ಬದುಕಿಸಿತು?" ಅಂತ ಪ್ರಶ್ನೆ ಮಾಡಿದ. ಮುದುಕ ಹೇಳಿದ—"

"ನೋಡಪ್ಪಾ, ಆ ಹುಚ್ಚು ಆನೆ ನಿನ್ನನ್ನು ಹಿಂಬಾಲಿಸಿಕೊಂಡು ಓಡಿಬರುತ್ತಿದ್ದ ರೀತಿಯಿಂದಲೇ ಸಾವು ನಿನಗೆ ಕಟ್ಟಿಟ್ಟ ಬುತ್ತಿಯಾಗಿತ್ತು. ಆದರೆ ಅದು ಸೊಂಡಲಿನಿಂದ ಗುಹೆಗೆ ಹೊಡೆಯಲು ಶುರುಮಾಡಿದಾಗ ಗುಹೆಯ ಕಲ್ಲಿನ ಸಂದಿಯಲ್ಲಿ ಕುಳಿತಿದ್ದ ಈ ವಿಷದ ಹಾವಿಗೆ ತೀವ್ರವಾಗಿ ಪೆಟ್ಟುಬಿತ್ತು. ಕೋಪಗೊಂಡು ಅದು ಆನೆಯನ್ನು ಕಚ್ಚಿಬಿಟ್ಟಿತು. ನೋಡಪ್ಪಾ, ಹಾವಿನ ವಿಷದ ಪರಿಣಾಮವನ್ನು ನೀನು ನೋಡಿಲ್ಲ. ಆದರೆ ಆನೆಯಷ್ಟು ದೊಡ್ಡ ಶರೀರ ೪–೫ ಗಂಟೆಗಳಲ್ಲಿ ಕರಗಿಹೋದದ್ದು ಕೂಡ ನನಗೆ ಆಶ್ಚರ್ಯವೆನಿಸುವುದಿಲ್ಲ! ನಾನು ಕಟ್ಟಿಗೆ ಸೀಳುವವನು. ಕಾಡಿನಲ್ಲಿ ಕಟ್ಟಿಗೆ ಒಡೆದು ಮಾರಿ ನಾವು ಜೀವನ ನಡೆಸುತ್ತೇವೆ. ಈ ವಿಷದ ಹಾವುಗಳ ವಿಚಾರ ನಮಗೆ ಚೆನ್ನಾಗಿ ಗೊತ್ತು. ಇದು ಆನೆಯ ಸೊಂಡಿಲಿಗೆ ಸುತ್ತಿಕೊಂಡಿತ್ತು. ನಿನ್ನ ಅದೃಷ್ಟ ಚೆನ್ನಾಗಿತ್ತು ನಾವು ಅಪ್ಪ ಮಕ್ಕಳು ಅಲ್ಲೇ ಒಂದು ಮರದ ಮೇಲೆ ಕಟ್ಟಿಗೆ ಕಡಿಯುತ್ತಿದ್ದೆವು. 'ಕಾಪಾಡಿ....ಕಾಪಾಡಿ' ಅಂತ ಕೂಗು ಕೇಳುತ್ತಲೇ ಗುಹೆಯ ಕಡೆಗೆ ಓಡಿ ಬಂದೆವು. ಒಂದೇ ಏಟಿಗೆ ನಿನ್ನನ್ನು ಆನೆಯ ಮೈಯಿಂದ ಹೊರಗೆಳೆದುಕೊಂಡೆವು. ನಾನು ನಿನ್ನ ಕಾಲಿಗೆ ಕಾಡಿನ ಸೊಪ್ಪು ಬೇರಿನಿಂದ ಔಷಧಿ ಮಾಡಿ ಪಟ್ಟಿ ಕಟ್ಟಿದ್ದೇನೆ. ಇನ್ನೊಂದೆರಡು ಗಂಟೆಗಳಲ್ಲಿ ಓಡಾಡಲು ಸಾಧ್ಯವಾಗುತ್ತೆ. ಆದರೆ ಗಾಯ ಒಣಗಲು ಸ್ವಲ್ಪ ಸಮಯ ಬೇಕು."

ಪ್ರಜ್ಞೆ ಹೋದಮೇಲೆ ಏನು ನಡೆಯಿತು ಎಂಬುದರ ಕಥೆಯನ್ನು ಮುದುಕ ವಿವರಿಸಿ ಹೇಳಿದ್ದ. ಅಂಜೆಯುವನ ಕಣ್ಣುಗಳಲ್ಲಿ ನೀರು ತುಂಬಿಕೊಂಡುಬಂತು. ಹಾಗೆಯೇ ಕೈಬಗ್ಗಿಸಿ ಮುದುಕನ ಕಾಲು ಮುಟ್ಟಲು ಹೋದ. ಆದರೆ, ಮುದುಕ ಹಿಂದೆ ಸರಿದು ಹೇಳಿದ, "ನೋಡಪ್ಪಾ, ನಾವು ಮಾಡಿದ್ದಾದರೂ ಏನು? ತಲೆ ಬಗ್ಗಿಸುವುದಾದರೆ ಆ ಸಮಯಕ್ಕೆ ಸರಿಯಾಗಿ ನನ್ನನ್ನೂ ನನ್ನ ಮಗನನ್ನೂ ಅಲ್ಲಿಗೆ ಕಳಿಸಿದ ಆ ದೇವರ ಎದುರಿಗೆ ಬಗ್ಗಿಸು." ಉಮಾ ಸರಸ್ವತಿ

ಕನಕನ ಕಿಂಡಿ

ಪಲ್ಲವಿ ॥ ಕುಲಕುಲವೆನ್ನುತಿಹರು ಕುಲಯಾವುದು ಸತ್ಯ ಸುಖವುಳ್ಳ ಜನರಿಗೆ

ಅ.ಪ. ॥ ಕೆಸರೊಳು ತಾವರೆ ಪುಟ್ಟಲು ಅದತಂದು ಬಿಸಜನಾಭನಿಗರ್ಪಿಸಲಿಲ್ಲವೇ
ಹಸುವಿನ ಮಾಂಸದೊಳುದಿಸ ಕ್ಷೀರವವಸುಧೆಯೊಳಗೆ
ಭೂಸುರರುಣಲಿಲ್ಲವೇ ॥

ಮೃಗಗಳ ಮೈಯಲ್ಲಿ ಪುಟ್ಟಿದ ಕಸ್ತೂರಿ ತೆಗೆದು ಪೂಸುವರವಿಬುಧರೆಲ್ಲಾ
ಬಗೆವರೆ ನಾರಾಯಣನ್ಯಾವ ಕುಲದವ ಅಗಜೆಯೊಲ್ಲಭಯಾತರ
ಕುಲದವನು

ಆತ್ಮಯಾವ ಕುಲ ಜೀವಯಾವ ಕುಲ ತತ್ವಪಂಚೇಂದ್ರಿಯ ಕುಲ
ವ್ಯಾವುದು

ಆತ್ಮಾಂತರಾತ್ಮ ನೆಲೆಯಾದಿ ಕೇಶವ ಪ್ರೀತನಾದಮೇಲೆ ಯಾತರ
ಕುಲವಯ್ಯ ॥

ಇದು ಕುಲ ಅಂದರೆ ಏನು ಎಂದು ವಿವರಿಸಿರುವ ಕೃತಿ. ನೆಲೆಯಾದಿ ಕೇಶವ ಎಂಬ ಅಂಕಿತವಿದೆ ಸಾಹಿತ್ಯ ಅರ್ಥವತ್ತಾಗಿದೆ. ಇದು ಕನಕದಾಸರ ಕೃತಿ.

ಕನಕದಾಸರು ವಿಜಯನಗರದ ಅರಸರುಗಳಿಗೆ ಗುರುವಾಗಿದ್ದ ವ್ಯಾಸರಾಯ ಸ್ವಾಮಿಗಳ ಪ್ರಮುಖ ಶಿಷ್ಯರುಗಳಲ್ಲಿ ಒಬ್ಬರು. ಪುರಂದರದಾಸರ ಸಮಕಾಲೀನರು. ೧೫೦೯ ರಿಂದ ೧೬೦೭ರವರೆಗೆ ಅಂದರೆ ೯೮ ವರ್ಷಗಳು ಬಾಳಿದ ಒಬ್ಬ ಹರಿದಾಸ ಶ್ರೇಷ್ಠರು. ಇವರ ತಂದೆ ಪಾಳೇಗಾರ್ ಬೀರಪ್ಪ. ತಾಯಿ ಬಚ್ಚಮ್ಮ. ಜಾತಿಯಲ್ಲಿ ಕುರುಬರು ಅಂದರೆ ಹಾಲುಮತಸ್ಥರು. ೧೫೦೯ ರಲ್ಲಿ ಧಾರವಾಡ ಜಿಲ್ಲೆಯ ಬಂಕಾಪುರ ತಾಲ್ಲೂಕಿನಲ್ಲಿ ತಿರುಪತಿಯ ವೆಂಕಟಾಚಲ ಪತಿಯ ವರಪ್ರಸಾದದಿಂದ ಹುಟ್ಟಿದ್ದರಿಂದ ಇವರಿಗೆ ತಿಮ್ಮಪ್ಪ ಎಂದು ನಾಮಕರಣ ಮಾಡಿದರು. ತಿರುಮಲೆಯಪ್ಪ ಎಂಬ ತಮಿಳು ಶಬ್ದವು ತಿಮ್ಮಪ್ಪ ಆಗಿದೆ.

ತಿಮ್ಮಪ್ಪನಿಗೆ ಪ್ರಾಪ್ತವಯಸ್ಸಾದ ಮೇಲೆ ತನ್ನ ಜಮೀನನ್ನು ಉಳುತ್ತಾ ಇದ್ದಾಗ ಹೇರಳವಾದ ಹಣ ದೊರೆತದ್ದರಿಂದ ಇವನಿಗೆ ಕನಕನಾಯಕ ಅಂತ ಹೆಸರಾಯಿತು. ಕನಕ ಅಂದ್ರೆ ಹಣ ಅನ್ನೋದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಮುಂದೆ ಕನಕನಾಯಕ ಕನಕದಾಸನಾದುದಕ್ಕೆ ಒಂದು ಸ್ವಾರಸ್ಯವಾದ ಹಿನ್ನೆಲೆ ಕಥೆ ಇದೆ. ಕನಕನಾಯಕ ತನಗೆ ದೊರೆತ ಹಣದ ಸ್ವಲ್ಪ ಭಾಗದಲ್ಲಿ ಧಾರವಾಡ ಜಿಲ್ಲೆಗೆ ಸೇರಿದ ಹಾವೇರಿಗೆ ಒಂಭತ್ತು ಮೈಲಿ ದೂರದಲ್ಲಿರುವ

ಕಾಗಿನೆಲೆ ಎಂಬ ಗ್ರಾಮದಲ್ಲಿ ಒಂದು ಕೇಶವ ದೇವಾಲಯವನ್ನು ಕಟ್ಟಿಸಿದನು. ಅಂದಿನಿಂದ ಕಾಗಿನೆಲೆಯು ಉತ್ತರ ಕರ್ನಾಟಕದ ತಿರುಪತಿ ಎಂದು ಪ್ರಸಿದ್ಧವಾಯಿತು ಕನಕನಾಯಕನಿಗೆ ತಿರುಪತಿಯ ತಿಮ್ಮಪ್ಪನೇ ಒಲಿದು ಕಾಗಿನೆಲೆಯಲ್ಲಿ ನೆಲಸಿದನೆಂದೂ ತಿರುಪತಿಗೆ ಕೊಡುವ ಕಾಣಿಕೆಯನ್ನು ಕನಕನಾಯಕನಿಗೆ ಕೊಟ್ಟರೆ ತಿಮ್ಮಪ್ಪನಿಗೆ ಮುಟ್ಟುವುದೆಂದೂ ಜನರ ನಂಬಿಗೆಯಾಯಿತು. ಹೀಗಿರಲು ನಾಯಕನ ಭಕ್ತಿಗೆ ಮೆಚ್ಚಿ, ಕೇಶವನು, ಕನಕನ ಕನಸ್ಸಿನಲ್ಲಿ ದರ್ಶನ ಕೊಟ್ಟು ಅವನನ್ನು ತನ್ನ ದಾಸನಾಗುವಂತೆ ಆಜ್ಞೆ ಮಾಡಿದನು. ಆದರೆ ಕನಕನಾಯಕನಿಗೆ ವೈರಾಗ್ಯದ ಗಂಧವೇ ಇರಲಿಲ್ಲ. ಬೇಟೆ, ಮುಷ್ಠಿಯುದ್ಧ ಮತ್ತು ಯುದ್ಧ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ. ಆದ್ದರಿಂದ ಹರಿದಾಸನಾಗಲು ಮೊದಮೊದಲು ಒಪ್ಪದೆ, ಸ್ವಪ್ನಾವಸ್ಥೆಯಲ್ಲೇ "ತಿರುದುಂಬುವುದಕ್ಕೆ ನಾನೇಕೆ ದಾಸನಾಗಲಿ, ನಾನು ದೊರೆತನ ಮಾಡಬೇಕು" ಎಂದನಂತೆ. ಕೆಲವು ಕಾಲಾನಂತರ ಕನಕನ ಪತ್ನಿ ದೈವಾಧೀನವಾಗಲು ಕನಕನು ರಾಜಕಾರ್ಯದಲ್ಲಿ ಉದಾಸೀನನಾದ. ಸ್ವಲ್ಪ ದಿನಗಳು ಕಳೆದ ಮೇಲೆ ದುರದೃಷ್ಟದಿಂದ ತಾಯಿಯೂ ಮೃತಳಾದಳು. ಆಗ ಕನಕನ ಮನಸ್ಸಿನಲ್ಲಿ ವೈರಾಗ್ಯ ಮೂಡಿತು. ಮತ್ತೆ ಸ್ವಪ್ನದಲ್ಲಿ ಕೇಶವನು ಕಾಣಿಸಿಕೊಂಡು ದಾಸನಾಗುವಂತೆ ಆಜ್ಞೆ ಮಾಡಿದನು. ಕನಕನಿಗೆ ದೊರೆತನದ ಹುಚ್ಚು ಬಿಟ್ಟಿತು. ಸಂಪತ್ತನ್ನೆಲ್ಲಾ ಹರಿಗೆ ಸಮರ್ಪಿಸಿ, ಕೂಡಲೇ ಹರಿದಾಸನಾದ. ಏಕತಾರಿಯನ್ನು ತೆಗೆದುಕೊಂಡು ದೇವಾಲಯಕ್ಕೆ ಹೋದ. ತಂದೆತಾಯಿಗಳಿಲ್ಲ. ಹೆಂಡಿರು ಮಕ್ಕಳಿಲ್ಲ. ದಾಸತ್ವ ಸಿದ್ಧಿಸಿಕೊಂಡ. ಕೇಶವನ ಕೃಪೆಯಿಂದ ಶುದ್ಧವಾದ ಕನ್ನಡಭಾಷೆಯಲ್ಲಿ ಕೇಶವನ ಇಪ್ಪತ್ತುನಾಲ್ಕು ನಾಮಗಳಿಂದ ಕೂಡಿದ "ಈಶ ನಿನ್ನ ಚರಣಭಜನೆ ಆಸೆಯಿಂದ ಮಾಡುವೆನು" ಎಂಬ ಕೀರ್ತನೆಯನ್ನು ಹಾಡಿದ. ಅನಂತರ ವ್ಯಾಸರಾಯಸ್ವಾಮಿಗಳಲ್ಲಿಗೆ ಹೋಗಿ ದಾಸದೀಕ್ಷೆಯನ್ನು ಸ್ವೀಕರಿಸಿ ಅಂದಿನಿಂದ ಕನಕದಾಸನಾದ. ಇವನ ಅಪಾರವಾದ ಭಕ್ತಿಗೆ ಮೆಚ್ಚಿ ಕೇಶವನು, ನೆನೆಸಿದಾಗ ದರ್ಶನ ಕೊಡುವೆನೆಂದು ಮಾತುಕೊಟ್ಟ. ಮೊಟ್ಟಮೊದಲು ಕನಕನಿಗೆ ವಿದ್ಯೆ ಇರಲಿಲ್ಲ. ಮಂತ್ರೋಪದೇಶವಂತೂ ಮೊದಲೇ ಇರಲಿಲ್ಲ. ಆದರೆ ಹರಿಕೃಪೆಯಾದ ಮೇಲೆ ಕೇಳಬೇಕೇ? ಕನಕ ಸರ್ವಜ್ಞನಾದ.

ಕನಕನಾಯಕನು ಕನಕದಾಸನಾದ ಮೇಲೆ ಕನ್ನಡ ಭಾಷೆಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಕೂಡಿದ ಸಾವಿರಾರು ಕೀರ್ತನೆಗಳನ್ನು ರಚಿಸಿ, ದಾಸಸಾಹಿತ್ಯದ ನಿಧಿಯನ್ನು ಮಾನವ ಜನಾಂಗಕ್ಕೆ ಕರುಣಿಸಿರುತ್ತಾರೆ.

ಆದರೆ ಈಗ ಕೇವಲ ನಾಲ್ಕುನೂರು ಕೃತಿಗಳಷ್ಟು ಮಾತ್ರ ದೊರೆತಿವೆ. ಇದು ನಮ್ಮ ದುರದೃಷ್ಟ.

ಒಂದು ಸಲ ಕನಕದಾಸರು ಉಡುಪಿ ಕ್ಷೇತ್ರಕ್ಕೆ ಬಂದರು. ಅಲ್ಲಿಯ ದೇವಾಲಯದಲ್ಲಿ ಶ್ರೀಕೃಷ್ಣದರ್ಶನ ಮಾಡಲು ಗರ್ಭಾಂಕಣದಲ್ಲಿ ಪ್ರವೇಶ ಮಾಡಲು ನಿಯಮಗಳು ಬಹಳವಾಗಿದ್ದುವು. ಆಗಲೇ 'ಕುಲಕುಲ' ವೆಂಬ ಕೀರ್ತನೆಯನ್ನು ಹಾಡಿ, ಭಕ್ತಿ ಪಂಥದಲ್ಲಿ ಜಾತಿ ಮತಗಳಿಗೆ ಸ್ಥಾನವಿಲ್ಲವೆಂಬು ದನ್ನು ತಿಳಿಸಿದರು. "ನಿಮಗೆ ದೇವರು ಒಲಿದಿದ್ದರೆ ನಿದರ್ಶನವನ್ನು ತೋರಿಸಿ. ಈ ತತ್ತ್ವಜ್ಞಾನ ನಮಗೆ ಬೇಡ" ಎಂದರು ದೇವಾಲಯದ ಅಧಿಕಾರಿಗಳು. ವೈರಾಗ್ಯ ಚಕ್ರವರ್ತಿಗಳಾಗಿದ್ದ ದಾಸರು ಆ ಮಾತಿಗೆ ಖಿನ್ನರಾಗಲಿಲ್ಲ. ಪರವಶ ರಾಗಿ ಶ್ರೀಕೃಷ್ಣನನ್ನು ಸ್ತೋತ್ರ ಮಾಡುತ್ತ ನಿಂತುಬಿಟ್ಟರು. ಆಗ ಒಂದು ವಿಚಿತ್ರ ಸಂಗತಿ ನಡೆಯಿತು. ಗರ್ಭಾಂಕಣದಲ್ಲಿ ಪೂರ್ವಾಭಿಮುಖನಾಗಿದ್ದ ಶ್ರೀಕೃಷ್ಣಮೂರ್ತಿಯು ಥಟಕ್ಕನೆ ಪಶ್ಚಿಮಾಭಿಮುಖನಾದ. ಗರ್ಭಾಂಕಣದ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಇದ್ದಕ್ಕಿದಂತೆ ಕಿಂಡಿಯೊಂದು ಕಾಣಿಸಿಕೊಂಡು ಅದರಿಂದ ಶ್ರೀಕೃಷ್ಣ ಪರಮಾತ್ಮನು ಕನಕದಾಸರಿಗೆ ದಿವ್ಯದರ್ಶನವನ್ನು ಕೊಟ್ಟನು. ಎಷ್ಟಾಗಲೀ ಪರಮಾತ್ಮ ಭಕ್ತಪರಾಧೀನ! ಮುಂದೆ ಕನಕದಾಸರಿಗೆ ದರ್ಶನವಾದ ಸ್ಥಳದಲ್ಲಿ "ಕನಕನಕಿಂಡಿ" ಎಂದು ಒಂದು ಕಿಟಕಿಯು ನಿರ್ಮಿತ ವಾಯಿತು. ಈಗಲೂ ಭಕ್ತಾದಿಗಳು ಆ ಕಿಂಡಿಯಿಂದ ಶ್ರೀಕೃಷ್ಣನ ದರ್ಶನ ಮಾಡಿ, ಮಹಾದ್ವಾರವನ್ನು ಪ್ರವೇಶಿಸುತ್ತಾರೆ. ಈ ಕಿಂಡಿಯ ಎದುರಿನಲ್ಲಿ ಒಂದು ಮಂಟಪದಲ್ಲಿ ಕನಕದಾಸರ ವಿಗ್ರಹವನ್ನು ನಿಲ್ಲಿಸಿದ್ದಾರೆ.

ದಾಸರ ಪದಗಳು ಕೇವಲ ಗಾನಪ್ರಧಾನಗಳಲ್ಲ. ಶಬ್ದಪ್ರಧಾನಗಳೂ ಅಲ್ಲ, ಅಲ್ಲಿ ನೋಡಬೇಕಾದುದು ಅರ್ಥ. ಅಲ್ಲಿ ಮಾಡಿಕೊಳ್ಳಬೇಕಾದುದು ಅನುಭವ. ದಾಸಸಾಹಿತ್ಯವು ಪಾಮರ ಸಾಹಿತ್ಯವಲ್ಲ. ಪಂಡಿತರ ಸಾಹಿತ್ಯವೂ ಅಲ್ಲ, ಇಬ್ಬರಿಗೂ ನಿಲುಕದ ಅನುಭವಗಳ ಸಾಹಿತ್ಯ. ಕನಕದಾಸರ ಕೀರ್ತನೆಗಳೆಲ್ಲವೂ ನೀತಿಯ ನೆಲೆವೀಡು. ಮಾನವನು ಸಭ್ಯನಾಗಬೇಕೆಂಬುದೇ ದಾಸರ ಗುರಿ. ಮಾನವನು ಸಭ್ಯನಾದರೆ ಭಕ್ತನಾಗಿ ಅನಂತರ ಮುಕ್ತನಾಗುತ್ತಾನೆ. ಈ ಗುರಿ ಯನ್ನು ಗಾನಕಲೆಯಿಂದ ಸಾಧಿಸಿ ಐವತ್ತು ವರ್ಷಗಳಿಗೂ ಮೇಲ್ಪಟ್ಟು ಸಮಾಜ ಸೇವೆ ಮಾಡಿದರು. ಕನಕದಾಸರು ಪುರಂದರದಾಸರಿಗಿಂತ ದೀರ್ಘ ಜೀವಿಗಳು.

ಕನಕದಾಸರ ಕಾಲದಲ್ಲಿ ಕುರುಬರು ಅಜ್ಞಾನದಿಂದ ಮನೆಮನೆಗೂ ದೇವರ

ಹೆಸರ ಮೇಲೆ ದೇವದಾಸಿಯರನ್ನು ಬಿಡುತ್ತಿದ್ದರು; ದೇವರ ಹೆಸರ ಮೇಲೆ ಪ್ರಾಣಿಗಳನ್ನು ಬಲಿಕೊಡುತ್ತಿದ್ದರು. ಅಲ್ಲದೆ ಮದ್ಯಪಾನ ಮಾಡುತ್ತಿದ್ದರು. ಕನಕದಾಸರು ಈ ಮೂರು ದುಷ್ಟಾಚಾರಗಳನ್ನೂ ತಮ್ಮ ಅಮೂಲ್ಯವಾದ ಉಪದೇಶದಿಂದ ತಪ್ಪಿಸಿದರು. ಇದು ನಿಜವಾಗಿಯೂ ಮಹತ್ತರವಾದ ಸಾಧನೆಯೇ ಸರಿ.

ಕನಕದಾಸರು ದೇವರದಾಸಾನುದಾಸರು. ತಮ್ಮಲ್ಲಿ ಯಾವ ರೀತಿಯ ಅಹಂಕಾರವೂ ಇಲ್ಲವೆಂದು ಸಾರಿ ಹೇಳುವ ಕೃತಿ "ದಾಸದಾಸರ ಮನೆಯ ದಾಸಿಯರ ಮಗನಾನು." "ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ" ಎಂಬ ಕೃತಿಯಲ್ಲಿ ಕನಕದಾಸರು ಅತ್ಯಂತ ಕಠಿಣವಾದ ವೇದಾಂತ ರಹಸ್ಯಗಳನ್ನು ಅತಿಸರಳವಾಗಿ ವಿವರಿಸಿದ್ದಾರೆ. ಎಂಥಾ ಕಷ್ಟದ ದೆಸೆಯಲ್ಲೂ ಕೇಶವನನ್ನು ಭಕ್ತಿಯಿಂದ ಸ್ಮರಿಸಿದರೆ ಜೀವಿಗಳು ತಲ್ಲಣಿಸಬೇಕಾದ್ದಿಲ್ಲವೆಂಬ ಅಭಿಪ್ರಾಯವನ್ನು "ತಲ್ಲಣಿಸದಿರು ಕಂಡ್ಯ ತಾಳು ಮನವೇ" ಎಂಬ ಕೃತಿಯಲ್ಲಿ ತಿಳಿಸಿರುತ್ತಾರೆ. ಜೀವಾತ್ಮ ಪರಮಾತ್ಮನನ್ನು ತುಲನಮಾಡುವುದರಲ್ಲಿ ಕನಕದಾಸರು ತೋರಿಸಿರುವ ಯಥಾರ್ಥವನ್ನು "ನಾನೇನು ಬಲ್ಲೆ ನಿನ್ನ ನಾಮದ ಮಹಿಮೆಯ" ಎಂಬ ಕೀರ್ತನೆಯಲ್ಲಿ ವ್ಯಕ್ತಪಡಿಸಿದ್ದಾರೆ. ಮನುಷ್ಯನು ಎಷ್ಟು ಜನ್ಮಗಳನ್ನು ಎತ್ತಿರಬಹುದೆಂಬ ಪ್ರಶ್ನೆಗೆ ಬಹು ಸ್ವಾರಸ್ಯವಾಗಿ ಉತ್ತರವನ್ನು "ಮುಂದೆ ದಯವಿರಲಿ ಶ್ರೀಹರಿಯೆನೊಂದೆ ನಾನು" ಎಂಬ ಕೃತಿಯಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ. ಹೀಗೆ ಇನ್ನೂ ಎಷ್ಟೋ ಕೀರ್ತನೆಗಳಿವೆ. ಅವುಗಳನ್ನೆಲ್ಲಾ ಕೇಳಿ ಅವುಗಳಲ್ಲಿರುವ ತತ್ವಗಳನ್ನು ಅರಿತುಕೊಂಡರೆ ನಮ್ಮ ಜನ್ಮ ಸಾರ್ಥಕವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಕನಕದಾಸರು 'ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ ಮತ್ತು ಹರಿಭಕ್ತಸಾರ ಎಂಬ ನಾಲ್ಕು ಸೊಗಸಾದ ಕಾವ್ಯಗಳನ್ನು ರಚಿಸಿದ್ದಾರೆ ಕಾವ್ಯದೃಷ್ಟಿಯಿಂದ ಇವು ಬಹಳ ಹೃದಯಂಗಮವಾಗಿವೆ. 'ಹರಿಭಕ್ತಿಸಾರ'ದಲ್ಲಿ ಅವರ ದೈನ್ಯ ಸ್ವಭಾವವನ್ನು ಬಹಳ ರಮಣೀಯವಾಗಿ ವಿಜ್ಞಾಪಿಸಿಕೊಂಡಿರುತ್ತಾರೆ:

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು

ಏನಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮ್ಮಾನದಿಂದೇ ದೇವರಕ್ಷಿಸು ನಮ್ಮನವರತ

ಹೀಗೆ ತಮ್ಮ ಅಹಂಕಾರದ ದಿವಸಗಳನ್ನು ಸ್ಮರಿಸಿ ಪಶ್ಚಾತ್ತಾಪಪಟ್ಟು ಮರೆ ಹೋಗಿದ್ದಾರೆ. ಇದನ್ನು ನಾವೂ ಅನುಸರಿಸಲು ಎಂಥಾ ಸುಲಭವಾಗಿದೆ!

ಕನಕದಾಸರ ಕಾವ್ಯಸೃಷ್ಟಿಗೆ ಮತ್ತೊಂದು ಪದ್ಯ ನೋಡೋಣ. 'ನಳಚರಿತ್ರೆ' ಯಲ್ಲಿ ದಮಯಂತಿಯು ದಿಕ್ಕುಕೆಟ್ಟು ಅರಣ್ಯದಲ್ಲಿ ಹೋಗುತ್ತಿದ್ದಾಗ ಆಕೆ ಯನ್ನು ವ್ಯಾಪಾರಿಗಳು ಕಂಡು ಬೆರಗಾಗಿ ಬೆದರುವರು.

"ಆರಿವಳು ವನಲಕ್ಷ್ಮಿಯೋ ಸುರ
ನಾರಿಯೋ ಮಾರಾಂಗನೆಯೋ ಮದ
ನಾರಿಸತಿಯೋ ಸರಸತಿಯೋ ಮೋಹಸುರವಾಸಿನಿಯೋ
ಆರ ವನಿತೆಯೊ ಮಾಯಾರೂಪಿನ
ಭೂರಿ ಭೂತವೊ ತಿಳಿಯಲರಿದಿವ
ಳಾರೆನುತ ಭಯಗೊಂಡು ನೋಡಿದರಲ್ಲಿ ಬಣಜಿಗರು"

ಹೆಂಡತಿಯನ್ನು ಬಿಟ್ಟು ಹೊರಟ ನಳನು ಕಾಳ್ಕಿಚ್ಚಿನಲ್ಲಿ ಬಿದ್ದು ಸಾಯುತ್ತಿದ್ದ ಕಾರ್ಕೋಟಕನನ್ನು ರಕ್ಷಿಸಲು ಹೋಗಿ ಅದರ ಕಡಿತಕ್ಕೆ ಗುರಿಯಾಗಿ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ಕುರೂಪಿಯಾದ, ಕನಕದಾಸರು ವರ್ಣಿಸಿರುವ ರೀತಿ ಕನ್ನಡನಾಡಿನಲ್ಲಿ ಕೇಳದವರಿಲ್ಲ.

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮ ಮೀಸೆಗಳ
ಜಿಡ್ಡು ದೇಹದ ಗುಜ್ಜು ಗೊರಲಿನ
ಗಿಡ್ಡು ರೂಪಿನ ಹರಕು ಗಡ್ಡದ
ಹೆಡ್ಡನಾದ ಕುರೂಪಿತನವಲಿ ನೃಪತಿ ವಿಷದಿಂದ॥

ಶ್ರೀರಾಮನು ರಾವಣನನ್ನು ಸಂಹರಿಸಿ ತನ್ನ ದೇಶಕ್ಕೆ ಹಿಂತಿರುಗುವ ಕಥಾ ಸಂದರ್ಭವನ್ನು ಅವಲಂಬಿಸಿ ತಮ್ಮ 'ರಾಮಧಾನ್ಯ ಚರಿತ್ರೆ'ಯಲ್ಲಿ ಲೌಕಿಕ ವಾದ ನೀತಿಯನ್ನು ಸಾರಿದ್ದಾರೆ.

ಕನಕದಾಸರ ಈ ಕೃತಿಗಳನ್ನು ಕೇಳುತ್ತಿದ್ದರೆ, ಓದುತ್ತಿದ್ದರೆ ಅವರ ಶೈಲಿಯ ಸೊಗಸು ತಿಳಿಯುತ್ತದೆ. ಅವರ ಒಂದೊಂದು ಕೃತಿಯೂ ಮಾನವನ ಉದ್ಧಾರದ

ದಾರಿಯಲ್ಲಿ ನಿಲ್ಲಿಸಿರುವ ದೀಪದಂತೆ ಹರಿಕಥೆಯನ್ನು ಕೇಳುವುದು, ಹರಿಭಕ್ತಿ, ಹರಿಚರಣ ಸೇವೆಗಳು ಮೋಕ್ಷದಾಯಕ ಎಂಬ ತತ್ವವನ್ನು ಅವರ ಈ ಪದ್ಯದಲ್ಲಿ ತಿಳಿಯಬಹುದು.

ಕೇಳುವುದು ಹರಿಕಥೆಯ ಕೇಳಲು
ಹೇಳುವುದು ಹರಿಭಕ್ತಿ ಮನದಲಿ
ತಾಳುವುದು ಹಿರಿದಾಗಿ ನಿನ್ನಯ ಚರಣ ಸೇವೆಯಲಿ
ಊಳಿಗವ ಮಾಡುವುದು ವಿಷಯವ
ಹೂಳುವುದು ನಿಜಮುಕ್ತಿ ಕಾಂತೆಯ
ನಾಳುವುದು ಕೃಪೆಮಾಡಿ ರಕ್ಷಿಸು ನಮ್ಮನನವರತ

ಡಾ|| ವಿ. ಎಸ್. ಸಂಪತ್ಕುಮಾರಾಚಾರ್ಯ



ನನ್ನ ಮರ್ಯಾದೆಯೇ ನನ್ನ ಜೀವ, ಎರಡೂ ಒಂದೇ ಆಗಿ ಬೆಳೆದಿವೆ. ನನ್ನ ಮರ್ಯಾದೆ ನನ್ನಿಂದ ಹೋದರೆ ನನ್ನ ಬದುಕೂ ಮುಗಿಯಿತು.

ಷೇಕ್ಸ್‌ಪಿಯರ್

ಒಂದೇ ಒಂದು ಕರ್ತವ್ಯವನ್ನು ಕಡೆಗಣಿಸಲು ನಮ್ಮನ್ನು ಪ್ರೇರೇಪಿಸಿ ಪರಿಹಾರವಾಗಬಲ್ಲಂಥ ಒಳ್ಳೆ ವಿಷಯಗಳು ಜೀವನದಲ್ಲಿ ಯಾವುವೂ ಇಲ್ಲ.

—ಮ್ಯಾಸ್ವೆಬ್ಯಾನ್

ಎಚ್ಚರಿಕೆಯಿಂದ ಕಣ್ಣು ತೆರೆದು ನೋಡುತ್ತಲಿದ್ದು, ಅಚಲವಾದ ನಿರ್ಧಾರದಿಂದಿದ್ದರೆ, ಮನುಷ್ಯ ತನಗೇ ತಿಳಿಯದಂತೆ ಬುದ್ಧಿವಂತನಾಗಿ ಬೆಳೆಯುತ್ತಾನೆ,

—ಬಟ್ಲರ್

ಮುಖವಿಲ್ಲದೆ ಹುಟ್ಟಿದ ಮಗು

೧೯೭೫ರ ಸೆಪ್ಟೆಂಬರ್ ೬ನೇ ದಿನಾಂಕ ಥೆಲ್ಮಾ ಪರ್ಕಿನ್ಸ್ ಎಂಬವಳಿಗೆ ಮರೆಯದ ದಿನವಾಗಿತ್ತು. ಪೂರ್ವ ಟೆನೆಸ್ಸೀ ಪ್ರದೇಶದ ಮೇರಿವಿಲ್‌ನಲ್ಲಿದ್ದ ತನ್ನ ಮನೆಯಿಂದ ತನ್ನ ಕಸುಬಿಗಾಗಿ ಹೋಗುತ್ತಿದ್ದಳು. ಹಿಂದಿನ ವರ್ಷಗಳಲ್ಲಿ ತನ್ನ ಜೀವನದಲ್ಲಾಗಿದ್ದ ಅನೇಕ ಬದಲಾವಣೆಗಳನ್ನು ಕುರಿತು ಬೆರಗುಪಡುತ್ತಿದ್ದಳು. ತನ್ನ ೩೮ನೇ ವಯಸ್ಸಿನಲ್ಲಾಗಲೇ ಅವಳಿಗೆ ಮೂವರು ಬೆಳೆದ ಮಕ್ಕಳಿದ್ದರು. ಈಗ ತನ್ನ ಮನೆಯಿಂದ ದೂರದ ಊರಿನಲ್ಲಿದ್ದ ಅವಳು, ತನ್ನ ಇಡೀ ಜೀವನದ ಪರಮಗುರಿಯಾದ ನರ್ಸ್ ಕಸುಬಿನಲ್ಲಿ ಶಿಕ್ಷಣ ಪಡೆದಿದ್ದಳು. ನಾಕ್ಸ್‌ವಿಲ್‌ನಲ್ಲಿರುವ ಯೂನಿವರ್ಸಿಟಿ ಆಫ್ ಟೆನೆಸ್ಸೀ ಮೆಮೋರಿಯಲ್ ಸಂಶೋಧನ ಕೇಂದ್ರ ಮತ್ತು ಆಸ್ಪತ್ರೆಯ ಹಸುಗೂಸುಗಳ ತೀವ್ರ ಚಿಕಿತ್ಸಾ ವಿಭಾಗದಲ್ಲಿ ಕೆಲಸ ಮಾಡಲು ಈಗತಾನೆ ಅವಳಿಗೆ ನೇಮಕಾತಿ ದೊರಕಿತ್ತು.

ಆ ದಿನ ಬೆಳಗ್ಗೆ ಥೆಲ್ಮಾ ಆಸ್ಪತ್ರೆಗೆ ಕಾಲಿಟ್ಟ ಕೂಡಲೇ ಏನೋ ಒಂದು ಎಡವಟ್ಟಾಗಿದೆ ಎಂದು ಅವಳಿಗೆ ಎನಿಸಿತು. "ಹೊರಂಗಳದಲ್ಲೇ ಅದು ಗೋಚರವಾಗುತ್ತಿತ್ತು" ಎಂದು ಅವಳು ಸ್ಮರಿಸುತ್ತಾಳೆ. ಎಂದಿನಂತೆ ಮಾಡುವ ಯೋಗಕ್ಷೇಮದ ಬದಲು ಎಲ್ಲೆಲ್ಲೂ ಮುಸುಕಿನೊಳಗಿನ ಧ್ವನಿ, ತಪ್ಪಿಸಿಕೊಳ್ಳುವ ದೃಷ್ಟಿ. ತೀವ್ರ ಚಿಕಿತ್ಸಾ ವಿಭಾಗ (ತೀ.ಚಿ.ವಿ.) ತಲಪಿದೊಡನೆ ಒಂದು ಚಿಕ್ಕ ಜೋಗುಣಿಯಲ್ಲಿ ಬಿದ್ದಿದ್ದ ಕೂಸಿನ ಕಡೆಗೆ ಯಾರೋ ಕೈತೋರಿದರು. ಮತ್ತೊಬ್ಬ ನರ್ಸ್ ಹೇಳಿದಳು, "ಅದನ್ನು ನೋಡಬೇಡ ಅಸಹ್ಯ."

"ಏನಾಗಿದೆ ಕೂಸಿಗೆ?"

"ಅವಳು ಮುಖವಿಲ್ಲದೆಯೇ ಹುಟ್ಟಿದ್ದಾಳೆ. ಕಣ್ಣುಗಳಿಲ್ಲ, ಮೂಗಿಲ್ಲ, ನಿಜವಾದ ಬಾಯೂ ಇಲ್ಲ. ಘೋರ ಕುರೂಪ."

ಥೆಲ್ಮಾಳು ತೀ.ಚಿ.ವಿ.ಯ ಒಳಗೆ ಜೋಗುಣಿಯ ಬಳಿಗೆ ಹೋದಳು. ಹಿಂದಿನಿಂದ ಮಗುವನ್ನು ನೋಡಿದವಳಿಗೆ ತಲೆ ತುಂಬ ನಸುಕಂದು ಬಣ್ಣದ ಗುಂಗುರು ಕೂದಲು ತುಂಬಿದ ಸಾಮಾನ್ಯವಾದ ಮಗುವಿನ ತಲೆಯಂತೆಯೇ ಅದು ಕಂಡು ಬಂದಿತು. ಆದರೆ ಮಗುವಿನ 'ಮುಖ'ದ ಕಡೆ ನೋಡಿದಾಗ ಕಂಡದ್ದೇನು? ಆಕಾರವಿಲ್ಲದ, ಸಿಂಬಳದಿಂದ ಒದ್ದೆಯಾದ ಪೊರೆಗಳ ಮುದ್ದೆ. ಅವರಲ್ಲಿ

೧೯೮೩ರ ನವೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯಲ್ಲಿ ಪ್ರಕಟವಾದ ಸ್ಟ್ಯಾನ್ಲಿ ಏಂಜಲ್ ಬರ್ಡ್ ಅವರ 'ಬಾರನ್ ವಿತೌಟ್ ಎ ಫೇಸ್' ಲೇಖನದ ಅನುವಾದ.

ಉಸಿರಾಡಲೂ ಆಹಾರ ಸೇವಿಸಲೂ ಇದ್ದ ಒಂದು ಸೊಟ್ಟ ತೂತು. ಅವಳ ಕಣ್ಣುಗಳು ಇರಬೇಕಾಗಿದ್ದ ಸ್ಥಳವೇ ತೋರುತ್ತಿರಲಿಲ್ಲ.

ಮೊದಲು ಥೆಲ್ಮಾ ಅದನ್ನು ನೋಡಿ ಬೆರಗಾಗಿ ಬಿರುಗಣ್ ಬಿಟ್ಟಳು. ಅನಂತರ ಅವಳ ಕಣ್ಣಿನಲ್ಲಿ ನೀರಾಡಿತು. "ಆ ಪಾಪದ ಮಗು ಅಸಹಾಯಕವಾಗಿ ಅಪಾಯ ಸ್ಥಿತಿಯಲ್ಲಿದ್ದುದನ್ನು ನೋಡಿ ನನಗೆ ಅಳದೆ ಇರಲಾಗಲಿಲ್ಲ" ಎಂದಳು.

ಸಾಮಾನ್ಯವಾಗಿ ಅಂತಹ ಅಸಾಧ್ಯ ಊನಗಳೊಡನೆ ಇನ್ನೂ ಏನೇನೋ ಶಾರೀರಕ ಸಮಸ್ಯೆಗಳು ಉದ್ಭವಿಸುವುವು. ಆದರೆ ಆ ಮಗುವಿನ ವೈದ್ಯಕೀಯ ಪರೀಕ್ಷೆಯಿಂದ ಅದಕ್ಕೆ ಬಲವಾದ ಹೃದಯ, ದೃಢವಾದ ಶ್ವಾಸಕೋಶಗಳು, ಪೂರ್ಣವಾಗಿ ರೂಪುಗೊಂಡ ಜೀರ್ಣಾಂಗಗಳು, ಸಾಮಾನ್ಯವಾಗಿ ಇರಬೇಕಾಗಿದ್ದ ದೈಹಿಕ ನಿರಿಚ್ಛಾ ಪ್ರತಿಕ್ರಿಯೆಗಳು (Reflexes) ಇದ್ದುದು ಗೊತ್ತಾಯಿತು. ಅಷ್ಟೇ ಅಲ್ಲ, ಕಿವುಡುತನವಾಗಲಿ ಮೆದುಳಿನ ಊನವಾಗಲಿ ಇರಲಿಲ್ಲ. ಡಾಕ್ಟರುಗಳು ಹೆಸರಿಸುವಂತೆ, "ಮುಖಮಧ್ಯದ ಸೀಳಿನ ಸಿಂಡ್ರೋಮ್" ಎಂಬ ಅಪರೂಪವಾದ ಭ್ರೂಣದ ಕುಂಠಿತ ಬೆಳವಣಿಗೆಯ ಚಿಹ್ನೆಗಳ ಗುಂಪು ಹೊರತು ಅವಳು ಬಹು ನಿರೋಗಿಯಾದ ಮಗುವಾಗಿದ್ದಳು. ಕೆಲವು ದಿನಗಳ ನಂತರ ಶೀಚಿವಿ ವಿಚಾರಣಾಧಿಕಾರಿಣಿ ತನ್ನ ಸಿಬ್ಬಂದಿಯ ಸಭೆಯನ್ನು ಏರ್ಪಡಿಸಿ, ಅವಳು ಹೇಳಿದಳು, "ಮಗುವಿನ ಸ್ಥಿತಿಯು ವಿಚಾರವಾಗಿ ಯಾರೇ ಆಗಲಿ ಏನನ್ನೂ ಮಾತನಾಡಬಾರದು. ಅವಳ ಹೆಸರು ಆಲಿಸ್. ಪ್ರಪಂಚದಲ್ಲಿ ಅವಳ ಇರುವಿಕೆಗೂ ಒಂದು ಉದ್ದೇಶವಿದೆ. ಬೇರೆ ಯಾವುದೇ ಹಸುಗೂಸಿನಂತೆಯೋ ಇವಳನ್ನೂ ನಾವು ಉಪಚರಿಸತಕ್ಕದ್ದು."

ಆದರೆ ಸದುದ್ದೇಶದಿಂದ ಆಡಿದ ಮಾತುಗಳಾದರೂ ಅದಕ್ಕೆ ವಿವಿಧ ಪ್ರತಿಕ್ರಿಯೆಗಳನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಶೀಚಿವಿಗೆ ಹೊಸದಾಗಿ ಬರುವವರು ದಂಗಾದಂತೆ ತೋರಿಬರುತ್ತಿದ್ದರಲ್ಲದೆ ಕೆಲವು ಸಲ ಏದುಸಿರು ಬಿಡುತ್ತ ಕಣ್ಣಿನ ಮೇಲೆ ಕೈಯಿಟ್ಟುಕೊಂಡು ಓಡಿಹೋಗುವುದೂ ಇತ್ತು. ಆಲಿಸಳನ್ನು ಉಪಚರಿಸುತ್ತಿದ್ದವರೂ ತಮ್ಮ ಕೆಲಸವನ್ನು ಅಷ್ಟೊಂದು ಶ್ರದ್ಧೆಯಿಂದ ಮಾಡುತ್ತಿರಲಿಲ್ಲ. ಥೆಲ್ಮಾ ಮಾತ್ರ ಆ ಮಗುವನ್ನೆತ್ತಿ ಎದೆಗವಚಿಕೊಂಡು ಲಲ್ಲೆಗರೆಯುತ್ತಿದ್ದಳು. "ಸಾಕಷ್ಟು ಮಂದಿ ಮಕ್ಕಳನ್ನು ನಾನು ಎತ್ತಿಕೊಂಡಿರುವುದರಿಂದ ಅವಕ್ಕೆ ಯಾವಾಗ ಮುದ್ದಾಡಬೇಕೆನಿಸುತ್ತದೆ ಎಂದು ನನಗೆ ಗೊತ್ತು. ಆಲಿಸಳಿಗೂ ಮುದ್ದು ಧಾರಾಳವಾಗಿ ಬೇಕಾಗಿದೆ."

ಆಶಾಕಿರಣ: ಆಲಿಸಳ ಬೆದರಿದ್ದ ತಾಯಿ ಈ ಮೊದಲೇ ೧೫ ತಿಂಗಳ

ಮಗುವಿದ್ದ ೧೮ ವಯಸ್ಸಿನವಳು. ಮೊದಲು, ಮುಖವೇ ಇಲ್ಲದ ಮಗುವಿನ ಗೊಡವೆಯೇ ಬೇಡವೆಂದಳು. ಸ್ವಲ್ಪ ತಿಳಿವು ಹೇಳಿದ ನಂತರ ಆ ಮಗುವಿನ ಎಚ್ಚರಿಕೆಯನ್ನು ವಹಿಸಿಕೊಳ್ಳಲು ಒಪ್ಪಿಕೊಂಡಳು. ಆದರೆ ಉಣಿಸೂಡಿಸುವ ಕೊಳವೆಯನ್ನು ಮುಖದ ಮೇಲಿನ ರಂಧ್ರಕ್ಕೆ ಇಡಬೇಕಾಗ ಬಂದಾಗ ಸಿರಾಸೆ ಯಿಂದ ಹಿಂಜರಿದು, "ಥೆಲ್ಮಾ ನೀನೇ ಮಾಡು" ಎನ್ನುತ್ತಿದ್ದಳು. ಆಸ್ಪತ್ರೆಯಲ್ಲಿ ಕೆಲವು ವಾರಗಳಿದ್ದ ಮೇಲೆ ಆಲಿಸಳನ್ನು ಅವಳ ತಾಯಿಯ ಜತೆಯಲ್ಲಿ ಮನೆಗೆ ಕಳಿಸಲಾಯಿತು. ಥೆಲ್ಮಾಳಿಗೆ ಮಾತ್ರ ಆಶ್ಚರ್ಯ. ಎಲ್ಲ ಕೂಸುಗಳಂತೆ ಆ ಮಗುವಿಗೆ ಬೇಕಾದ ಗಾಢವಾದ ಪ್ರೇಮ ಆ ಮನೆಯಲ್ಲಿ ಸಿಕ್ಕಿ ಅದರ ಜೀವನ ಎಲ್ಲರಂತಾದೀತೆ?

ಸ್ವಲ್ಪ ಕಾಲದವರೆಗೆ ಆಲಿಸಳ ತಾಯಿ ಆ ಮಗುವಿಗೆ ಬೇಕಾದ ನಿಗಾ ಕೊಡಲು ಪ್ರಯತ್ನಿಸಿದಳು. ಆದರದು ವ್ಯರ್ಥಪ್ರಯತ್ನ. ಹದಿಹರೆಯದ ತಂದೆ ಯಂತೂ ಮಗುವಿನ ಹೊಣೆಯನ್ನು ವಹಿಸಿಕೊಳ್ಳಲು ನಿರಾಕರಿಸಿದನು. ಕುಟುಂಬದ ಇತರರು ಆ ಮಗುವೊಂದು ಶನಿಯೆಂದೇ ಎಣಿಸಿದರು.

ಗಾಳಿಯಲ್ಲಿ ತೇಲಾಡುವ ವಿಷಾಣುಗಳನ್ನೂ ಧೂಳನ್ನೂ ಶೋಧಿಸತಕ್ಕ ಮೂಗೇ ಆಲಿಸಳಿಗೆ ಇರಲಿಲ್ಲವಷ್ಟೆ, ಬಾಯೆಂಬ ರಂಧ್ರವನ್ನು ಆಗಾಗ ತೊಳೆಯ ಬೇಕಾದುದೂ ಅದರೊಳಗಿನ ಗಾಳಿಯನ್ನು ಸಿರಂಜ್ ಮೂಲಕ ಆಗಾಗ ಹೊರ ತೆಗೆಯಬೇಕಾದದೂ ಅಗತ್ಯವೆಂದು ವೈದ್ಯರು ಒತ್ತಿ ಹೇಳುತ್ತಿದ್ದರು. ಆದರೆ ಮಗುವಿನ ಉಸಿರಾಡುವ ರಂಧ್ರ ಕಟ್ಟಿಹೋಗಿ ಆಗಾಗ ಚಿಕಿತ್ಸಾಲಯಕ್ಕೆ ಬರುತ್ತಿದ್ದುದು ಅದರ ನಿಗಾ ತಾಯಿಯ ದಕ್ಷತೆಗೆ ಮೀರಿದ ವಿಚಾರವೆಂಬುದನ್ನು ತೋರಿಸುತ್ತಿತ್ತು.

ವಾರಗಳು ಕಳೆದಂತೆ ಆಲಿಸಳ ಒಳಿತಿನ ಹೊಣೆಯನ್ನು ಇತರರು ಹೆಚ್ಚು ಹೆಚ್ಚಾಗಿ ವಹಿಸಿಕೊಂಡರು. ಅವಳ ತಾಯಿಗೆ ಗೊತ್ತಾದ ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲದಾಗ ಆ ಭಾಗದ ಆರೋಗ್ಯ ಇಲಾಖೆಯ ಕೆಲಸಗಾರರು ಅವಳನ್ನು ಆಸ್ಪತ್ರೆಗೆ ವಾಹನದಲ್ಲಿ ಒಯ್ಯುತ್ತಿದ್ದರು. ಆಗಾಗ್ಗೆ ಹೊತ್ತುಗೊತ್ತಿಲ್ಲದ ಸಮಯದಲ್ಲಿ ಥೆಲ್ಮಾ ಪರ್ಕಿನ್ಸಳ ಮನೆಯ ದೂರವಾಣಿ ಗಣಗಣಿಸುತ್ತಿತ್ತು. "ದಯವಿಟ್ಟು ಆಲಿಸಳನ್ನು ನಿಭಾಯಿಸಲು ನನ್ನ ಸಹಾಯಕ್ಕೆ ಬರಲು ಸಾಧ್ಯವೇ?"

೧೯೭೭ರ ಏಪ್ರಿಲ್‌ನಲ್ಲಿ ಆಲಿಸಳ ಜೀವಕ್ಕೆ ಆಶಾಕಿರಣವೊಂದು ಗೋಚರಿಸಿತು. ಆ ಮಗುವನ್ನು ಸರಿಮಾಡಲು ಸಾಧ್ಯವೆಂದು ಮನಗಂಡ ಹಸುಳೆಗಳ ತೀಚಿವಿಯ

ನಿರ್ದೇಶಕರಾದ ಡಾ|| ಥಾಮಸ್ ಲೆಸ್ಟರ್ ಅವರು, ಆ ಮಗುವನ್ನು ಟೆನಿಸ್ಸಿ ಪ್ರಾಂತದ ನಾಶ್‌ವಿಲ್‌ನ ವಾಂಡರ್‌ಬಿಲ್ಟ್ ವಿಶ್ವವಿದ್ಯಾಲಯದ ವೈದ್ಯಕೀಯ ಕೇಂದ್ರದ ಪ್ಲಾಸ್ಟಿಕ್ ಸರ್ಜರಿ ನಿರ್ದೇಶಕರು, ಡಾ|| ಜಾನ್ ಲಿಂಚ್ ಅವರ ಬಳಿಗೆ ಕಳಿಸಿದರು. ಲಿಂಚ್ ಅವರು ಆ ಮಗುವಿನ ತಲೆಯ ಒಳಭಾಗದ "ಕಂಪ್ಯೂಟರೈಸ್ಡ್ ಆಕ್ಸಿಯಲ್ ಟೋಮೋಗ್ರಫಿ"ಯನ್ನು ತೆಗೆದುಕೊಂಡು ಅದರ ಸಹಾಯದಿಂದ ಮಗುವಿನಲ್ಲಾಗಿದ್ದ ದೋಷವನ್ನು ಗೊತ್ತುಮಾಡಿದರು. ಭ್ರೂಣದ ಬೆಳವಣಿಗೆಯ ಸಮಯದಲ್ಲಿ ಮುಖ ಭಾಗದ ಅಂಗಾಂಶಗಳು (tissues) ಮಜಲುಮಜಲಾಗಿ ಸ್ಥಾನಪಲ್ಲಟ ಹೊಂದುತ್ತವೆ. ಆಲಿಸಳಲ್ಲಿ ಈ ವಿಧಾನ ಬಹುಬೇಗನೆ ನಿಂತೇ ಹೋಯಿತು" ಎಂದು ಅವರು ವಿವರಿಸಿದರು. ಒದ್ದೆ ಸಿಂಬಳದ ಪೊರೆಗಳ ಮಧ್ಯೆ ಮುಖದ ಬೇರೆ ಬೇರೆ ಭಾಗಗಳು ಹುದುಗಿಹೋಗಿವೆ. ಅರೆಬೆಳೆದ ಅವಳ ಮೂಗಿನ ಹೊಳ್ಳೆಗಳು ಮೇಲೆ ಕಣ್ಣುಗಳಿರಬೇಕಾದಲ್ಲಿ ಇದ್ದವು. ಅವಳ ತಲೆಯ ಇಕ್ಕಡೆಗಳಲ್ಲಿ ಹುಬ್ಬು ಕಣ್ಣಿನ ರೆಪ್ಪೆಯೂ ಇದ್ದವು. ಅವಳ ಮೇಲ್ತುಟಿಯೂ ಮೇಲಿನ ವಸಡೂ ಹಣೆಯ ಭಾಗದಲ್ಲಿದ್ದವು. ಅವಳ ಪೂರ್ಣ ಮಟ್ಟದ ಬೆಳವಣಿಗೆ ಹೊಂದಿದ ಮಿದುಳು, ಓರೆಕೋರೆಯಾಗಿ ಅಪೂರ್ಣವಾಗಿದ್ದ ತಲೆ ಬುರುಡೆಯ ದೆಸೆಯಿಂದ, ಅಪಾಯಕ್ಕೊಳಗಾಗಬಹುದಾದ ಸ್ಥಿತಿಯಲ್ಲಿದೆಯೆಂದು ಅವಳ ತಲೆಯ ಒಳಚಿತ್ರದಿಂದ ಗೊತ್ತಾಯಿತು.

ಲಿಂಚ್ ಅವರು, ಆಲಿಸಳ ಮುಖದಷ್ಟು ಕಠಿಣವಾಗಿ ಸ್ಥಾನಪಲ್ಲಟಹೊಂದಿದ ಮುಖಾಂಗಗಳನ್ನು ನೋಡಿಯಾಗಲಿ ಓದಿಯಾಗಲಿ ಬಲ್ಲವರಾಗಿರಲಿಲ್ಲ. ಆದರೂ ಪುನರ್‌ರಚನೆಯ ಶಸ್ತ್ರಚಿಕಿತ್ಸೆಯನ್ನು ಮೊತ್ತಮೊದಲಿಗರಾಗಿ ಕೈಗೊಳ್ಳಲು ನಿಶ್ಚಯಿಸಿದರು. "ನಾವೇನೂ ಪವಾಡವನ್ನು ಮಾಡಿ ತೋರಿಸುವುದರಲ್ಲಿಲ್ಲ. ಆಲಿಸಳು ಎಂದೆಂದಿಗೂ ಕುರುಡಿಯಾಗಿಯೇ ಇರುವಳು. ಅವಳು ಪೂರ್ತಿ ಸ್ವಾಭಾವಿಕವಾಗಿಯೂ ಕಾಣಿಸಲಾರಳು. ನಮ್ಮ ವಾಸ್ತವಗುರಿ ಅವಳ ಮುಖದ ಕೆಲವು ಭಾಗಗಳನ್ನು ಸರಿಪಡಿಸುವುದು. ಮುಖ್ಯವಾಗಿ ಅವಳ ಬಾಯಿ ತನ್ನ ಕರ್ತವ್ಯವನ್ನು ಮಾಡಿ, ಇತರ ಭಾಗಗಳೂ ಹೆಚ್ಚು ಸ್ವಾಭಾವಿಕವಾಗಿ ಕಾಣುವಂತೆ ಮಾಡಬೇಕು."

ಮುಂದೆ ನಾಲ್ಕು ತಿಂಗಳ ಅವಧಿಯಲ್ಲಿ ಆಲಿಸಳು ಶಸ್ತ್ರಚಿಕಿತ್ಸೆಗಳಿಗಾಗಿ ವಾಂಡರ್ ಬಿಲ್ಟ್ ಮತ್ತು ನಾಕ್ಸ್ ವಿಲ್‌ಗಳ ನಡುವಿನ ಲಾಳಿಯಾಗಿದ್ದಳು. ಥೆಲ್ಮಾಳೂ ಆಲಿಸಳ ಜತೆಯಲ್ಲಿ ಹೋಗುತ್ತಿದ್ದಳು. ಅವಳು ತನ್ನ ಗಂಡ, ರೇಮಾಂಡನಿಗೆ ಮುಖವಿಲ್ಲದ ಹುಡುಗಿಯ ವಿಷಯವನ್ನೆಲ್ಲಾ ವಿವರಿಸಿದ್ದಳು.

ತಮ್ಮ ಕೈಲಾದಷ್ಟು ಸಹಾಯವನ್ನು ಅವಳಿಗೆ ಮಾಡಲೇಬೇಕಾಗದೆಯೆಂದು ಅವನೂ ಒಪ್ಪಿದನು.

ಪ್ರೀತಿ ಮತ್ತು ಸಹನೆ: ಮಗುವಿಗೆ ಆರು ತಿಂಗಳಾದ ಮೇಲಷ್ಟೆ ರೇಮಾಂಡನು ಅದನ್ನು ನೋಡಿದುದು. ಅವನ ಮೊದಲ ಪ್ರತಿಕ್ರಿಯೆ, ದಂಗಾದುದು. ಆಮೇಲೆ ತನ್ನ ಬಡಗಿಯ (ಕಸುಬಿನಿಂದ ಅವನು ಬಡಗಿ) ಒರಟು ಕೈಯನ್ನು ಮಗುವಿನ ಗುಂಗುರು ಕೂದಲಲ್ಲಿ ಆಡಿಸಿ ಮರುಕ ಪಟ್ಟನು.

೧೯೭೭ರ ಜನವರಿಯ ಒಂದು ರಾತ್ರಿ ಬಹು ಹೊತ್ತಿನ ಮೇಲೆ ಪರ್ಕಿನ್ಸ್‌ರ ಮನೆಗೆ ಆಲಿಸಳ ತಾಯಿಯಿಂದ ದೂರವಾಣಿ ಕರೆ ಬಂದಿತು. ತನಗೇನೋ ತೀವ್ರ ಸಾಂಸಾರಿಕ ತಾಪತ್ರಯ ಬಂದುದಾಗಿ ಹೇಳಿದಳು. "ಆಗ ಯಾರೋ ಮಗುವಿಗೆ ಕೆಡುಕುಮಾಡುತ್ತಾರೆಂದು ಒಂದೇ ಯೋಚನೆ ನನಗೆ ಬಂತು," ಎಂದು ರೇಮಾಂಡ್ ಹೇಳಿ, ಪೋಲಿಸ್ ಅಧಿಕಾರಿಯೊಬ್ಬನನ್ನು ಜತೆಯಲ್ಲಿ ಕರೆದುಕೊಂಡು ಪರ್ಕಿನ್ಸ್ ದಂಪತಿಗಳು ಅವಳ ಮನೆಗೆ ದೌಡಾಯಿಸಿದರು. ತಾಯಿಯು ಬಾಗಿಲಲ್ಲೇ ನಿಂತಿದ್ದಳು. "ಇಲ್ಲಿ ನೋಡಿ, ಇದರ ಬಗ್ಗೆ ನಾನು ಯಾವ ನಿಗಾವನ್ನೂ ತೆಗೆದುಕೊಳ್ಳಲಾರೆ," ಎಂದು ಹೇಳಿ ಬಟ್ಟೆಯಲ್ಲಿ ಸುತ್ತಿದ್ದ ಆಲಿಸಳನ್ನು ಥೆಲ್ಮಾಗೆ ಕೊಟ್ಟಳು.

ಆಲಿಸ್‌ಗಾಗಲೇ ೧೬ ತಿಂಗಳಾಗಿತ್ತು. ಅದರ ತೂಕ ಬರೇ ೫ ಕಿಲೋಗಳು. ಅದಕ್ಕೆ ಮಗುಚಿಕೊಳ್ಳಲೂ ಆಗುತ್ತಿರಲಿಲ್ಲ. "ಆ ದಿನ ನಾವು ಅವಳನ್ನು ನಮ್ಮ ವಶಕ್ಕೆ ತೆಗೆದುಕೊಳ್ಳದೆಯೇ ಇದ್ದಿದ್ದರೆ ಅವಳು ಬಹುದಿನ ಬದುಕುತ್ತಿರಲಿಲ್ಲ. ನಮಗೆ ಅವಳು ಬೇಕಾಗಿದ್ದಳು," ಎಂದು ರೇಮಾಂಡ್ ಹೇಳಿದನು.

ಅನೇಕ ಜನ ಅವರು ಆಲಿಸಳಿಗೆ ಸಾಕು ತಾಯ್ತಂದೆಯರಾಗುವುದು ಬೇಡವೆಂದು ಪರ್ಕಿನ್ಸ್‌ರುಗಳಿಗೆ ಹಿತನುಡಿದರು. "ನಾವು ಮುಂದೊದಗಬೇಕಾದ ಅನೇಕ ಕ್ಲಿಷ್ಟಸಮಸ್ಯೆಗಳನ್ನು ಇದಿರಿಸಲಾರವೆಂದು ಜನ ತಿಳಿದರು. ಆದರೆ ನಮ್ಮ ಕುಟುಂಬದ ಇತರರೂ ಆಗಲೇ ಆ ಮಗುವನ್ನು ಪ್ರೀತಿಯಿಂದ ಕಂಡರು," ಎಂದು ಥೆಲ್ಮಾ ಹೇಳಿದಳು.

ಕೊನೆಯ ನಿರ್ಧಾರವನ್ನು ಕೈಕೊಳ್ಳುವ ಮೊದಲು ಥೆಲ್ಮಾ ತನ್ನ ತಾಯಿಯನ್ನು ಕುರಿತು, "ನಾನು ಇದನ್ನು ಸಂಬಾಳಿಸಬಲ್ಲೆನೆ?" ಎಂದು ಕೇಳಿದಳು. "ನೀನೊಬ್ಬಳೇ ಏನೂ ಆಗುವುದಿಲ್ಲವಲ್ಲ, ನಿನ್ನ ಜತೆಗೆ ಸಹಾಯಕ್ಕೆ ನಾನೂ ಇರುವೆನಷ್ಟೆ."

ಟೆನೆಸ್ಸಿಯ ಮಾನವ ಸೇವಾ ಇಲಾಖೆಯು ಮಗುವಿನ ವೈದ್ಯಕೀಯ, ಶೈಕ್ಷಣಿಕ ಮತ್ತು ಪುನಸ್ಸಿದ್ಧತೆಯ ಖರ್ಚುಗಳನ್ನು ವಹಿಸಿಕೊಳ್ಳಲು ಮುಂದೆ ಬಂದಿತು. ರೇಮಾಂಡ್ ಸದಸ್ಯನಾಗಿದ್ದ ಅಮೆರಿಕಾದ ಮರಗೆಲಸಗಾರರ ಮತ್ತು ಬಡಗಿ ಸಹೋದರರ ಒಕ್ಕೂಟವು ಅವನಿಗೆ ಧನಸಹಾಯವನ್ನು ಒದಗಿಸಲು ಒಂದು ವಿಶ್ವಾಸ ನಿಧಿಯನ್ನು ಸ್ಥಾಪಿಸಿತು. ಆದರೂ ಪರ್ಕಿನ್ಸ್ ಕುಟುಂಬದ ಅಪಾರ ಪ್ರೀತಿಸಹನೆಗಳೇ ಆಲಿಸಳನ್ನು ಮುಂದೆ ಒಂದು ಸ್ವತಂತ್ರ ವ್ಯಕ್ತಿಯನ್ನಾಗಿ ರೂಪಿಸಲು ಸಹಾಯ ಮಾಡುವಂಥವು.

ಮೊದಲ ಹೆಜ್ಜೆಗಳು: ಆಲಿಸಳು ಮುಂದೆ ಬದುಕಲು ತನ್ನ ಶಕ್ತಿಯ ಮಟ್ಟಿಯೇ ಹೊಂದಿಕೊಳ್ಳಬೇಕಾಗುವುದೆಂದು ರೇಮಾಂಡ್‌ಗೆ ಗೊತ್ತು. "ಅವಳ ಕೈಕಾಲುಗಳನ್ನು ಅವಳು ಉಪಯೋಗಿಸಲು ಕಲಿಯುವಂತೆ ನಾವು ಪ್ರೋತ್ಸಾಹಿಸಬೇಕು" ಎಂದು ಅವನು ಥೆಲ್ಮಾಳಿಗೆ ಹೇಳಿದನು.

ಅವಳ ಸುತ್ತಲೂ ದಿಂಬುಗಳನ್ನಿಟ್ಟು ಮಧ್ಯೆ ಕೂರಿಸಿ, ಅವಳು ಹಾಗೆಯೇ ಕೂರಬೇಕೆಂದು ಹೇಳಿದನು. ಒಂದು ವೇಳೆ ಅವಳು ಬೀಳುವಂತಾದರೆ ಅವನ ಅಭಯ ಹಸ್ತವು ಅವಳಿಗೆ ಅಪಾಯವಾಗದಂತೆ ರಕ್ಷಿಸಲು ಸದಾ ಸಿದ್ಧವಾಗಿರುತ್ತಿತ್ತು. ಆದರೆ ಅದರ ಅಗತ್ಯ ಹೆಚ್ಚು ಸಾರಿ ಬರಲಿಲ್ಲ. ಅವಳ ಒಂಬತ್ತನೇ ತಿಂಗಳಿಗೇ ಕಲಿಯಬೇಕಾದುದನ್ನು ಈಗ ಒಂದು ವಾರದಲ್ಲಿ ಕಲಿತಳು.

ಅನಂತರ ಅವಳಿಗೆ ನಿಂತುಕೊಳ್ಳಲು ಕಲಿಸಿದನು. ತಾನು ನಿಂತಿದ್ದೇನೆ ಎಂದು ಅವಳಿಗೆ ತೋರುವಂತಾಗಲು ಆರ್ಗನ್ ವಾದ್ಯಕ್ಕೂ ಗೋಡೆಗೂ ನಡುವಿನಲ್ಲಿದ್ದ ಸಂದಿನಲ್ಲಿ ಅವಳನ್ನು ನಿಲ್ಲಿಸಿದನು. "ಮೊದಲು ಸಲ ಅವಳು ಮುದುರಿಕೊಂಡಳು. ಎರಡನೇ ಸಲ ಅವಳು ನಿಂತುಕೊಂಡೇ ಇದ್ದಳು," ಎಂದು ಹೇಳಿದನು. "ಅವಳು ಬಹು ಪ್ರಯತ್ನಪಟ್ಟಳು. ಅವಳ ಕಾಲುಗಳು ನಡುಗತೊಡಗಿದವು," ಥೆಲ್ಮಾ ಹೇಳಿದಳು, "ರೇಮಾಂಡನು ಅವಳನ್ನು ಗೆಲವಿನಿಂದ ಸೆಳೆದಪ್ಪಿದಾಗ ಅವಳ ಕಾಲುಗಳು ತಣ್ಣಗೆ ಅಂಟಂಟಾಗಿದ್ದವು." ಮತ್ತೆ ರೇಮಾಂಡನು ತನ್ನ ಮಕ್ಕಳಿಗೆ ನಡಿಗೆ ಕಲಿಸಿದಂತೆಯೇ ಆಲಿಸಳಿಗೂ ನಡೆಯಲು ಕಲಿಸಿದನು. "ಅವಳ ಸೊಂಟಕ್ಕೊಂದು ಉದ್ದದ ಪಟ್ಟಿ ಕಟ್ಟಿ, ಸೂತ್ರದ ಬೊಂಬೆಯನ್ನು ನಡೆಸಿದಂತೆ ಅವಳಿಗೆ ನಡೆಯಲು ಕಲಿಸಿದನು," ಎಂದು ಥೆಲ್ಮಾ ಜ್ಞಾಪಿಸಿಕೊಂಡಳು. ಅನಂತರ ಆಲಿಸಳು ರೇಮಾಂಡನ ಶರಾಯಿ ಕಾಲುಗಳನ್ನು ಹಿಡಿದುಕೊಂಡು ಅವನೊಡನೆ ಹೆಜ್ಜೆ ಹಾಕಿದಳು. ಐದು ತಿಂಗಳ ಒಳಗಾಗಿ ಅವನ ಶರಾಯಿಯ ಜೇಬಿನೊಳಕ್ಕೆ ತನ್ನ ಹೆಬ್ಬೆಟ್ಟನ್ನು ಕೊಕ್ಕೆ ಮಾಡಿ ಸಿಕ್ಕಿಸಿ

ಕೊಂಡು ಮನೆಯಲ್ಲೆಲ್ಲಾ ಓಡಾಡಿ ಎಲ್ಲೆಲ್ಲಿ ಏನೇನಿದೆ ಎಂದು ತಿಳಿದುಕೊಳ್ಳುತ್ತಿದ್ದಳು.

ಈ ವೇಳೆಯಲ್ಲಿ ವಾಂಡರ್‌ಬಿಲ್ಟಿನ ಶಸ್ತ್ರವೈದ್ಯರ ಯೋಜನೆಯಂತೆ ಶಸ್ತ್ರಚಿಕಿತ್ಸೆಗಳಿಗೆ ಆಲಿಸಳು ಒಳಗಾಗುತ್ತಿದ್ದಳು. ೧೯೭೬ರ ಆಗಸ್ಟ್‌ನಿಂದ ೧೯೮೨ರ ಮಾರ್ಚ್‌ವರೆಗಿನ ಆರೂವರೆ ವರ್ಷಗಳ ಅವಧಿಯಲ್ಲಿ ೧೨ ಶಸ್ತ್ರಚಿಕಿತ್ಸೆಗಳು ನಡೆದುವು. ತಲೆಬುರುಡೆಯ ಶಸ್ತ್ರಚಿಕಿತ್ಸೆಯಿಂದ ಅವಳ ಮಿದುಳಿಗೆ ಹೆಚ್ಚಿನ ರಕ್ಷಣೆಯುಂಟಾಯಿತು. ಅಲ್ಲದೆ ತಲೆಗೂ ಮುಖಕ್ಕೂ ಹೆಚ್ಚು ಸ್ವಾಭಾವಿಕವಾದ ಆಕಾರ ಬಂದಿತು. ಚರ್ಮದೊಳಗಿನ ಸ್ನಾಯುಗಳು, ನರಗಳು ಮತ್ತು ರಕ್ತನಾಳಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬದಲಾಯಿಸುವ ವಿಸ್ತೃತ ಶಸ್ತ್ರಕ್ರಿಯೆಯಿಂದ ಮೇಲ್ತುಟಿಯನ್ನೂ ಮೇಲಿನ ವಸಡನ್ನೂ ಕೆಳಕ್ಕೆ ತಂದು ಅದರ ಸ್ವಾಭಾವಿಕ ಸ್ಥಾನದಲ್ಲಿಟ್ಟು ಒಂದು ಪರಿಪೂರ್ಣ ಬಾಯನ್ನು ರೂಪಿಸಲು ಲಿಂಚ್‌ರಿಗೆ ಸಾಧ್ಯವಾಯಿತು.

ಆಲಿಸಳದೇ ಮೂಳೆಯನ್ನೂ ಅಂಗಾಂಶಗಳನ್ನು ಸ್ಥಳಾಂತರಿಸಿ ಗಟ್ಟಿಯಾದ ಮತ್ತು ಮೃದುವಾದ ಒಳ ಬಾಯಿಯನ್ನು ನಿರ್ಮಿಸಿ, ಅವಳು ಆಹಾರದ ರುಚಿ ನೋಡಿ ನುಂಗಲು ಆಗುವಂತೆ ಮಾಡಲಾಯಿತು. ಹುಬ್ಬುಗಳನ್ನೂ ರೆಪ್ಪೆಗಳನ್ನೂ ಅವು ಇರಬೇಕಾದಲ್ಲಿಗೆ ಇಡಲಾಯಿತು. ದೊಡ್ಡವಳಾಗ ಬೆಳೆಯುತ್ತಿದ್ದ ಅವಳ ಹಣೆಯಿಂದ ಒಂದು ಅಗಲವಾದ ತುಂಡನ್ನು ತೆಗೆದು ಬೆಳೆದವರ ಮೂಗಿನ ಗಾತ್ರದ ಮೂಗನ್ನು ರೂಪಿಸಲಾಯಿತು.

ನಾಲ್ಕು ವರ್ಷಗಳಾದ ಮೇಲೆ, ಮಾನಸಿಕವಾಗಿಯೂ ಭಾವಾತ್ಮಕವಾಗಿಯೂ ಕುಂಠಿತಗೊಂಡಿದ್ದ ಮಕ್ಕಳಿಗಾಗಿ ಗೊತ್ತಾದ ಶಾಲಾಪೂರ್ವದ ಕಾರ್ಯಕ್ರಮಗಳಲ್ಲಿ, ಆಲಿಸಳನ್ನು ತೊಡಗಿಸಲಾಯಿತು. "ಅದೇನೂ ಕ್ಷಣದಲ್ಲಿ ಜಯಗಳಿಸುವ ಪ್ರಯತ್ನವಾಗಿರಲಿಲ್ಲ," ಎಂದು ಒಬ್ಬ ಶಿಕ್ಷಕಿ ಒಪ್ಪಿಕೊಂಡಳು. ತನ್ನ ಮನೆಯಿಂದ ದೂರವಾಗಿದ್ದ ಆಲಿಸಳು ತನ್ನದೇ ಒಂದು ಲೋಕಕ್ಕೆ ಮರಳಿ, ಪಲ್ಲಟಗೊಂಡ ಅಶ್ರುನಾಳದಿಂದ ದಪ್ಪದಪ್ಪ ಹನಿಗಳನ್ನು ತನ್ನ ಕೆನ್ನೆಯ ಮೇಲೆ ಸುರಿಸಿ ಅತ್ತಳು. ಅಂತಿಮವಾಗಿ ಸಹನಶೀಲರಾದ ಶಿಕ್ಷಕಿಯರೂ ಚಿಕಿತ್ಸಕರೂ ಮುನ್ನುಗ್ಗಿ ಅವಳು ಹಲವು ಹೊಸ ವಸ್ತುಗಳನ್ನು ಮುಟ್ಟಿ ಗುರ್ತಿಸುವಂತೆ ಮಾಡಿದರು. ಲಿಂಚ್‌ರು ಅವಳ ಬಾಯನ್ನು ಮೂಡಿಸಿದ ನಂತರ ವಾಕ್ ಚಿಕಿತ್ಸಕರು ಹಲವು ಸರಳ ಶಬ್ದಗಳನ್ನು ಉಚ್ಚರಿಸಲು ಅವಳಿಗೆ ಹೇಳಿಕೊಟ್ಟರು.

ನನ್ನ ಚಿಕ್ಕ ಹುಡುಗಿ: ಈಗ ಆಲಿಸಳಿಗೆ ಏಳು ವಯಸ್ಸು. ಮೊ

ವಿಲ್ಲಿನ ಎವರೆಟ್ ವಿಶೇಷ ವಿದ್ಯಾ ಶಾಲೆಗೆ ಹೋಗುತ್ತಿದ್ದಾಳೆ. ಸಾಮಾನ್ಯ ಶಾಲಾ ಶಿಕ್ಷಣದ ಜತೆಗೆ ಆಲಿಸಳಿಗೆ ಅಂಗಕ್ರಿಯಾ ಮತ್ತು ವಾಕ್ ಚಿಕಿತ್ಸೆಗಳೂ ದೊರೆಯುತ್ತಿವೆ. ಅವಳ ಶಬ್ದ ಭಂಡಾರ ೨೫೦ ಇದ್ದು ಚಿಕ್ಕ ಚಿಕ್ಕ ಪದಗಳನ್ನು ಜೋಡಿಸಲು ತೊಡಗಿದ್ದಾಳೆ.

ಮನೆಯಲ್ಲಿ ಅವಳ ಜೀವನ ಕ್ರಮವು ಇತರ ಕುರುಡು ಮಕ್ಕಳಂತೆಯೇ ಇದೆ. ಮನೆಯಲ್ಲಿ ಅಡೆತಡೆಗಳನ್ನು ನಿಭಾಯಿಸಿಕೊಂಡು ತನ್ನ ದಾರಿಯನ್ನು ತಪ್ಪದೆ ಕಂಡುಕೊಳ್ಳುವಳು. "ಅವಳಲ್ಲಿ ಒಂದು 'ರೆಡಾರ್ ವಿಸ್ಟಂ' ಉತ್ಪತ್ತಿಯಾಗಿದೆಯೋ ಎನಿಸುವುದು. ಹೇಗೋ ಮುಂದೆ ಅಪಾಯವಿದೆಯೆಂದು ಕಂಡ ಕೂಡಲೆ ಅವಳು ನಿಧಾನಿಸುವಳು, ಇಲ್ಲವೇ ನಿಂತೇ ಬಿಡುವಳು," ಎಂದು ಥೆಲ್ಮಾ ಹೇಳುತ್ತಾಳೆ. ಅವಳ ಅಚ್ಚುಮೆಚ್ಚಿನ ಆಟವೆಂದರೆ, ರೇಮಾಂಡ್‌ನು ಮನೆಯ ಹಿತ್ತಲಲ್ಲಿ ಕಟ್ಟಿದ್ದ ಉಯ್ಯಾಲೆಯಲ್ಲಿ ತೂಗಿಕೊಳ್ಳುವುದು. ಆಗಾಗ ಹಿತ್ತಲಲ್ಲಿ ತಾನು ತಾನೇ ಓಡ್ಯಾಡುವಳು. ಅಂತೂ ಥೆಲ್ಮಾ ಅಡಿಗೆ ಮನೆಯ ಕಿಟಕಿಯಿಂದ ಅವಳ ಮೇಲೊಂದು ಕಣ್ಣನ್ನು ಇಟ್ಟೇಇರುವಳು.

ಆಲಿಸಳ ಭವಿಷ್ಯ ಸಾಮಾಜಿಕ ತಿರಸ್ಕಾರದ ಜತೆಗೆ ಇನ್ನೂ ಅನೇಕ ಸಮಸ್ಯೆಗಳಿಂದ ಮುಸುಕುವುದು. ಆಶ್ಚರ್ಯವೆಂದರೆ, ದೊಡ್ಡವರಿಗಿಂತ ಹೆಚ್ಚಾಗಿ ಮಕ್ಕಳು ಅವಳನ್ನು ತಮ್ಮ ಜತೆಗೆ ಸೇರಿಸಿಕೊಳ್ಳುವರು ಮಾತ್ರವಲ್ಲ, ಇತರರಿಂದ ಅವಳಿಗೆ ರಕ್ಷಣೆಯನ್ನೂ ಒದಗಿಸುತ್ತಾರೆ. ಚರ್ಚಿನಲ್ಲಿ ಒಮ್ಮೆ ಒಬ್ಬ ಹೆಂಗಸು ಆಲಿಸಳನ್ನು ನೋಡಿ "ಯಾರಿದು ಈ ಭೂತ?" ಎಂದು ಥಟ್ಟನೆ ಹೇಳಿದಳು. ಸಮೀಪದಲ್ಲಿ ನಿಂತಿದ್ದ ಒಬ್ಬ ಚಿಕ್ಕ ಹುಡುಗಿಯು "ಅಮ್ಮಾ ಅವಳು ಆಲೀಸಳೇ," ಎಂದಳು. ಆ ಮೇಲೆ ಆ ಹುಡುಗಿ ಆಲಿಸಳ ಕೈಹಿಡಿದುಕೊಂಡು ತರಗತಿಗೆ ನಡೆದೇಬಿಟ್ಟಳು.

ಆಲಿಸಳಿಗೆ ಶಸ್ತ್ರಕ್ರಿಯೆಗಳು ಇನ್ನೂ ಆಗಬೇಕು. "ನಾವು ಅವಳಿಗೆ ಕಣ್ಣುಗೂಡುಗಳನ್ನು ಅಳವಡಿಸಿ ಕೃತಕ ಕಣ್ಣುಗುಡ್ಡೆಗಳನ್ನು ಇಟ್ಟು ಹೆಚ್ಚು ಸ್ವಾಭಾವಿಕವಾದ ಮುಖಲಕ್ಷಣವುಂಟಾಗುವಂತೆ ಮಾಡಬೇಕು. ಹೀಗಿರುತ್ತ ಆಲಿಸಳ ಜೀವನದಲ್ಲಿ ದೊಡ್ಡದೊಂದು ಬದಲಾವಣೆಯಾಯಿತು. ಫೆಬ್ರವರಿ ೭ ರಂದು ಪರ್ಕಿನ್ಸ್ ಕುಟುಂಬವು ಆಲಿಸಳನ್ನು ಶಾಸ್ತ್ರೋಕ್ತವಾಗಿ ದತ್ತು ತೆಗೆದುಕೊಂಡಿತು. ಅವಳು ಯಾವಾಗಲೂ ನನ್ನ ಮುದ್ದುಮಗಳೇ. ಈಗ ಲಿಖಿತ ಪತ್ರಗಳ ಮೂಲಕ ಅದು ಅಧಿಕೃತವಾಯಿತು.," ಎಂದು ಥೆಲ್ಮಾ ಹೇಳುತ್ತಾಳೆ.

ಜಿ. ಎಸ್. ಕೇಶವಾಚಾರ್ಯ

ಅದ್ವಿತೀಯ ಓಟಗಾರ ಮೆನ್ಸನ್ ಅರ್ನಸ್ಟ

೧೮೪೩ ರಲ್ಲಿ ನೈಲ್ ನದಿಯ ಬದಿಯಿಂದ ಹೋಗುತ್ತಿದ್ದ ಬ್ರಿಟಿಷ್ ಯಾತ್ರಿಕರಿಗೆ ಮೆನ್ಸನ್ ಅರ್ನಸ್ಟನ ಶವಸಿಕ್ಕಿತು. ಈ ಪ್ರಯಾಣಿಕರು ಹತ್ತಿರದಲ್ಲಿಯೇ ಆ ಶವವನ್ನು ಹೂಳಿದರು. ಈಜಿಪ್ಟಿನ ಆಸ್ವಾನ್ ಅಣೆಕಟ್ಟಿನ ನಿರ್ಮಾಣದಿಂದ ನದಿಯ ಆ ಭಾಗ ನೀರಿನಲ್ಲಿ ಮುಳುಗಿ ಹೋಗಿದೆ. ಅದರ ಜೊತೆಗೆ ಈ ವ್ಯಕ್ತಿಯ ಹೆಸರು ಕೂಡಾ ಮರೆತಂತಾಗಿದೆ. ಅವನು ಸತ್ತು ೧೫೦ ವರ್ಷಗಳು ಕಳೆದಿದ್ದರೂ ವಿಶ್ವದ 'ಅತಿ ದೂರದ ಶ್ರೇಷ್ಠ ಓಟಗಾರ' (Long-distance runner) ನೆಂಬ ಅವನ ಬಿರುದನ್ನು ಮೀರಿಸಲು ಇಂದಿಗೂ ಸಾಧ್ಯವಾಗಿಲ್ಲ.

ಒಂದು ಕಾಲದಲ್ಲಿ, ನಾರ್ವೆಯ ಈ ಸದೃಢಕಾಯದ ಕುಳ್ಳ ವ್ಯಕ್ತಿಯ ವೇಗಭರಿತ ಕಾಲ್ನಡಿಗೆಯ ಪ್ರಯಾಣ ಯುರೋಪಿನಲ್ಲೆಲ್ಲ ಮನೆಮಾತಾಗಿತ್ತು. ತುರ್ಕಿ ಮತ್ತು ಅರಬರು ಅವನನ್ನು 'ಮರುಭೂಮಿಯ ಹದ್ದು' ಎಂದು ಕರೆದರು. ಬವೇರಿಯಾದ ರಾಣಿ ಇವನನ್ನು 'ಅತಿ ಉದ್ದಕಾಲಿನ ಅತಿಗಿಡ್ಡ ವ್ಯಕ್ತಿ' ಎಂದು ಕರೆದಳು.

ಯುರೋಪ್ ಮತ್ತು ಏಷಿಯಾದ ಅನೇಕ ಜನರು ತಮ್ಮ ಸಂಪತ್ತನ್ನೇ ಪಣಕ್ಕಿಟ್ಟು ಇವನನ್ನು ಓಡಿಸುತ್ತಿದ್ದರು. ಸಾವಿರಾರು ಜನರು ಇವನ ಸಾಧನೆಯನ್ನು ಕೊಂಡಾಡುತ್ತಿದ್ದಂತೆ, ವೈದ್ಯಕೀಯ ತಜ್ಞರು ಇವನ ಅದ್ಭುತ ವೇಗದ ಬಗ್ಗೆ ವೈಜ್ಞಾನಿಕ ವಿವರಣೆ ಕೊಡಲು ಪ್ರಯತ್ನಿಸಿ ವಿಫಲರಾದರು.

೧೭೯೯ ರಲ್ಲಿ ಬರ್ಜೆನ್ನಿನಲ್ಲಿ ಜನಿಸಿದ ಮೆನ್ಸನ್ ತನ್ನ ಎಂಟನೇ ವಯಸ್ಸಿನಲ್ಲಿ ಕೌಪನ್ ಹೆಜನ್ನಿನ ನೌಕಾ ಶಾಲೆಯಲ್ಲಿ ಪ್ರವೇಶ ಪಡೆದನು. ೧೮೧೨ರ ನಂತರ ಅವನು ಆ ದೇಶವನ್ನೇ ಬಿಟ್ಟು ಹೊರಟನು. ನೌಕಾಘಾತದಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡನಂತರ ಮತ್ತೆ ಆ ದೇಶಕ್ಕೆ ಮರಳಬಾರದೆಂದು ನಿಶ್ಚಯಿಸಿದನು. ಅನೇಕ ವರ್ಷಗಳ ವರೆಗೆ ಬ್ರಿಟಿಷ್ ನೌಕಾಧಿಕಾರಿಯ ಜೊತೆಗಿದ್ದು, ಬೇರೆ ಬೇರೆ ದೇಶಗಳನ್ನು ನೋಡಿದನು. ಇದರಿಂದಾಗಿ ಹೊಸ ಹೊಸ ದೇಶಗಳನ್ನು ನೋಡುವ ಹಂಬಲ ಹೆಚ್ಚಿತೇ ವಿನಃ ಕಡಿಮೆಯಾಗಲಿಲ್ಲ. ಇಂಥ ಪ್ರಯಾಣ ಬೆಳೆಸುತ್ತಿದ್ದಾಗ, ಕೇಪ್‌ಟೌನಿನಲ್ಲಿ ಆಫ್ರಿಕಾದ ಓಟಗಾರರ ಜೊತೆ ಸ್ಪರ್ಧಿಸುವ ಮೊದಲನೇ ಅವಕಾಶ ಅವನಿಗೆ ಲಭ್ಯವಾಯಿತು. ನಾವಿಕನ ಜೀವನದಿಂದ ಬೇಸತ್ತಿದ್ದ ಮೆನ್ಸನ್, ತನ್ನ ೨೦ ನೇ ವಯಸ್ಸಿನಲ್ಲಿ, ಓಡುವುದನ್ನೇ ತನ್ನ ವೃತ್ತಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿ ಲಂಡನ್ನಿನಲ್ಲಿ ಇಂಥ ಒಂದು ಕರೆಗೆ ಸಹಿ ಹಾಕಿದನು.

ಸಂಪರ್ಕ ಸಾಧನವಿನ್ನೂ ಬೆಳೆದಿರದಿದ್ದ ಆ ದಿನಗಳಲ್ಲಿ, ಶ್ರೀಮಂತ ಮನೆತನದವರು ಪ್ರಾಮಾಣಿಕ ಜನರನ್ನು 'ಓಡುವ ಆಳು' (running-foot-man) ಗಳನ್ನು ದೂತರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಅಲ್ಲದೆ ಆ ಕಾಲದಲ್ಲಿ, ಓಡುವುದೊಂದು ಜನಪ್ರಿಯ ಆಟವೆಂದು ಪರಿಗಣಿಸಲಾಗಿತ್ತು. ಈ ರೀತಿ ಓಟದ ಸ್ಪರ್ಧೆಯಿಡಿಸಿ ಶ್ರೀಮಂತರು ಓಟಗಾರರ ಮೇಲೆ ಪಣ ಕಟ್ಟುತ್ತಿದ್ದರು. ಓಡುವುದರಲ್ಲಿ ಯಾವಾಗಲೂ ಗೆಲ್ಲುತ್ತಿದ್ದ ಮೆನ್ಸನ್, ತನ್ನ ಓಟದ ಮೂಲಕ ಹಣ ಮತ್ತು ಬಹುಮಾನಗಳನ್ನು ಪಡೆವನಲ್ಲದೆ, 'ದೂತನ' ಕೆಲಸದಿಂದಲೂ ತನ್ನ ಆದಾಯ ಹೆಚ್ಚಿಸಿಕೊಳ್ಳಬಹುದೆಂದು ಯೋಚಿಸಿದ್ದನು. ಕೆಲವೇ ದಿನಗಳಲ್ಲಿ ಎಲ್ಲ ಓಟಗಾರರನ್ನು ಹಿಂದೆ ಹಾಕಿದನಲ್ಲದೆ ಅಂಚೆ ವಾಹನಗಳನ್ನೂ ಹಿಂದೆ ಹಾಕಿದನು. ಒಂದು ಸ್ಪರ್ಧೆಯಲ್ಲಿ ಲಂಡನ್ನಿನಿಂದ ಪೋರ್ಟ್ಸ್‌ಮತ್‌ಗೆ ಓಡಿ ೧೧೬ ಕಿ.ಮೀ. ಅಂತರವನ್ನು ೯ ಗಂಟೆಗಳಲ್ಲಿ (ನಂಬಲಸಾಧ್ಯವಾದ ೧೩ಕಿ.ಮೀ. ವೇಗ) ತಲುಪಿದಾಗ ಅದೊಂದು ದಾಖಲೆಯಾಗಿ ಮೆನ್ಸನ್‌ನ ಹೆಸರು ಎಲ್ಲೆಡೆ ಹರಡಿತು.

ಅದ್ವಿತೀಯ: ನಂತರದ ೩೦ ವರ್ಷಗಳವರೆಗೂ ತನ್ನ ವೇಗಭರಿತ ಓಟದಿಂದ ಜನರನ್ನು ದಿಗ್ಭ್ರಮೆಗೊಳಿಸಿದನು. ನಾವಿಕನ ಸಮವಸ್ತ್ರ ಧರಿಸಿಕೊಂಡು, ಯುರೋಪ್ ಮತ್ತು ಏಷಿಯಾದ ಸುಮಾರು ೭೦ ನಗರಗಳಲ್ಲಿ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದು, ಕೊಪನ್ ಹೇಜನ್, ರೊಟರ್‌ಡ್ಯಾಂ, ಪ್ಯಾರಿಸ್, ಮ್ಯುನಿಕ್, ಮ್ಯಾಡ್ರಿಡ್, ಸೆಂಟ್‌ಪೀಟರ್ಸ್‌ಬರ್ಗ್, ವೆನಿಸ್, ವಿಯೆನ್ನಾ ಮತ್ತು ಬುಡಾಪೆಸ್ಟಿನ ಸಾವಿರಾರು ಜನರ ಹರ್ಷೋದ್ಗಾರಗಳಿಗೆ ಪಾತ್ರನಾದನು. ಅವನು ಸ್ಪರ್ಧಿಸಿದ ಮೂರು ಓಟಗಳಲ್ಲಿ ಅಂತರ ಕ್ರಮಿಸುವದರ ಜೊತೆಗೆ, ಅಡ್ಡದಾರಿ (ನೇರ ರಸ್ತೆ ಬಿಟ್ಟು ಬಯಲಲ್ಲಿ) ಓಟ, ಒರಿಯಂಟಿಯರಿಂಗ್, ಬಹುದೂರದ ಓಟ, ಮತ್ತು ಬೇರೆ ತೆರನಾದ ಓಟಗಳೂ ಇದರಲ್ಲಿಯೇ ಕೂಡಿದ್ದು ವೈಶಿಷ್ಟ್ಯಪೂರ್ಣವಾಗಿದ್ದರಿಂದ ಅವನನ್ನು ಮಹಾನ್ ಹಾಗೂ ಸಾಹಸಿ ಓಟಗಾರನೆಂದು ಕರೆದಿದ್ದಾರೆ. ಈ ತೆರನಾದ ಉದಾಹರಣೆಗಳು ಕ್ರೀಡಾ ಇತಿಹಾಸದಲ್ಲಿಯೇ ಕಾಣಸಿಗದು.

ಮೆನ್ಸನ್ ಪ್ಯಾರಿಸ್ಸಿನಿಂದ ಮಾಸ್ಕೊವನ್ನು ೧೫ ದಿನಗಳಲ್ಲಿ ತಲುಪಬೇಕೆಂಬ ಆಹ್ವಾನ ಬಂದಿತು. ಇದರಲ್ಲಿ ಪಣದ ರೂಪದಲ್ಲಿ ತೊಡಗಿಸಿದ್ದ ಹಣ ಒಂದು ಲಕ್ಷ ಫ್ರ್ಯಾಂಕುಗಳು. ತನ್ನದೇ ಆದ ಕಾಲ್ದಾರಿಯ ನಕಾಶೆಯನ್ನು ಸಿದ್ಧಪಡಿಸಿಕೊಂಡು ಮೆನ್ಸನ್ ಜೂನ್ ೧೧ರಂದು ಬೆಳಗ್ಗೆ ೪-೧೦ ಕ್ಕೆ ಪ್ಯಾರಿಸ್ಸಿನಿಂದ

ಹೊರಟನು. ೨೬೦೦ ಕಿ.ಮಿ. ಅಂತರವನ್ನು ಓಡುತ್ತ ಕ್ರಮಿಸಿ ಕ್ರೆಮಿಲಿನ್ನಿನ ಮುಖ್ಯದ್ವಾರವನ್ನು ೧೪ ದಿವಸ, ೫ ಗಂಟೆ ಮತ್ತು ೩೦ ನಿಮಿಷಗಳಲ್ಲಿ ತಲುಪಿದನು.

ಮರು ವರ್ಷ ಬವೇರಿಯಾದ ರಾಜ ಮತ್ತು ರಾಣಿಯರ ಆದೇಶದಂತೆ, ಅವರ ಮಗ ರಾಜಕುಮಾರ ಒಟ್ಟೊಗೊಂದು ವೈಯಕ್ತಿಕ ಸಂದೇಶ ಕೊಂಡೊಯ್ಯಲು ಒಪ್ಪಿಕೊಂಡನು. ರಾಜಕುಮಾರ ಒಟ್ಟೊ ಅಂದಿನ ಗ್ರೀಸ್ ದೇಶದ ರಾಜಧಾನಿ ನಾವಪ್ಲಿಯೊನಿನಲ್ಲಿದ್ದನು. ಸುಮಾರು ೨೦೦೦ ಕಿ.ಮೀ. ಅಂತರವನ್ನು ಮೆನ್ಸನ್ ಒಂದೇ ತಿಂಗಳಿನಲ್ಲಿ ಕ್ರಮಿಸಿ ಈ ಸಂದೇಶವನ್ನು ತಲುಪಿಸಬೇಕಾಗಿತ್ತು. ನುಫೆನ್‌ಬರ್ಗ್ ಕೋಟೆಯ ಹೊರಗಿನಿಂದ (ಜೂನ್, ೬ ೧೮೩೩ ರಂದು ಮಧ್ಯಾಹ್ನ ೧-೦೫ಕ್ಕೆ) ಮೆನ್ಸನ್ ಹೊರಟನು. ಕಡಿದಾದ ಗುಡ್ಡಗಳು, ಕಾಲ್ದಾರಿಯಿರದ ಅರಣ್ಯಗಳು, ಎಷ್ಟೋ ನದಿಗಳು ಅಡ್ಡಬಂದವು. ದಾರಿಗಳ್ಳರು ಅವನನ್ನು ಹಿಡಿದು ಹಾಕಿದರು; ಭೂಪ್ರದೇಶದ ಕೆಲ ಭಾಗಗಳಲ್ಲಿ ಸುತ್ತುದಾರಿ ಹಿಡಿಯಬೇಕಾಯಿತು; ಎರಡು ಸಲ ಬಂಧನಕ್ಕೊಳಗಾಗಿ ಬಂದಿಯಾಗಿರಬೇಕಾಯಿತು. ಆದರೂ ಮೆನ್ಸನ್ ಅತೀ ವೇಗವಾಗಿ ಓಡಿ ಜುಲೈ ೧ ರಂದು ಬೆಳಿಗ್ಗೆ ೯-೪೮ ಕ್ಕೆ ನಾವಪ್ಲಿಯಾನಿನ ಅರಮನೆಯನ್ನು ತಲುಪಿದನು. ಈ ಅಂತರವನ್ನು ಅವನು ೨೪ ದಿವಸ, ೨೦ ಗಂಟೆ ಮತ್ತು ೪೩ ನಿಮಿಷಗಳಲ್ಲಿ ಕ್ರಮಿಸಿದ್ದನು.

ಇದಾಗಿ ಮೂರು ವರ್ಷಗಳ ನಂತರ ಕಾನ್‌ಸ್ಟ್ಯಾಂಟಿನೋಪಲ್ಲಿನ ಬ್ರಿಟಿಷ್ ವರ್ತಕರ ಮಹತ್ವದ ಪತ್ರಗಳನ್ನು ಕಲ್ಕತ್ತದಲ್ಲಿನ ಅವರ ಸಂಬಂಧಿ ವರ್ತಕರಿಗೆ ತಲುಪಿಸಿ ಮರಳಿ ಬರುವದಾಗಿ ವಾಗ್ದಾನ ಮಾಡಿದನು. ಈ ಕೆಲಸಕ್ಕಾಗಿ ನಿಗದಿಮಾಡಲಾದ ಹಣ ೧೫೦ ಪೌಂಡುಗಳು. ೨ ತಿಂಗಳಲ್ಲಿಯೇ ಸುಮಾರು ೮೩೦೦ ಕಿ. ಮಿ. ಗಿಂತ ಹೆಚ್ಚು ಅಂತರವನ್ನು ಕ್ರಮಿಸಬೇಕಾಗಿತ್ತು. ಜುಲೈ ೨೮, ೧೮೩೬ರ ಬೆಳಿಗ್ಗೆ ೫ ಗಂಟೆಗೆ ಮೆನ್ಸನ್ ತನ್ನ ಪ್ರಯಾಣ ಪ್ರಾರಂಭಿಸಿ ಕಲ್ಕತ್ತೆಯನ್ನು ತಲುಪಲು ೩೦ ದಿನಗಳು ಮತ್ತು ೪ ಗಂಟೆಗಳನ್ನು ಮಾತ್ರ ತೆಗೆದುಕೊಂಡನು. ಕೊಟ್ಟ ಮಾತಿನ ಪ್ರಕಾರ, ಕೇವಲ ನಾಲ್ಕು ದಿನಗಳವರೆಗೆ ತಂಗಿ ಮತ್ತೆ ಓಡುತ್ತ ಕಾನ್‌ಸ್ಟ್ಯಾಂಟಿನೊಪಲ್ಲನ್ನು ಸೆಪ್ಟೆಂಬರ್ ೨೮ರಂದು ಬಂದು ತಲುಪಿದನು.

ಇಷ್ಟು ಅದ್ಭುತರೀತಿಯಲ್ಲಿ ಓಡಲು ಸಾಧ್ಯವೆ? ಇವನ ಸಾಧನೆಯ ಬಗ್ಗೆ ಶಂಕೆಯುಳ್ಳವರು ಅಂದಿನ ದಾಖಲೆ (ಆಕರಗ್ರಂಥ) ಗಳನ್ನು ನೋಡಬಹುದು.

ಯೂರೋಪಿನಾದ್ಯಂತ ಅಂದಿನ ಸಮಾಚಾರ ಪತ್ರಿಕೆಗಳಲ್ಲಿ ಮೆನ್ಸನ್ನನ ಸಾಧನೆಗಳ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸಿದ ದಾಖಲೆಗಳಿವೆ. ಅಲ್ಲದೆ ಒಬ್ಬ ಜರ್ಮನ್ ಲೇಖಕ, ಮೆನ್ಸನ್ನನ ಜೊತೆ ನಡೆಸಿದ ಸಂದರ್ಶನಗಳು ಮತ್ತು ಅವನ ದಿನಚರಿಗಳ ಆಧಾರದ ಮೇಲೆ ಒಂದು ಪುಸ್ತಕವನ್ನೇ ಬರೆದಿದ್ದಾನೆ.

ಸರಳಜೀವಿ: ಓಡುವಾಗ ದಾರಿಗುಂಟ ವಂಚನೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಂದಿನ ಕಾಲದ ಅತ್ಯುತ್ತಮ ಕುದುರೆಗಳಿಗೆ ಮಾತ್ರ ಮೆನ್ಸನ್ನನಿಗಿಂತ ವೇಗವಾಗಿ ಓಡಲು ಸಾಧ್ಯವಿತ್ತು. ೧೮೪೦ರಲ್ಲಿ ಜರ್ಮನಿಯ ರಾಜಕುಮಾರ ಪಕ್ಲರ ಮಸ್ಕಾವನ ಎಸ್ಟೇಟ್ ಮತ್ತು ಬರ್ಲಿನ್ ಮಧ್ಯದ ದೂತನಾಗಿ ಅವನು ನೇಮಕಗೊಂಡಾಗ, ಆ ಅಂತರವನ್ನು ಮೆನ್ಸನ್ ೧೪ ಗಂಟೆಗಳಲ್ಲಿ ಕ್ರಮಿಸಬಲ್ಲವನಾಗಿದ್ದನು. ಇದೇ ಅಂತರವನ್ನು ನಿತ್ಯ ಓಡುತ್ತಿದ್ದ ಅಂಚೆಗಾಡಿಗಳು ೨೪ ಗಂಟೆಗಳಲ್ಲಿ ಕ್ರಮಿಸುತ್ತಿದ್ದವು.

ಮೆನ್ಸನ್ ಅರ್ನೆಸ್ಟನಿಗೆ ಓಡುವುದು ಸ್ವಯಂಪ್ರೇರಣೆಯಿಂದಲೇ ಬಂದಿರಬೇಕು. ಪ್ರತಿ ದಿನವೂ ಅವನು ೧೫೦ ಕಿ. ಮೀ. ಗಿಂತಲೂ ಹೆಚ್ಚು ಅಂತರ ಓಡುತ್ತಿದ್ದನಂತೆ. ಇಂದಿನ ಬಹುದೂರದ ಓಟಗಾರರು ೪೨ ಕಿ. ಮೀ. ದೂರದವರೆಗೆ ಓಡಲು ೨ ಗಂಟೆಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಅವರ ಸರಾಸರಿ ವೇಗ ತಾಸಿಗೆ ೧೮ ರಿಂದ ೧೯ ಕಿ. ಮೀ. ಇರುತ್ತದೆ. ಆದರೆ ಅರ್ನೆಸ್ಟ್ ಮೆನ್ಸನ್ ತಾಸಿಗೆ ೮ ರಿಂದ ೧೦ ಕಿ. ಮೀ. ನ ಒಂದೇ ವೇಗವನ್ನು ಬಹು ದೂರದವರೆಗೆ ಕಾಯ್ದುಕೊಂಡು ಓಡುತ್ತಿದ್ದನು. ತಾಸುಗಳು, ದಿನಗಳು, ವಾರಗಳುರಳಿದರೂ ಅವನ ವೇಗದಲ್ಲಿ ಬದಲಾವಣೆಯಾಗುತ್ತಿರಲಿಲ್ಲ.

'ಜಿಗಿದು ಹಾರುವ' (Jumping step) ವಿಶೇಷ ಹೆಜ್ಜೆಯ ಬಗ್ಗೆ ಅವನ ದಿನಚರಿಯಲ್ಲಿ ಉಲ್ಲೇಖವಿದೆ. ತನ್ನ ಕಾಲು ಗಿಡ್ಡವಾಗಿದ್ದರೂ ಅವನು ಒಂದೇ ಜಿಗಿತದಲ್ಲಿ ೨ ಮೀಟರ್ ಅಂತರವನ್ನು ದಾಟುತ್ತಿದ್ದನು. ಸರಳ ಜೀವನದ ಸಹಾಯದಿಂದ ಮಾಂಸಖಂಡದಿಂದ ತುಂಬಿದ ತನ್ನ ದೇಹವನ್ನು ಮಾಟಾಗಿಟ್ಟುಕೊಂಡಿದ್ದನು. ಪ್ಯಾರಿಸ್ಸಿನಿಂದ ಮಾಸ್ಕೊಕ್ಕೆ ಓಡಿದ ಪಂದ್ಯದಲ್ಲಿ ಅವನು ತಿಂದ ಆಹಾರದಲ್ಲಿ ೨ ಕಿಲೋಗ್ರಾಂ ತಣ್ಣನೆಯ ಮಾಂಸ, ಬಿಳಿಯ ರೊಟ್ಟಿ (Bread) ಮತ್ತು–ಅವನ ದೌರ್ಬಲ್ಯವೆನ್ನಬಹುದಾದ–ಮದ್ಯ. ಯಾವಾಗಲೂ ಹೊರಭಾಗದ ನೆಲದ ಮೇಲೆ ಮಲಗುವದೇ ಅವನ ರೂಢಿ. ಒಳಗಡೆ ಮಲಗುವದಾದರೆ, ಒಂದು ಕಟ್ಟಿಗೆಯ ಮಂಚ ಅಥವಾ ಹಲಗೆಯನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡು ಮಲಗುತ್ತಿದ್ದನು.

ಮುಖ್ಯವಾಗಿ ಜಗತ್ತನ್ನೆಲ್ಲಾ ನೋಡಬೇಕೆಂಬ ಮನದಾಸೆಯನ್ನೀಡೇರಿಸಲು ಓಡುವುದನ್ನು ಪ್ರಾರಂಭಿಸಿದನಂತೆ. ತಾನು ಹೋದಲ್ಲೆಲ್ಲ ಹೊಸ (ಕಾಲು) ದಾರಿಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದನು. ಒಂದು ದೃಷ್ಟಿಯಲ್ಲಿ ಅವನ ನಾವಿಕ ಜೀವನ ವ್ಯರ್ಥವಾಗಲಿಲ್ಲ. ಸಮುದ್ರಯಾನದ ಅನೇಕ ವರ್ಷಗಳ ಅನುಭವದ ಸಹಾಯದಿಂದ ಕಾಲ್ದಾರಿಯಿರದ ಭೂ-ಭಾಗದಲ್ಲೂ ಮೆನ್ಸನ್ ತನ್ನ ನಕ್ಷೆ, ಕಾಲಸೂಚಕ, (Chronometer) ಕಾಲವೃತ್ತಫಲಕ, (Quadrant) ಸೂರ್ಯ ಹಾಗೂ ನಕ್ಷತ್ರಗಳನ್ನು ನೋಡಿ ಮುಂದುವರಿಯುತ್ತಿದನು.

"ನಾನು ಆಯ್ದುಕೊಂಡಿರುವ ಈ ವೃತ್ತಿ ಅನೇಕ ಜನರಿಗೆ ವಿಚಿತ್ರ ಹಾಗೂ ವ್ಯರ್ಥ ಪ್ರಯತ್ನವೆನಿಸಿರಬೇಕು. ಆದರೆ ನನಗೆ ಮಾತ್ರ ಹೇರಳ ಸಂಪತ್ತು ಹಾಗೂ ಗೌರವ ತಂದಿದೆ. ಇವಕ್ಕಿಂತ ಮಿಗಿಲಾಗಿ 'ಪ್ರಯಾಣದ ಆನಂದ' ವೆಂಬ ಸಂಪತ್ತು ನನಗೆ ಹೆಚ್ಚಿನ ಪ್ರಮಾಣದಲ್ಲಿ ದೊರಕಿದ ಈ ಪ್ರಯಾಣಗಳಲ್ಲಿ ತೊಂದರೆ, ದುಃಖಗಳು ಇದ್ದವೆಂಬುದನ್ನು ನಾನು ಒಪ್ಪಬೇಕು" ಎಂದು ತನ್ನ ದಿನಚರಿಯಲ್ಲಿ ಬರೆದಿದ್ದಾನೆ.

ತನ್ನ ೪೦ನೇ ವಯಸ್ಸಿನಲ್ಲಿಯೇ ಕಳೆಗುಂದಿ ವಯಸ್ಸಾದವನಂತಾಗಿದ್ದ. ಬಹುಕಾಲದವರೆಗೆ ಬಿಸಿಲು, ಗಾಳಿಗೆ ಒಡ್ಡಿದ್ದರಿಂದ, ಭಾವಾತಿರೇಕ ಪ್ರದರ್ಶಕವಾದ ಅವನ ಮುಖ ಸುಕ್ಕುಗಟ್ಟಿತು, ಕೂದಲು ಬೆಳ್ಳಗಾದವು. ಈಗ ಅವನು ಓಟದ ಮೂಲಕ ಉದಾತ್ತ ಧ್ಯೇಯವನ್ನು ಅರಸಲು ಹೊರಟನು. ಓಟದ ಪಂದ್ಯಗಳನ್ನು ಸಹಾಯಾರ್ಥವಾಗಿ ನಡೆಸಿ ಬಂದ ಹಣವನ್ನು ಬಡಜನರಿಗೆ ದಾನ ಮಾಡಿದನು.

೧೮೪೩ರಲ್ಲಿ ಆಫ್ರಿಕಾದಲ್ಲಿ—ಅಲೆಗ್ಸಾಂಡ್ರಿಯಾದಿಂದ ಕೇಪ್‌ವರೆಗೆ—ಓಡಲು ಪ್ರಾರಂಭಿಸಿದನು. ಈ ಸಾಹಸ ಕೇವಲ ಪಂದ್ಯವಾಗಿರಲೆಂದು ಅವನು ಅಪೇಕ್ಷೆಪಟ್ಟನು. ರಾಜಕುಮಾರ ಮುಸ್ಕಾವನ್ ಆದೇಶದಂತೆ ಏರ್ಪಡಿಸಲಾದ ಈ ಪಂದ್ಯದ ಮೂಲಕ ಮೆನ್ಸನ್. ನೈಲ್ ನದಿಯ ಉಗಮವನ್ನು ಕಂಡು ಹಿಡಿಯಲು ನಿರ್ಧರಿಸಿದನು. ಆದರೆ ಅವನಿಗೆ ನದಿಯ ಮೊದಲ ಜಲಪಾತಕ್ಕಿಂತ ಮುಂದೆ ಸಾಗಲಾಗಲಿಲ್ಲ. ಒಂದು ರೋಗ-ಬಹುಶಃ ಆಮಶಂಕೆ-ಅವನನ್ನು ಮತ್ತೆಂದೂ ನಡೆಯಲಾರದಂತೆ ಮಾಡಿತು.

ಅವನ ಸಾವಿನ ಸಮಾಚಾರ ತಿಳಿದ ರಾಜಕುಮಾರ, ಅವನು ಸತ್ತ ಸ್ಥಳದಲ್ಲಿಯೇ ಸಮಾಧಿ ಲೇಖವನ್ನು ನೆಡುವಂತೆ ಮಾಡಿದನು. "ಜಿಂಕೆಯ

ಚುರುಕು, ಸ್ವಾಲೊ ಹಕ್ಕಿಯ ಅವಿಶ್ರಾಂತತೆ ಇವನದು. ಭೂಮಿಯನ್ನೇ ತನ್ನ ಕಾರ್ಯಕ್ಷೇತ್ರ ಮಾಡಿಕೊಂಡ ಇವನಂಥ ವ್ಯಕ್ತಿ ಕಾಣಸಿಗಲಸಾಧ್ಯ"ವೆಂಬ ಚರಮವಾಕ್ಯದ ಫಲಕವನ್ನು ಅಲ್ಲಿಯೇ ನೆಡಲಾಯಿತು. ಇಂದಿಗೂ ಈ ಓಟಗಾರನ ದಾಖಲೆಗಳನ್ನು ಮೀರಿಸಲು ಯಾವ ಓಟಗಾರನಿಗೂ ಸಾಧ್ಯವಾಗಿಲ್ಲ.

ಗೋಪಾಲ ಆಶ್ರಿತ



ಸುಳ್ಳು ಹೇಳುವವರು ಎಲ್ಲಾ ನಾಚಿಕೆಯನ್ನು ಬಿಟ್ಟೇ ನಿಂತಿರುತ್ತಾರೆ; ಸತ್ಯದ ಸೀಮೆಯನ್ನಂತೂ ಎಂದೋ ದಾಟಿಬಿಟ್ಟಿರುತ್ತಾರೆ.

—ಷೇಕ್ಸ್‌ಪಿಯರ್

ಕೋಪೋದ್ರೇಕದಲ್ಲಿ ಏನನ್ನೂ ಮಾಡಬೇಡಿರಿ; ಹಾಗೆ ಮಾಡಿದಿರೆಂದರೆ ಬಿರುಗಾಳಿ ಬಿಟ್ಟ ಸಮುದ್ರದಲ್ಲಿ ಯಾನ ಹೊರಟಂತೆಯೇ ಸರಿ.

—ಥಾಮಸ್ ಫುಲರ್

ನಮ್ಮ ಜೀವ ಹಿತವಚನದ ಚರಿಯನ್ನು ಯಾರೂ ಅಲ್ಲವೆಂದು ಪರಿಗಣಿಸದಿರಲಿ!

—ಜಿ. ಚಾಪ್‌ಮನ್

ನಿಮ್ಮೊಬ್ಬರನ್ನೇ ಪರೀಕ್ಷೆಗೆ ನಿಲ್ಲಿಸುತ್ತಾರೆ. ನೀವೊಬ್ಬರೆ ಮರುಭೂಮಿಯಲ್ಲಿ ನಡೆಯಬೇಕಾಗುತ್ತದೆ; ನಿಮ್ಮೊಬ್ಬರನ್ನೇ ಜಗತ್ತು ಮೇಲೆತ್ತಿ ತರುತ್ತವೆ.

—ಎಫ್. ಡಬ್ಲ್ಯು. ರಾಬರ್ಟ್ಸನ್

ಊನ

(ಕಳೆದ ಸಂಚಿಕೆಯಿಂದ)

೪

ಶಂಕರನ್ ಮನೆಯೊಳಗೆ ಬರುವಾಗ ಸುಂದರೇಶನ್ ನಡುಮನೆಯಲ್ಲಿ ಈಸಿಚೇರಿನಲ್ಲಿ ಕುಳಿತುಕೊಂಡು ಯಾವುದೋ ಪುಸ್ತಕ ಒಂದನ್ನು ಓದುತ್ತಿದ್ದರು. ಕಣ್ಣುಗಳಿಗೆ ಶಕ್ತಿ ಕಮ್ಮಿಯಾಯಿತೆಂದು ಕಾಣುತ್ತದೆ; ಅವರು ಪುಸ್ತಕವನ್ನು ಕಣ್ಣಿಗೆ ತೀರ ಹತ್ತಿರ ಇಟ್ಟುಕೊಂಡು ಕಷ್ಟಪಡುತ್ತಿದ್ದರು.

"ಕಣ್ಣು ಕಾಣಿಸಲಿಲ್ಲ ಅಂದರೆ ಯಾಕೆ ಹೀಗೆ ಇನ್ನೂ ಕೆಡಿಸಿಕೊಳ್ಳೋದಕ್ಕೆ ನೋಡ್ತಿದೀರ" ಎಂದರು ಶಂಕರನ್.

"ಬಾ....ಶಂಕರಾ....ಬಾ....ಹೀಗೆ ಕೂತುಕೊ...." ಸುಂದರೇಶನ್ ಅವರ ಪಕ್ಕದಲ್ಲಿದ್ದ ಉಯ್ಯಾಲೆಯನ್ನು ತೋರಿಸಿದರು.

"ನಾನು ಮುಖ್ಯವಾದ ಒಂದು ವಿಷಯವನ್ನು ಏಕಾಂತವಾಗಿ ನಿನ್ನ ಹತ್ತಿರ ಹೇಳಬೇಕೂಂತ ಎಣಿಸಿದೆ. ನಿಮ್ಮ ಮನೆಯಲ್ಲಿ ಗಣೇಶನ ಎದುರಿಗೆ ಹೇಳುವ ವಿಷಯವಲ್ಲ ಅದು...." ಎಂದು ಆರಂಭಿಸಿದರು, ಸುಂದರೇಶನ್.

"ಏನು ಮಾವ ಅದು, ಮುಖ್ಯವಾದ ವಿಷಯ?...."

"ನಿನಗೆ ಎಲ್ಲಾ ಗೊತ್ತಾಗಿದೆ ಅಂತ ತಿಳೀತಿನಿ. ಉಮಾ ಮದುವೆಯಾಗಿ ಎರಡು ದಿವಸ ಕೂಡ ಸುಮಂಗಲಿಯಾಗಿ ಬಾಳಲಿಲ್ಲ. ಪ್ರಪಂಚವೂ ತನ್ನ ಹಾಗೆ ಎಂದು ತಿಳಿದುಕೊಂಡಿರುವ ಬಡಪಾಯಿ ಗಣೇಶನ್ನ ಎಲ್ಲರೂ ಸೇರಿ ಮೋಸ ಮಾಡಿಬಿಟ್ರು. ಚಿದಂಬರಂ ಹತ್ತಿರ ಶಿವಪುರಿ ಗುರುಗಳ ಅವರ ಹುಡುಗ ಒಬ್ಬ ರೋಗಿಷ್ಟ, ಅವನನ್ನು ತಂದು ಉಮಾ ಕತ್ತಿಗೆ ಕಟ್ಟಿದ. ಮೂರನೇ ದಿವಸವೇ ಹೃದಯಾಘಾತದಿಂದ ಹೋಗಿಬಿಟ್ಟ ಅಳಿಯ. ಆವತ್ತಿನಿಂದ ದಿನಾಗಲೂ ನಾನು ಹೇಳ್ತಿದೀನಿ "ಇದು ನಿನಗೆ ಸರಿಯಾ, ಸರಿಯಾ" ಎಂದು. ಜೇಡಿಯವರ ಹೆದರಿಕೆಯಲ್ಲಿ ನನ್ನ ಮಾತು ಇನ್ನೂ ಅವನ ಕಿವಿಗೆ ಬಿದ್ದೇ ಇಲ್ಲ....ದೇವರ ನಿಂದನೆಯಾದರೂ ಆಗಲಿ, ನನ್ನ ಮನಸ್ಸನ್ನು ಸಮಾಧಾನ ಮಾಡಿಕೊಳ್ಳಕ್ಕೆ ಬೇರೆ ದಾರಿ ಇಲ್ಲ...."

ಸುಂದರೇಶ ಮಾವನಿಗೆ ಇದಕ್ಕೂ ಹೆಚ್ಚಾಗಿ ಮಾತಾಡಕ್ಕೆ ಆಗಲಿಲ್ಲ. ಗಂಟಲು ಕಟ್ಟಿತು.

ತಮಿಳು ಮೂಲ : ಇಂದಿರಾಪಾರ್ಥಸಾರಥಿ

"ಒಳಗೆ ಹೋಗಿ ಕೊಂಚ ನೀರು ತೆಗೆದುಕೊಂಡು ಬಾ." ಶಂಕರನ್ ಎದ್ದು ಒಳಗೆ ಹೋಗಿ ಕೊಡದಲ್ಲಿದ್ದ ನೀರನ್ನು ಲೋಟಕ್ಕೆ ಬಗ್ಗಿಸಿಕೊಂಡು ತಂದರು.

"ಅವಳು ಹೋಗಿ ಐದು ವರ್ಷವಾಯಿತು. 'ಪುತ್' ಎನ್ನುವ ನರಕಕ್ಕೆ ಹೋಗೋಕ್ಕೆ ಯಾರಾವರೂ ಬೇಡವಾ? ಅದಕ್ಕೆ ಹುಟ್ಟಿದ ಒಂದೂ ಅಲ್ಪಾಯಸ್ಸಲ್ಲೇ ಹೊರಟುಹೋಯ್ತು...." ವಯಸ್ಸಾದರೂ ಅವರನ್ನು ಗೇಲಿ ಇನ್ನೂ ಬಿಟ್ಟಿಲ್ಲ.

ಶಂಕರನ್ ಬಂದು ಉಯ್ಯಾಲೆಯಲ್ಲಿ ಕೂತರು. ಸುಂದರೇಶನ್ ನೀರು ಕುಡಿದು ಲೋಟವನ್ನು ಕೆಳಗಿಟ್ಟರು. ತಿರುಗಿ ಮುಂದುವರಿಸಿದರು.

"ನಾನು ಒಂದು ಹೇಳ್ತೀನಿ ಕೇಳು. ಆ ಹುಡುಗಿ ಇದ್ದಾಳಲ್ಲ ಉಮಾ.... ಅದನ್ನು ನೀನು ಉತ್ತರಕ್ಕೆ ಎಲ್ಲಿಗಾದರೂ ಸರಿ ಕರಕೊಂಡುಹೋಗಿ, ಒಳ್ಳೆ ಜಾಗ ನೋಡಿ ಮದುವೆಮಾಡಿಕೊಡು. ಈ ಮಾಂಗುಡಿಯಲ್ಲಿರುವ ಸಮಾಜ ನಿನ್ನ ಹಿಂದೇನೂ ಉತ್ತರಕ್ಕೆ ಬರಲ್ಲ. ಇದೇ ಆ ಹುಡುಗಿಗೆ ನಾವು ಮಾಡಬಹುದಾದ ನ್ಯಾಯ. ಗಣೇಶನ್ ಮಾಡಿದ ಮೂರ್ಖತ್ವಕ್ಕೆ ಪ್ರಾಯಶ್ಚಿತ್ತ...."

"ಗಣೇಶ ಏನು ಹೇಳ್ತಾನೆ?"

"ಗಣೇಶನ್ ಹೇಳೋದಕ್ಕೆ ಏನು ಇದೆ ಇದರಲ್ಲಿ?.... ನಾನು ಒಂದು ಹೇಳಲಾ? ಇದನ್ನು ಕೇಳಿದರೆ ನೀನು ಆಶ್ಚರ್ಯಪಡ್ತಿ. ಈ ವಿಷಯವಾಗಿ ನಾನೂ ಗಣೇಶನೂ ಮಾತಾಡಾಯ್ತು. ಅವನಿಗೂ ಒಪ್ಪಿಗೆ ಸರಿಯಾ?"

"ಹೌದಾ!" ಶಂಕರನ್ ನಿಜವಾಗಲೂ ಇದನ್ನು ನಿರೀಕ್ಷಿಸಿರಲಿಲ್ಲ.

"ಹೌದು.... ಆದರೆ, ಅವನಿಗೆ ಒಪ್ಪಿಗೆ ಅನ್ನೋ ವಿಷಯ ನನಗೂ ನಿನಗೂ ಹೊರತು ಬೇರೆ ಯಾರಿಗೂ ಗೊತ್ತಾಗಕೂಡದು. ಅವನಿಗೆ ಸಮಾಜವನ್ನು ನೋಡಿದರೆ ಅಷ್ಟು ಭಯ. ನೀನು ಕರೆದುಕೊಂಡು ಹೋಗೋದನ್ನು ಅವನು ತಡೆಯಲ್ಲ. ಉಮಾನ ಅವಳ ದೊಡ್ಡಪ್ಪ ಕರಕೊಂಡು ಹೋದ ಅನ್ನೋದು ಸಮಾಜಕ್ಕೆ ಅವನು ಹೇಳೋ ಸಮಾಧಾನ...."

"ಇದರಲ್ಲಿ ಉಮಾಳ ಅಭಿಪ್ರಾಯವೂ ಇದೆ ಅನ್ನೋದನ್ನ ಮರೆತು ಬಿಟ್ಟಿರಲ್ಲ...."

"ಈಗ.... ನಿನ್ನನ್ನು ಇಲ್ಲಿಗೆ ಬರಹೇಳಿದ್ದು ಯಾರು?" ಎಂದು ಕೇಳಿ.... ಅರ್ಥಪೂರ್ಣವಾಗಿ ನಕ್ಕರು ಸುಂದರೇಶನ್.

ಶಂಕರರಿಗೆ ಇನ್ನೂ ಆಶ್ಚರ್ಯವಾಯಿತು. "ಉಮಾಳ ಹತ್ತಿರಾನೂ ಹೇಳಿದ್ದೀರಾ?"

"ನೀನು ಹೋದ ಮೇಲೆ ಈ ಊರಿನಲ್ಲಿ ನನ್ನ ಶಿಷ್ಯಪರಂಪರೆಗೆ ಉಮಾ ಒಬ್ಬಳೇ ಇದ್ದಾಳೆ...."

ಶಂಕರನ್ ಎದ್ದರು. "ಮೂವತ್ತು ವರ್ಷಕ್ಕೆ ಮುಂಚೆ ಈ ಊರನ್ನು ಬಿಟ್ಟು ಹೋಗುವಾಗ, ಯಾವ ಜವಾಬ್ದಾರಿಯೂ ಬೇಡ ಅಂತ ನಿಮ್ಮ ಆಶೀರ್ವಾದದೊಂದಿಗೆ ಹೋದೆ. ಈಗ ಮೂವತ್ತು ವರ್ಷಗಳ ನಂತರ ಜವಾಬ್ದಾರಿಯನ್ನು ಹೊತ್ತುಕೊಂಡು ನಿಮ್ಮ ಆಶೀರ್ವಾದದೊಂದಿಗೆ ಹೋಗ್ತೀನಿ...."

"ಆದರೆ, ಈಗಲೇ ನಿನ್ನ ಜೀವನ ಪ್ರಯೋಜನಕ್ಕೆ ಬರುತ್ತಿದೆ ಅಂತ ನಾನು ತಿಳಿಯುತ್ತೇನೆ...." ಎಂದರು ಸುಂದರೇಶನ್.

ಮನೆಗೆ ಬಂದು ಊಟಮಾಡಿ ಉಯ್ಯಾಲೆಯಲ್ಲಿ ಕುಳಿತುಕೊಂಡಾಗ ಶಂಕರನ್ ತಮ್ಮನ ಜೊತೆ ಮಾತಾಡಿದರು. "ನಾನು ನಾಳೆ ರಾತ್ರಿ ಊರಿಗೆ ಹೋಗೋಣಾಂತ ಇದ್ದೀನಿ...."

ವಿಳ್ಯೇದೆಲೆಗೆ ಸುಣ್ಣವನ್ನು ಹಚ್ಚುತ್ತಾ ಗಣೇಶನ್ ಕೇಳಿದರು. "ಯಾವ ಊರಿಗೆ?...."

"ಡೆಲ್ಲಿಗೆ, ಉಮಾನ ಕರೆದುಕೊಂಡು ಹೋಗೋಣಾಂತ ಇದ್ದೀನಿ. ಅವಳು ಸ್ವಲ್ಪ ದಿನ ನನ್ನ ಜೊತೆ ಇರಲಿ...."

ಗಣೇಶನ್ ಏನೂ ಉತ್ತರ ಹೇಳಲಿಲ್ಲ. ಸ್ವಲ್ಪ ಹೊತ್ತು ಮೌನ ನೆಲಸಿತ್ತು.

ಅಡುಗೆ ಮನೆಯ ಬಾಗಿಲ ಮರೆಯಲ್ಲಿ ನಿಂತುಕೊಂಡು ಪಾರ್ವತಿ ಶಂಕರನ್ ಹೇಳುವುದನ್ನು ಕೇಳುತ್ತಿದ್ದಳು. ಸೆರಗಿನಿಂದ ಅವಳು ಕಣ್ಣುಗಳನ್ನು ಒರೆಸಿಕೊಂಡಿದ್ದು ಅವರಿಗೆ ಕಾಣಿಸಿತು.

"ಸರಿ, ಮಲಗಕ್ಕೆ ಹೋಗೋಣವಾ?" ಎಂದು ಕೇಳುತ್ತಾ ಗಣೇಶನ್ ಎದ್ದು ನಿಂತರು.

ಊಟ ಮಾಡಿದ ಎಲೆಯನ್ನು ಬೀದಿಗೆ ಬಿಸಾಕಿ ಒಳಗೆ ಬಂದಳು ಉಮಾ.

"ನಿನಗೆ ಬರಕ್ಕೆ ಇಷ್ಟ ತಾನೆ....?" ಎಂದು ಕೇಳಿದರು ಶಂಕರನ್.

ಅವಳು ಕೆಳಗೆ ನೋಡುತ್ತಾ ತಲೆ ಅಲುಗಿಸಿದಳು.

ಮಾರನೆಯ ದಿನ ಬೆಳಿಗ್ಗೆ ಶಂಕರನ್ ಎದ್ದಾಗ ಉಮಾ ಹೊರಗಡೆ ರಂಗೋಲೆ ಹಾಕುತ್ತಿರುವುದನ್ನು ನೋಡಿದರು. ಎಷ್ಟು ಸುಂದರವಾದ ದೊಡ್ಡದಾದ ಹಸೆ! ಅವರು ಹತ್ತಿರ ಬಂದು ಹಸೆಯನ್ನು ಸ್ವಲ್ಪ ಹೊತ್ತು ನೋಡುತ್ತಾ ನಿಂತರು.

"ಈಗಲೇ ನಿನ್ನ ಆಸೆ ತೀರುವಂತೆ ದೊಡ್ಡ ಹಸೆಯಾಗಿ ಹಾಕಿಬಿಡು. ಡೆಲ್ಲಿಗೆ ಬಂದರೆ, ರಂಗೋಲೆ ಹಾಕಕ್ಕಾಗಲ್ಲ...."

"ಡೆಲ್ಲೀಲಿ ರಂಗೋಲೆ ಹಾಕಲ್ಲ?...." ಎಂದು ಕೇಳಿದಳು ಉಮಾ.

"ಅಕ್ಕನ್ನ ಊರಿಗೆ ಕರಕೊಂಡು ಹೋಗ್ತೀರಾ?...."

ಶಂಕರನ್ ತಿರುಗಿ ನೋಡಿದರು. ಜಗುಲಿ ಪಕ್ಕದಲ್ಲಿ ಬಾಗಿಲ ಹತ್ತಿರ ಬಾಬು ಕೂತಿದ್ದ.

"ನೀನೂ ಬರ್ತೀಯಾ?"

ಅವರು ಕೇಳಿದ್ದಕ್ಕೆ ಉತ್ತರಿಸದೆ ಅವನು ಉಮಾನ ಕೇಳಿದ: "ಅಕ್ಕಾ, ದೊಡ್ಡಪ್ಪನ ಜೊತೆ ಊರಿಗೆ ಹೋಗ್ತೀಯಾ?...."

"ಹೌದು....ಹೋಗಿಬಿಟ್ಟು, ಬೇಗ ತಿರುಗಿ ಬಂದುಬಿಡ್ತೀನಿ."

"ಅಕ್ಕಾ ನನ್ನನ್ನು ಬಿಟ್ಟು ಹೋಗ್ತೀಯಾ?"

"ಹೋಗಿಬಿಟ್ಟು ಬಂದುಬಿಡ್ತೀನಿ ಅಂದ್ರೆ ಕೇಳಲ್ಲವಲ್ಲೊ?" ಅವನು ತಿರುಗಿ ತಿರುಗಿ ಕೇಳುವುದರಿಂದ ತಾನು ಸುಳ್ಳು ಹೇಳಬೇಕಾಗಿದೆಯಲ್ಲ ಎಂದು ಅವಳಿಗೆ ಸಂಕಟವಾಯಿತು.

ಬಾಬು ಅಂಬೆಗಾಲಿಕ್ಕುತ್ತಾ ಒಳಗೆ ಹೋದ.

"ದೊಡ್ಡಪ್ಪಾ ಬನ್ನಿ. ಮುಖ ತೊಳೆದು ಕಾಫಿ ಕುಡೀರಿ...." ಎಂದು ಹೇಳಿ ಒಳಗೆ ಹೋದಳು ಉಮಾ.

ಹಿತ್ತಲಿಂದ ಶಂಕರನ್ ಬರುವಾಗ ಬಾಬು ಅಂಗಳದಲ್ಲಿ ಕೂತಿದ್ದ. ಅಡುಗೆ ಮನೆಯಿಂದ ದೊಡ್ಡಪ್ಪನಿಗೆ ಕಾಫಿ ತಂದ ಉಮಾ ಕೇಳಿದಳು:

"ನಿಮಗೆ ಯಾವ ಸಿಹಿತಿಂಡಿ ಇಷ್ಟ ಅಂತ ಅಮ್ಮ ಕೇಳಿದಳು..."

"ನನಗಾ? ಇಷ್ಟ ಇಲ್ಲದೆ ಇರುವುದು ಯಾವುದೂ ಇಲ್ಲ. ಎಲ್ಲಾ ಇಷ್ಟಾನೆ."

"ಸುಳ್ಳು ಹೇಳ್ತೀಯ. ನಿನಗೆ ನನ್ನನ್ನ ಕಂಡರೆ ಇಷ್ಟ ಇಲ್ಲ" ಎಂದ ಬಾಬು.

ಶಂಕರನ್ ಚಕಿತರಾದರು. ಬಾಬುಗೆ ಕೋಪ ಬಂದಿರಬೇಕು. ಅವರು ಅವನ ಹತ್ತಿರ ಹೋದರು.

"ನೀನು ಇಷ್ಟ ಇಲ್ಲ ಅಂತ ಯಾರು ಹೇಳಿದರು? ನಿನ್ನನ್ನು ಕಂಡರೇನೆ ನನಗೆ ತುಂಬ ಇಷ್ಟ...."

"ನನ್ನನ್ನು ಕಂಡರೆ ಇಷ್ಟ ಅಂದ್ರೆ ಅಕ್ಕನ್ನ ಯಾಕೆ ಕರಕೊಂಡು ಹೋಗ್ತೀರಿ?"

"ಅಕ್ಕ ಎಲ್ಲಿಗೆ ಹೋಗ್ತಾಳೆ? ಹತ್ತು ದಿವಸದಲ್ಲಿ ತಿರುಗಿ ಬಂದ್ಬಿಡ್ತಾಳೆ...."

"ಸುಳ್ಳು ಹೇಳ್ತೀರ ಎಲ್ಲಾ ನನಗೆ ಗೊತ್ತು. ಅಕ್ಕಾ ತಿರುಗಿ ಬರೋದೇ ಇಲ್ಲ...."

ಅಲ್ಲಿಗೆ ಬಂದ ಗಣೇಶನಿಗೂ ಬಾಬು ಮಾತು ಕೇಳಿ ದಿಗ್ಭ್ರಮೆಯಾಯಿತು. ಅಂತರಂಗವಾಗಿ ಒಬ್ಬರನ್ನೊಬ್ಬರು ಅರಿತುಕೊಂಡು, ಅದರ ವಿಷಯವಾಗಿ

ಬಾಯಿಬಿಟ್ಟು ಏನೂ ಮಾತಾಡದೆ ಕಾರ್ಯವನ್ನು ಸಾಧಿಸುವಾಗ ಬಾಬುಗೆ ಮಾತ್ರ ಹೇಗೆ ಗೊತ್ತಾಯಿತು....?"

"ಯಾರೊ ಹೇಳಿದರು ನಿನಗೆ, ಅಕ್ಕ ತಿರುಗಿ ಬರಲ್ಲ ಅಂತ?"

"ದೊಡ್ಡಪ್ಪ ಮೊದಲು ಹೋದರಲ್ಲ, ಮನೆ ಬಿಟ್ಟು, ಯಾವಾಗ ತಿರುಗಿ ಬಂದರು? ಮೂವತ್ತು ವರ್ಷ ಆದಮೇಲೆ ತಾನೆ, ಅಕ್ಕ ಮಾತ್ರ ಹತ್ತು ದಿವಸದಲ್ಲಿ ಹೇಗೆ ತಿರುಗಿ ಬರ್ತಾಳೆ?"

ಗಣೇಶನಿಗೆ ಸ್ವಲ್ಪ ನೆಮ್ಮದಿಯಾಯಿತು. "ಹುಚ್ಚನಹಾಗೆ ಹೇಳ್ಬೇಡ.... ಅಕ್ಕ ತಿರುಗಿ ಬಂದ್ಬಿಡ್ತಾಳೆ, ಹತ್ತು ದಿವಸದಲ್ಲಿ...."

ಉಮಾ ಬಾಬುಗೆ ಹಾಲು ತೊಗೊಂಡು ಬಂದಳು. "ನನ್ನ ಹತ್ತಿರ ಬರಬೇಡ....ಹೋಗು....ನೀನು ದೊಡ್ಡಪ್ಪನ ಜೊತೆ ಹೋಗ್ತೀಯಲ್ಲ!" ಬಾಬು ಕೂಗಾಡಿದ.

"ಸರಿ....ನಾನು ನಿನ್ನ ಹತ್ತಿರ ಬರಲ್ಲ. ಹಾಲು ಇಟ್ಟುಬಿಟ್ಟು ಹೋಗ್ತೀನಿ ಕುಡಿ...."

"ನೀನು ಇಟ್ಟರೆ ನಾನು ಕುಡಿಯಲ್ಲ. ಮೀನಾ ಕೊಟ್ಟರೇನೆ ಕುಡೀತೀನಿ. ಮೀನಾ....ಸೊಂಟದಲ್ಲಿ ಕೈಯಿಟ್ಟುಕೊಂಡು ಮೀನಾ ಅಲ್ಲಿಗೆ ಬಂದಳು: "ಇದೊ ಈ ಹಾಲನ್ನು ನಿನ್ನ ಅಣ್ಣನ ಹತ್ತಿರ ಕೊಡು...."

ಬಾಬು ಅಳಲು ಆರಂಭಿಸಿಬಿಟ್ಟ.

"ಯಾಕೊ ಅಳ್ತೀಯಾ?"

"ನನಗೆ ಕೊಡಕ್ಕೆ ನಿನಗೆ ಇಷ್ಟ ಇಲ್ಲ. ನಾನು ನೀನು ಕೊಡಬೇಡ ಅಂದ ಕೂಡ್ಲೆ, ಇದೇ ಸಮಯಾಂತ ನೀನು ಮೀನಾಗೆ ಕೊಡಕ್ಕೆ ಹೇಳ್ತೀದಿ. ನಿನಗೆ ನನ್ನನ್ನು ಕಂಡ್ರೆ ಆಗಲ್ಲ" ಎಂದು ಬಿಕ್ಕುತ್ತಾ ಹೇಳಿದ.

"ಬಾಬು ಜಾಣ ಹುಡುಗನ ಹಾಗೆ ಇರಬೇಕು. ಹಾಲು ಯಾರು ಕೊಟ್ಟರೆ ಏನು?" ಎಂದರು ಶಂಕರನ್.

"ನಿನ್ನ ಹತ್ರ ನಾನು ಮಾತಾಡಲ್ಲ. ಹೋಗು, ನೀನು ಅಕ್ಕನ್ನ ಕರಕೊಂಡು ಹೋಗ್ತಿಯಲ್ಲ...."

ಇವಕ್ಕೆ ಮೇಲೆ ಅವರು ಏನೂ ಹೇಳಲಿಲ್ಲ.

ಉಮಾ ಹಾಲನ್ನು ಬಾಬು ಹತ್ತಿರ ಕೊಟ್ಟಳು. ಅವನು ಕುಡಿಯಲು ಆರಂಭಿಸಿದ.

"ಅಕ್ಕ....ನನ್ನನ್ನು ಬಿಟ್ಟುಬಿಟ್ಟು ಹೋಗಬೇಡ."

"ಅಕ್ಕಾ...." ಅವನು ಅವಳನ್ನು ತಬ್ಬಿಕೊಂಡ.

ಶಂಕರನ್ ಮೆಲ್ಲಗೆ ಗಣೇಶನ್ ಹತ್ತಿರ ಹೇಳಿದರು, "ಇದೇನು ಹೀಗೆ ಇದೆಯಲ್ಲ ? ನಾನು ಇದನ್ನು ಎಣಿಸಿರಲಿಲ್ಲ."

"ಎರಡು ದಿನ ಹೀಗೆ ಹೇಳ್ತಾನೆ ಆ ಮೇಲೆ ಎಲ್ಲಾ ಸರಿಯಾಗ್ತಾನೆ."

ಸಾಯಂಕಾಲ ಹೊರಡಲು ಎಲ್ಲಾ ಏರ್ಪಾಡುಗಳೂ ವೇಗವಾಗಿ ಸಾಗುತ್ತಿದ್ದವು. ಮಾಂಗುಡಿಯಿಂದ ಗಾಡಿಯಲ್ಲಿ ಕುಂಭಕೋಣಕ್ಕೆ ಹೋಗಿ ಅಲ್ಲಿಂದ ಹೋಗುವುದೆಂದು ನಿರ್ಧರಿಸಿದ್ದರು.

ಬಾಗಿಲಲ್ಲಿ ಗಾಡಿ ಬಂದು ನಿಂತಿತು.

ಉಮಾಳನ್ನು ಕುಂಭಕೋಣದವರೆಗೂ ಬಂದು ಕಳಿಸಿಕೊಡುವುದಾಗಿ ಹೇಳಿ ಸುಂದರೇಶ ಮಾವನೂ ಗಾಡಿಯಲ್ಲಿ ಹತ್ತಿಕೊಂಡರು.

ಮನಸ್ಸಿನ ಭಾವನೆಗಳ ಜೊತೆ ಹೋರಾಡಿಕೊಂಡು ಮೂಕಜೀವನ ನಡೆಸಿಕೊಂಡು ಬಂದ ಗಣೇಶನಿಗೂ ತನ್ನ ಕಣ್ಣೀರನ್ನು ತಡೆಯಲಾಗಲಿಲ್ಲ. ಯಾವ ಸ್ಥಿತಿಯಲ್ಲಿ ಊರಿಗೆ ಹೋಗಬೇಕಾದ ಹುಡುಗಿ ಹೇಗೆ ಹೋಗ್ತಿದಾಳೆ ? ತಾನು ತಪ್ಪು ಮಾಡ್ತಿದೇನೊ ಎಂದು ಅವರ ಮನಸ್ಸಿನಲ್ಲಿ ಒಂದು ಸಂಕೋಚ.

ತನ್ನ ಮಗಳು ಸುಖವಾಗಿ, ಸಂತೋಷವಾಗಿ ಬಾಳಬೇಕೆಂಬುದನ್ನು ಬಿಟ್ಟು ಬೇರೆ ಏನನ್ನೂ ಯೋಚಿಸದ ಪಾರ್ವತಿ, ಹಾಗೆ ಅವಳು ಬಾಳಬೇಕಾದ ಜವಾಬ್ದಾರಿಯನ್ನು ತನ್ನ ಭಾವನ ಮೇಲೆ ಹೊರಿಸಿ ದೃಢಚಿತ್ತಳಾಗಿದ್ದಳು.

ಗಾಡಿಗೆ ಕಟ್ಟಿದ್ದ ಎತ್ತನ್ನು ನೋಡುತ್ತಾ ಬೆರಳನ್ನು ಚೀಪುತ್ತಿದ್ದಳು ಅಮ್ಮು.

"ಅಕ್ಕಾ, ನೀನು ಬರುವಾಗ ನನಗೆ ಬಣ್ಣಬಣ್ಣದ ರಿಬ್ಬನ್ ತೊಗೊಂಡು ಬರ್ತೀಯಾ ?" ಎಂದು ಕೇಳುತ್ತಾ ಅಕ್ಕನನ್ನು ಸುತ್ತಿ ಸುತ್ತಿ ಬಂದಳು ಮೀನಾ.

"ಮನುಷ್ಯ ಕಲ್ಪನೆಗೆ ಎಷ್ಟು ಸಾಧ್ಯವೋ ಅಷ್ಟು ಬಣ್ಣದಲ್ಲೂ ನಿಮ್ಮಕ್ಕ ನಿಮಗೆ ರಿಬ್ಬನ್ ತರ್ತಾಳೆ" ಎಂದರು ಶಂಕರನ್.

ಬಾಬು ಎಲ್ಲಿ ? ಎಲ್ಲರ ಬಳಿಯೂ ಊರಿಗೆ ಹೋಗುತ್ತೇನೆ ಎಂದು ಹೇಳಿಕೊಂಡು ತಿರುಗಿದ ಉಮಾಳ ಕಣ್ಣುಗಳು ಬಾಬುವನ್ನು ಹುಡುಕಿದವು. ಬಾಬು ಕಾಣಿಸುತ್ತಿಲ್ಲ !....

ಉಮಾ ಬೇಗ ಒಳಗೆ ಹೋದಳು. ಅಡುಗೆ ಮನೆಯಲ್ಲೂ ಅವನಿಲ್ಲ !

"ಅಮ್ಮಾ ಬಾಬು ಎಲ್ಲಿ ?"

"ಇಲ್ಲೇ ಇದ್ದ ಕಣೆ" ಪಾರ್ವತಿಯ ಮನಸ್ಸೂ ಗಾಬರಿಯಾಯಿತು. ಎಲ್ಲಿ ಹೋಗಿಬಿಟ್ಟ ಅವನು ? ಎಲ್ಲಿಗೆ ಹೋಗಕ್ಕೆ ಸಾಧ್ಯ ?

ಹಿಂದುಗಡೆಯಿಂದ ವೀಣಾ ಕೂಗಿದಳು "ಅಮ್ಮಾ ಬಾಬು ಇಲ್ಲಿದ್ದಾನೆ!"

ಕೊಟ್ಟಿಗೆಯಲ್ಲಿ ಕಟ್ಟಿದ್ದ ಚಿಕ್ಕ ಕರುವನ್ನು ತಬ್ಬಿಕೊಂಡು ಬಾಬು ಅಳುತ್ತಿದ್ದ. ಅದು ಕಣ್ಣುಗಳನ್ನು ಅರೆಮುಚ್ಚಿ ಮೆಲಕು ಹಾಕುತ್ತಾ, ತನ್ನ ಮುಖವನ್ನು ಅವನ ಮುಖದ ಒತ್ತಿಗೆ ಹಿಡಿದು ಉಜ್ಜುತ್ತಿತ್ತು.

"ಬಾಬು ಏನಿದು ಹುಚ್ಚನ ಹಾಗೆ?...." ಉಮಾಗೆ ಇನ್ನೂ ಮಾತನಾಡಲಾಗಲಿಲ್ಲ.

"ನೀನು ಜಾಗೆ ಹೋಗು.... ನಾನು ಸತ್ತು ಹೋಗ್ತೀನಿ...." ಉಮಾ ಅವನ ಬಾಯನ್ನು ತನ್ನ ಕೈಗಳಿಂದ ಮುಚ್ಚಿದಳು. ಅವನು ಅವಳ ಕೈಯನ್ನು ತಳ್ಳಿದ.

"ನಾನು ಏನಾದರೆ ನಿನಗೇನು? ನನ್ನ ತೊಂದರೇನ ತಾಳಲಾರದೆ ತಾನೆ ಓಡಿ ಹೋಗ್ತಿದ್ದಿ".... ಎಲ್ಲಾ ನನಗೆ ಗೊತ್ತು!"

ಈ ಮಾತುಗಳು ಉಮಾನ ಮನಸ್ಸಿನಲ್ಲಿ ಮುಳ್ಳಿನಂತೆ ಚುಚ್ಚಿದುವು. ಅವಳ ಮನಸ್ಸಿನಲ್ಲಿ ಒಂದು ಶೂನ್ಯತೆ ಉಂಟಾಯಿತು.

ಹೊರಗಡೆಯಿಂದ ಎಲ್ಲರೂ ಒಳಗೆ ಬಂದುಬಿಟ್ಟರು. ಸುಂದರೇಶನ್ ಹೇಳಿದರು: "ಏನಮ್ಮಾ ಇದು? ಹೊರಡಕ್ಕೆ ಹೊತ್ತಾಯಿತು."

ಶಂಕರನಿಗೆ ಮೂವತ್ತು ವರ್ಷಗಳ ಮುಂಚೆ ತಾನು ಮನೆಬಿಟ್ಟು ಹೋಗುವಾಗ ತನ್ನ ತಮ್ಮ ಓಡಿಬಂದು ತನ್ನ ಕಾಲುಗಳನ್ನು ತಬ್ಬಿಕೊಂಡಿದ್ದು ನೆನಪಿಗೆ ಬಂತು. ಅವರು ತನ್ನ ತಮ್ಮನನ್ನು ನೋಡಿದರು.

ಅದೇ ನೆನಪಿನಿಂದಲೊ ಏನೊ, ಗಣೇಶನೂ ಅಣ್ಣನನ್ನು ನೋಡಿದರು.

ಈಗ ಉಮಾ ಏನು ಮಾಡಬಹುದು?

ಅವಳು ಸುಂದರೇಶ ಮಾವನನ್ನು ನೋಡಿ ಹೇಳಿದಳು. "ಮಾವ; ನೀವು ಯಾವಾಗಲೂ ಹೇಳ್ತೀರಲ್ಲ, ನಮ್ಮಪ್ಪನಿಗೆ ಎರಡು ಪ್ರಶ್ನೆ, ಒಂದು ತೀರಿಸಬಹುದು, ಇನ್ನೊಂದು ತೀರಿಸಲಾಗದ್ದು ಎಂದು. ಬೇಕಾದರೆ ಎರಡನ್ನೂ ತೀರಿಸಲಾಗದಂತೆ ಇದ್ದುಬಿಡಲಿ. ನಾನು ದೊಡ್ಡಪ್ಪನ ಜೊತೆ ಹೋಗಲ್ಲ."

ಸುಂದರೇಶನಿಗೆ ಕೋಪಬಂತು. "ಏನಮ್ಮಾ ಇದು? ಕೊನೆಗಳಿಗೆಯಲ್ಲಿ ಹೀಗೆ...."

ಉಮಾ ಮಧ್ಯದಲ್ಲೇ ತಡೆದು ಹೇಳಿದಳು: "ಇದೇನೂ ಕೊನೆಗಳಿಗೆಯಲ್ಲ.... ನಿಮಗೆ ಧೈರ್ಯ ಇದ್ದರೆ, ಏನಾದರೂ ಮಾಡಬೇಕೂಂತ ಇದ್ದರೆ ಇಲ್ಲೇ ಮಾಡಿ ....ಬಾಬುವನ್ನು ಬಿಟ್ಟು ಡೆಲ್ಲಿಗೆ ಹೋಗಲು ನಾನೇನೂ ಸ್ವಾರ್ಥಿಯಲ್ಲ...."

ಬಾಬುವಿನ ಹತ್ತಿರ ಹೋಗಿ, ಅವನ ಕಣ್ಣೀರನ್ನು ಒರೆಸಿದಳು ಉಮಾ.

(ಮುಗಿಯಿತು)

ಮಂದಾಕಿನಿರಾವ್

ಸ್ಯಾಲೀ ಕಟ್ಟಿದ ಶಾಲೆ

ಗ್ಯಾರಿಸ್ಮಿತ್ ಏಳುವರ್ಷದ ಬಾಲಕ. ವಾಷಿಂಗ್‌ಟನ್ನಿನ ಡಿ. ಸಿ. ಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದ. ಈ ಬಾಲಕ ಪರೀಕ್ಷೆಯ ಎಲ್ಲ ವಿಷಯಗಳಲ್ಲಿಯೂ ಅನುತ್ತೀರ್ಣನಾಗಿದ್ದ. ಆತನಿಗೆ 'ಕ್ಯಾಟ್' ಎಂಬ ಪದದ ಮೂಲಾಕ್ಷರಗಳನ್ನು ಬಿಡಿಸಿ ಹೇಳಲಿಕ್ಕಾಗಲೀ ಅಥವಾ ಎರಡು ಕೂಡಿಸು ಎರಡು ಎಂಬ ಲೆಕ್ಕ ಮಾಡಲಿಕ್ಕಾಗಲೀ ಬರುತ್ತಿರಲಿಲ್ಲ. ಆದರೂ ಕೂಡಾ ರೆಡ್ ಇಂಡಿಯನ್ನರ ಮಳೆ-ನಾಟ್ಯಗಳ ಬಗ್ಗೆ ಪ್ರಶ್ನೆ ಕೇಳಿದರೆ ತಾನು ಉತ್ತರಕೊಡುತ್ತೇನೆಂದು ಕೈ ಎತ್ತುತ್ತಿದ್ದ. ಗ್ಯಾರಿ ಅವುಗಳನ್ನೆಲ್ಲ ಗ್ರೀಕರ ಪುರಾಣಕಥೆಗಳಿಗೆ ಹೋಲಿಸುತ್ತಿದ್ದನು ಮತ್ತು "ರೆಡ್ ಇಂಡಿಯನ್ನರು ಕುಣಿತದಿಂದ ಅಥವಾ ಕಥೆ ಹೇಳುವುದರಿಂದ ತಮಗೆ ಬೇಕುಬೇಕಾದವುಗಳನ್ನೆಲ್ಲ ಪಡೆಯಬಹುದೆಂದು ಭಾವಿಸಿದ್ದರು" ಎಂದು ಹೇಳುತ್ತಿದ್ದ. ಹಾಗೆ ಗ್ಯಾರಿ ಹೇಳುತ್ತಿದ್ದಾಗ ಆತನ ಶಿಕ್ಷಕಿ ಫಕ್ಕನೆ ಗ್ಯಾರಿಯ ಕೈಹಿಡಿದು ನಿಲ್ಲಿಸಿ, "ಏ ಗ್ಯಾರಿ, ನಿನಗೆ ಅಂಥ ಕತೆಗಳೆಲ್ಲ ಗೊತ್ತಿವೆ; ಹಾಗಿರುವಾಗ 'ಕ್ಯಾಟ್' ಎಂಬ ಪದದ ಮೂಲಾಕ್ಷರಗಳೇನು ಎಂದು ಮಾತ್ರ ಏಕೆ ಹೇಳಲಾರೆ" ಎಂದು ಕೇಳಿದಳು.

ಗ್ಯಾರೀ ಪೆದ್ದನಲ್ಲ; ಆತನಲ್ಲಿ ಇಂಥ ಅಸಾಧಾರಣ ಜ್ಞಾನವಿದೆ ಎಂಬುದನ್ನ ಕಂಡುಕೊಂಡ ಆ ಶಿಕ್ಷಕಿಗೆ ಪ್ರಯತ್ನಪಟ್ಟರೆ ಗ್ಯಾರಿಗೆ ಕಲಿಯಲು ಸಾಧ್ಯವಿದೆ ಎಂದು ತಿಳಿಯಿತು; ಆದರೆ ಗ್ಯಾರಿ ಶುದ್ಧ ಸೋಮಾರಿ, ಹೀಗಾಗಿ ಆತ ಚೆನ್ನಾಗಿ ಓದುವುದಿಲ್ಲ ಎಂಬುದು ಆ ಶಿಕ್ಷಕಿಗೆ ಮನವರಿಕೆಯಾಯಿತು. ಆದರೆ ಆಕೆ ಹಾಗೆಂದು ಭಾವಿಸಿದುದು ತಪ್ಪಾಗಿತ್ತು; ಏಕೆಂದರೆ ಗ್ಯಾರೀ ಒಬ್ಬ ಸಮಚಿತ್ತದ ಮಗುವಾಗಿ ಕಂಡುಬಂದರೂ ಕೂಡ ಆತನಲ್ಲಿ ಏನೋ ಒಂದು ದೌರ್ಬಲ್ಯ ಅಡಗಿತ್ತು; ಅಂದು ಆತನಲ್ಲಿ ವ್ಯಾಸಂಗದ ಅಸಾಮರ್ಥ್ಯವಿತ್ತು. ಸಾಧಾರಣ ಬುದ್ಧಿಯವನಾದರೂ ಓದಲು, ಬರೆಯಲು ಅಥವಾ ಲೆಕ್ಕಮಾಡಲು ಬರುತ್ತಿರಲಿಲ್ಲ.

ಗ್ಯಾರಿಯ ತಾಯಿ ಸ್ಯಾಲೀ ಸ್ಮಿತ್‌ಳಿಗೆ ತನ್ನ ಮಗ ಪೆದ್ದನಲ್ಲ, ಜಾಣ ಎಂದು ಗೊತ್ತಿತ್ತು. ಆತ ತನ್ನ ತಾಯಿ ಹಾಗೂ ಇಬ್ಬರು ಅಣ್ಣಂದಿರ ಜೊತೆ

೧೯೮೨ರ ಜುಲೈ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಿಕದಲ್ಲಿ ಪ್ರಕಟವಾದ ಅಲ್ ಅಂಡ್ ಮಿರಿಯಂ ಸೆಲ್ಬಿ ಅವರ "ದಿ ಸ್ಕೂಲ್ ದಟ್ ಸ್ಯಾಲೀ ಬಿಲ್ಟ್" ಎಂಬ ಲೇಖನದ ಸರಳಾನುವಾದ.

ಯಲ್ಲಿ ಆಡಿದ ಆಟಗಳ ಬಗೆಗೆ ಮರೆತಿರಲಿಲ್ಲ. ಗ್ಯಾರಿಯು ಸಾಮಾನ್ಯವಾಗಿ ನಿಯತ ತರಗತಿ ಕೊಠಡಿಯಲ್ಲಿ ಓದಲಾರನೆಂದೂ ಆಕೆಗೆ ಗೊತ್ತಿತ್ತು. ಹೀಗಾಗಿ ಅವಳು ಅದಕ್ಕೆ ಬದಲಾಗಿ ಮಗನಿಗಾಗಿ ಬೇರೊಂದು ಶಾಲೆಯನ್ನು ಹುಡುಕ ತೊಡಗಿದಳು. ಆದರೆ ಆಕೆಗೆ ಕೇವಲ ಮಂದಬುದ್ಧಿಯ ಮತ್ತು ಪೆದ್ದು ಮಕ್ಕಳಿಗಾಗಿ ಮಾತ್ರ ಇರುವ ಶಾಲೆಗಳು ಕಂಡುಬಂದುವು. "ಇದನ್ನು ಖಂಡಿತವಾಗಿ ನಂಬಲಿಕ್ಕೆ ಆಗುವುದಿಲ್ಲ; ನನ್ನ ಮಗ ಮಂದಬುದ್ಧಿಯವನಲ್ಲ. ಅವನು ಪೆದ್ದನೂ ಅಲ್ಲ, ಪೊದ್ದು ಮಗುವೂ ಅಲ್ಲ, ಹುಚ್ಚು ಮನಸ್ಸಿನವನೂ ಅಲ್ಲ ಎಂಬುದನ್ನು ಪರೀಕ್ಷೆಗಳು ತೋರಿಸುತ್ತವೆ; ಇಲ್ಲ ನಾನು ಅವನನ್ನು ಹಾಗೆ ಆಗಲು ಬಿಡುವುದಿಲ್ಲ" ಎಂದು ಸ್ಯಾಲಿ ದೃಢವಾಗಿ ಹೇಳಿದಳು.

"ನನ್ನ ಮಗನಿಗೆ ಶಾಲೆ ಬೇಕು!"

೧೯೬೭ರ ವಸಂತಕಾಲದಲ್ಲಿ ಸ್ಯಾಲಿ ಬಾಸಗೀ ಶಾಲೆಯವರೊಡನೆ ತನ್ನ ಮಗ ಗ್ಯಾರಿ ಮತ್ತು ಅವನಂತೆಯೇ ಓದಲು ಅಸಮರ್ಥರಾದ ಮಕ್ಕಳಿಗಾಗಿ ಒಂದು ಕಾರ್ಯಕ್ರಮವನ್ನು ಆರಂಭಿಸಬೇಕೆಂದು ಮನವಿ ಮಾಡಿದಳು. "ಅದಕ್ಕೆ ಕನಿಷ್ಠಪಕ್ಷ ಒಂದು ವರ್ಷವಾದರೂ ಬೇಕಾಗುತ್ತದೆ" ಎಂದು ಬೋಧಕರು ತಿಳಿಸಿದರು.

'ಅವರೆ ನನಗೆ ಒಂದು ವರ್ಷದವರೆಗೆ ಕಾಯಬೇಕಾಗಿಲ್ಲಪ್ಪ: ನನ್ನ ಮಗನಿಗೆ ಈಗಲೇ ಒಂದು ಶಾಲೆ ಬೇಕಪ್ಪ!" ಎಂದು ತಕ್ಷಣ ಸ್ಯಾಲೀ ಅವರಿಗೆ ಹೇಳಿದಳು. ಬಳಿಕ ಆಕೆ ವಾಷಿಂಗ್‌ಟನ್ನಿನ ರೋಗನಿಧಾನಕ ಮತ್ತು ಬೋಧನೆಯ ಕಿಂಗ್ಸ್ ಬರೀ ಕೇಂದ್ರದ ನಿರ್ದೇಶಕರಾಗಿದ್ದ ಕೆನೆತ್ ಓಲ್ಡ್‌ಮನ್ ಅವರನ್ನು ಹೋಗಿ ಕಂಡಳು. ಆಕೆಯ ಮಗನಿಗೆ ಈಗ ಏನು ಮಾಡಬೇಕಾಗಿದೆ ಎಂಬುದು ಆತನಿಗೆ ತಕ್ಷಣ ತಿಳಿಯಿತು. ಆದರೂ ಆತನಿಗೆ ಕೈಕಟ್ಟಿದಂತಾಯಿತು, ಏಕೆಂದರೆ ಗ್ಯಾರಿಗಾಗಿ ಏನಾದರೂ ಮಾಡೋಣವೆಂದರೆ ಆತನಲ್ಲಿ ಸ್ಥಳವೂ ಇರಲಿಲ್ಲ ಮತ್ತು ಹಣವೂ ಇರಲಿಲ್ಲ.

ಹೀಗೆ ಕೆಲವು ತಿಂಗಳು ಕಳೆದ ಬಳಿಕ ಓಲ್ಡ್‌ಮನ್ ಸ್ಯಾಲೀಯೊಂದಿಗೆ ಪತ್ರ ವ್ಯವಹಾರದ ಮೂಲಕ ಕಿಂಗ್ಸ್‌ಬರೀ ಕೇಂದ್ರವು ಅದರ ಹತ್ತಿರದಲ್ಲಿಯೇ ಇರುವ ಒಂದು ಮನೆಯನ್ನು ಕೊಡಲು ಒಪ್ಪಿದೆಯೆಂದೂ ಅದರಲ್ಲಿ ಒಂದು ಚಿಕ್ಕ ಶಾಲೆಯನ್ನು ನಡೆಸಬಹುದೆಂದೂ ತಿಳಿಸಿದನು. ವ್ಯಾಸಂಗ ಮಾಡಲು ಅಸಮರ್ಥರಾದ ಮಕ್ಕಳಿಗೆ ತರಗತಿಗಳನ್ನು ತೆರೆಯುವ ಸಾಮರ್ಥ್ಯ ತನಗೆ ಇದೆಯೋ?

ಎಂದು ಆಕೆಗೆ ಗಾಬರಿಯಾಯಿತು ! ಸ್ಯಾಲಿಯು ಸ್ನಾತಕೋತ್ತರ ಪದವೀಧರೆ ಆಗಿದ್ದಳು ನಿಜ ; ಆದರೆ ಆಕೆ ವೃತ್ತಿಯಲ್ಲಿ ಉಪಾಧ್ಯಾಯಿನಿಯೇನೂ ಆಗಿರಲಿಲ್ಲ. “ಬಹುಶಃ ಇಂಥ ದಡ್ಡ ಮಕ್ಕಳನ್ನು ಹೆತ್ತವರು ನನ್ನನ್ನು ನಂಬಿ ನನಗೆ ವಹಿಸಿ ಬಿಡುತ್ತಾರೆಯೇನೋ ? ಈಗ ನಾನೇನು ಮಾಡಲಿ ?” ಎಂದು ಸ್ಯಾಲೀ ಕ್ಷಣ ಕಾಲ ಯೋಚಿಸಿದಳು. ಆದರೆ ತನ್ನ ಮಗನನ್ನು ನೋಡಿದಾಗ ತಾನೇಕೆ ಈ ವಿಷಯದಲ್ಲಿ ಪ್ರಯತ್ನಿಸಬಾರದು ?” ಎಂದೂ ಯೋಚಿಸಿದ ಸ್ಯಾಲಿಗೆ ಏನೇ ಆಗಲಿ ಪ್ರಯತ್ನಿಸಿ ನೋಡುವುದೇ ಒಳ್ಳೆಯದು ಎಂದು ಅನ್ನಿಸಿತು.

ಆ ಬಗ್ಗೆ ಸ್ಯಾಲಿ ಒಂದು ರಾತ್ರಿಯೆಲ್ಲ ಆಲೋಚನೆ ಮಾಡಿದಳು. ಬಳಿಕ ಆಕೆ ಶಾಲೆಯ ಪಠ್ಯಕ್ರಮಕ್ಕಿಂತ ಭಿನ್ನವಾದ ಬೇರೆಯೇ ಒಂದು ಬಗೆಯ ಪಠ್ಯ ಕ್ರಮವನ್ನು ಈ ಶಾಲೆಗಾಗಿ ಯೋಜಿಸಿದಳು. ಬಳಿಕ ಆಕೆ ಸ್ವಯಂಸೇವಕರನ್ನು ಒಟ್ಟುಗೂಡಿಸಿದಳು ಮತ್ತು ಕಿಂಗ್ಸ್‌ಬರೀ ಕೇಂದ್ರವು ಕೊಟ್ಟ ಆ ಮನೆಯನ್ನು ಸ್ವಚ್ಛಗೊಳಿಸಿದಳು ಮತ್ತು ಸುಣ್ಣ ಬಣ್ಣ ಮಾಡಿಸಿ ಒಪ್ಪಗೊಳಿಸಿದಳು. ಮಕ್ಕಳಿಗಾಗಿ ಪೀಠೋಪಕರಣಗಳನ್ನು ಉದಾರವಾಗಿ ನೀಡಬೇಕೆಂದು ಅನೇಕ ಜನರಲ್ಲಿ ಪ್ರಾರ್ಥಿಸಿದಳು. ಶಿಕ್ಷಕರಿಗೆ ವೇತನ ನೀಡಲು ಹಣಸಹಾಯ ಮಾಡುವಂತೆ ಮಿತ್ರರನ್ನು ಕೋರಿದಳು ಮತ್ತು ೧೯೬೭ರ ಸೆಪ್ಟೆಂಬರ್ ೨೫ರಂದು ಸ್ಯಾಲಿಯು ಕಿಂಗ್ಸ್‌ಬರೀ ಕೇಂದ್ರದ ನೂತನ ಪ್ರಯೋಗಾಲಯ ಶಾಲೆಯನ್ನು ಪ್ರಾರಂಭಿಸಿದಳು.

ಮಕ್ಕಳಲ್ಲಿ ವ್ಯಾಸಂಗದ ಅಸಾಮರ್ಥ್ಯಗಳು ನಾನಾ ಬಗೆಯ ವಿಭಿನ್ನ ಸ್ಥಿತಿಗಳಿಂದ ಉಂಟಾಗುತ್ತವೆ. ಮಿದುಳಿನ ಕ್ರಿಯಾವೈಕಲ್ಯ ಮತ್ತು ವ್ಯಾಸಂಗ ಅಕ್ಷಮತೆಗಳಿರುತ್ತವೆ. ಅದರಲ್ಲಿ ಕೆಲವು ನಿರ್ದಿಷ್ಟ ನರಮಾರ್ಗಗಳು ನಿಯತ ವೇಳಾಪಟ್ಟಿಗೆ ಅನುಸಾರವಾಗಿ ಬೆಳೆಯುವುದಿಲ್ಲ. ಹೀಗಾಗಿ ಇಂದ್ರಿಯಗಳಿಂದ ಮಾಹಿತಿಗಳನ್ನು ಉಪಯೋಗಿಸಿಕೊಳ್ಳುವ ಕ್ರಿಯೆಗೆ ಅಡ್ಡಿಯನ್ನುಂಟು ಮಾಡುತ್ತವೆ.

ಓದುವ ಸಾಮರ್ಥ್ಯವಿಲ್ಲದ ಅಸಮರ್ಥ ಮಕ್ಕಳು ಶಿಕ್ಷಣದ ಅತ್ಯಂತ ಕಠಿಣವಾದ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅವುಗಳಲ್ಲಿ ಪ್ರತಿಯೊಂದು ಸವಾಲೂ ಕೂಡ ವಿಶಿಷ್ಟ ರೀತಿಯದ್ದಾಗಿದ್ದು ಇಂಥ ಒಂದೊಂದು ಮಗುವೂ ಅನೇಕ ಬಗೆಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಅದರ ಲಕ್ಷಣಗಳು ಹೆಚ್ಚಾಗಿ ಚಿತ್ತಭ್ರಮಣೆ, ಗಲಿಬಿಲಿ, ಗೊಂದಲ, ಕಾಲದ ಪರಿವೆ ಇಲ್ಲದಿರುವುದು. ನೆನಪಿನಶಕ್ತಿ ಏರುಪೇರಾಗುವಿಕೆ, ಮಿದುಳಿಗೆ ತಪ್ಪು ಸಂದೇಶಗಳನ್ನು ಕಳುಹಿಸು

ವುದು ಮತ್ತು ಮೊದಲಿನಿಂದ ಕೊನೆಯವರೆಗೆ ಒಂದು ಪ್ರಾಯೋಜನೆಯನ್ನು ಯೋಚಿಸುವಲ್ಲಿನ ಅಸಾಮರ್ಥ್ಯ. ಇದರ ಜೊತೆಗೆ ಅನೇಕ ಮಕ್ಕಳು ಎಳವೆಯಲ್ಲಿಯೇ ಇರುತ್ತವೆ. ಅವು ಬೆಳೆಯಲಾರವು; ಅಸಹಕಾರ ತೋರುತ್ತವೆ ಮತ್ತು ಆಕಸ್ಮಿಕವಾಗಿ ನರಕೇಂದ್ರಕ್ಕೆ ಸಂಬಂಧಿಸಿದ ವ್ಯಾಧಿಗೆ ಬಲಿಯಾಗುತ್ತಾರೆ.

ಇದು ವಿರಳವಾಗಿಯಾದರೂ ನಿಜವಾಗಿ ಮೆದುಳಿಗೆ ಪೆಟ್ಟಾಗಿದೆ ಎಂದು ದಾಖಲಿಸುತ್ತವೆ ಮತ್ತು ಕಲಿಯಲು ಅಸಮರ್ಥರಾದ ಮಕ್ಕಳು ಆಗಾಗ ಸರಾಸರಿ ಅಥವಾ ಅದಕ್ಕಿಂತ ಹೆಚ್ಚಿನ ಬುದ್ಧಿವಂತಿಕೆಯನ್ನು ಪಡೆಯುವುದುಂಟು. ಆದರೆ ಅನೇಕ ಶಾಲೆಗಳಲ್ಲಿ ಅವು ಸೋಲಿಗೂ ಒಗ್ಗಿಕೊಳ್ಳುತ್ತವೆ. ಅದು ಅವರು ಯೋಜನೆ ಮಾಡುವುದನ್ನೇ ಬಿಟ್ಟುಕೊಡುತ್ತವೆ. ತಮ್ಮಷ್ಟಕ್ಕೆ ಚಿಂತಿಸುವುದು ಪೆದ್ದರ ಲಕ್ಷಣ. ಹಾಗೆ ಮಾಡಿದರೆ ಅವರು ಪೆದರಾಗುತ್ತಾರೆ ಮತ್ತು ಅವರು ಸರಿಯಾಗಬಹುದೆಂಬ ನಂಬಿಕೆ ಮೂಲದಲ್ಲಿಯೇ ಮುರುಟಿ ಹೋಗುತ್ತದೆ.

ಸಾಮಾನ್ಯಮಟ್ಟದ ಬುದ್ಧಿಶಕ್ತಿಯುಳ್ಳ ಮತ್ತು ಓದುವ ಸಾಮರ್ಥ್ಯವೇ ಇಲ್ಲದ ಯಾವುದೇ ಬಾಲಕನಿಗೆ ಹೇಗೆ ಕಲಿಯಬಹುದೆಂಬುದನ್ನು ಹೇಳಿಕೊಡಬಹುದು ಎಂಬುದನ್ನು ಸಿದ್ಧಪಡಿಸಬೇಕೆಂದು ಸ್ಯಾಲೀ ಸ್ಮಿತ್ ನಿರ್ಧಾರ ಮಾಡಿದಳು. ಆಕೆ ಶಾಲೆ ಸ್ಥಾಪಿಸುವುದರ ಉದ್ದೇಶವೆಂದರೆ ವಿದ್ಯಾರ್ಥಿಗಳಲ್ಲಿ "ನಾನು ಅದನ್ನು ಕಲಿಯಬಲ್ಲೆ" ಎಂದು ಹೇಳಬಲ್ಲ ಆನಂದವನ್ನೇ ಕಾಣದಂಥ ಹೆಚ್ಚಿನವರಿಗೆ ತಾನು ಕಲಿಯಬಲ್ಲೆನೆಂಬ ಆತ್ಮವಿಶ್ವಾಸವನ್ನು ತುಂಬುವುದು; ಆತನಿಗೆ ಕಲಿಸುವುದು.

ಹೊಸ ಬಗೆಯ ವಿಧಾನಗಳು: ತನ್ನ ಉದ್ದೇಶವನ್ನು ಸಾಧಿಸಲಿಕ್ಕಾಗಿ ಸ್ಯಾಲಿಯು ಶೈಕ್ಷಣಿಕ ವ್ಯಾಸಂಗಕ್ಕೆ ಅವಶ್ಯಕವಾದ ಮೂಲಜಾಣ್ಮೆಯನ್ನು ಕಲಿಸಬೇಕಾದರೆ ಕಲೆಗಳು—ಸಂಗೀತ, ನರ್ತನ, ಮರದ ಕೆಲಸ, ನಾಟಕ, ಫಿಲಂ ತಯಾರಿಸುವಿಕೆಗಳು ಕೇಂದ್ರ ವಿಷಯಗಳಾಗಿರಬೇಕೆಂಬ ತನ್ನ ಅಭಿಪ್ರಾಯಕ್ಕೆ ಬೆಂಬಲ ನೀಡಬಲ್ಲ ಶಿಕ್ಷಕರನ್ನು ಆಯ್ದುಕೊಂಡು ನೇಮಿಸಿದಳು. ಉದಾಹರಣೆಗೆ ಕರಕುಶಲ ಕೃತಿಗಳ ರಚನೆ ಸುಲಭವ ಕೆಲಸವೇನೂ ಆಗಿರಲಿಲ್ಲ. ಆದರೆ ಮಕ್ಕಳಲ್ಲಿ ಕಣ್ಣು-ಕೈಗಳ ಸಂಘಟನೆ, ಅಂಗಾಂಗಗಳ ಚಲನೆ, ಅನುವರ್ತನೆ—ಇವುಗಳೆಲ್ಲ ವ್ಯಾಸಂಗದಲ್ಲಿರಬೇಕಾದ ಜಾಣ್ಮೆಗಳಾಗಿದ್ದುವು. ಏಕೆಂದರೆ ಚಿಕ್ಕಮಕ್ಕಳು ಮಾತು ಕಲಿಯುವ ಮೊದಲೇ ಹಾಡಲು ಕಲಿಯುತ್ತವೆ; ಅಕ್ಷರಗಳನ್ನು ಬರೆಯಲು ಕಲಿಯುವ ಮೊದಲೇ ಚಿತ್ರ ಬರೆಯುತ್ತವೆ. ಓಡುವ ಮೊದಲೇ

ಕುಣಿಯುತ್ತವೆ; ಅಭಿನಯದ ಮೂಲಕ ಕಥೆಗಳನ್ನು ಹೇಳುತ್ತವೆ. ಹೀಗಾಗಿ ಸ್ಯಾಲಿಯು ಹೊಸದಾಗಿ ತನ್ನ ಶಾಲೆಗೆ ಹೆಸರನ್ನು ನೋಂದಾಯಿಸಿದ್ದ ಮಕ್ಕಳು ದಿನದ ಅರ್ಧಭಾಗವನ್ನು ಕಲಾಕಾರ್ಯಕ್ರಮಗಳಲ್ಲಿಯೂ ಉಳಿದ ಅರ್ಧ ವೇಳೆಯಲ್ಲಿ ಎಚ್ಚರಿಕೆಯಿಂದ ರಚನಾತ್ಮಕ ಶೈಕ್ಷಣಿಕ ಅಭ್ಯಾಸವನ್ನು ಮಾಡಬೇಕಾಗಿತ್ತು.

ಸ್ಯಾಲೀ ಸ್ಮಿತ್‌ಳ ಪಠ್ಯಕ್ರಮದ ಹೊಸ ನಮೂನೆಯಿಂದಾಗಿ ಆಕೆಯ ಎಷ್ಟೋ ವಿದ್ಯಾರ್ಥಿಗಳ ಅಡ್ಡಿ ಅಡಚಣೆಗಳು ದೂರವಾದುವು. ಉದಾಹರಣೆಗೆ ಬಾರ್ಟ್ ಎಂಬ ೯ ವರ್ಷದ ಬಾಲಕನಿಗೆ ಓದುವ ಸಾಮರ್ಥ್ಯವೇ ಇರಲಿಲ್ಲ. ಏಕೆಂದರೆ ಪುಸ್ತಕದಲ್ಲಿರುವ ಅಕ್ಷರಗಳನ್ನು ಆತನಿಗೆ ಉಚ್ಚಾರಮಾಡಲು ಆಗುತ್ತಿರಲಿಲ್ಲ. ಆಗ ಒಬ್ಬ ಸಂಗೀತ ಶಿಕ್ಷಕನು ಆತನ ಚಿತ್ರವಿಲೋಭನವನ್ನು ಹೋಗಲಾಡಿಸಲು ಒಂದು ಮೃದಂಗವನ್ನು ಉಪಯೋಗಿಸಿದ. ತಾನು ಒಂದು ಕೆಂಪು ಬಣ್ಣದ ಮರದ ತುಂಡನ್ನು ಹಿಡಿದಾಗ ಆ ಮೃದಂಗವನ್ನು ಬಾರಿಸಬೇಕೆಂದೂ ಮತ್ತು ಹಳದಿ ಬಣ್ಣದ ಮರದ ತುಂಡನ್ನು ತೋರಿಸಿದಾಗ ಅದನ್ನು ಕೇವಲ ಕುಟ್ಟಬೇಕೆಂದು ಕಲಿಸಿದಳು. ಆತನು ಅದನ್ನು ರೂಢಿಸಿಕೊಂಡ ಬಳಿಕ ಆಕೆ ಒಂದು ಸಾಲಿನಲ್ಲಿ ಕೆಂಪು ಮತ್ತು ಹಳದಿ ಬಣ್ಣದ ಮರದ ತುಂಡುಗಳನ್ನು ಸಾಲಾಗಿ ಜೋಡಿಸಿದಳು ಮತ್ತು ಅಲ್ಲಿ ಆತನಿಗೆ ಆಡಲು ಬಿಟ್ಟಳು. ಮತ್ತೆ ಮತ್ತೆ ಅದನ್ನು ಬಾರಿಸಲು ಅಭ್ಯಾಸ ಮಾಡಿಸಿದಳು. ಮರದ ತುಂಡುಗಳ ಬಣ್ಣಗಳನ್ನು ಬದಲಾಯಿಸಿ ಮತ್ತೆ ಮತ್ತೆ ಅಭ್ಯಾಸ ಮಾಡಿಸಿದಳು. ಕ್ರಮೇಣ ಬಾರ್ಟನಿಗೆ ಆ ಮರದ ತುಂಡುಗಳು ಶಬ್ದಗಳನ್ನು ಉಚ್ಚರಿಸುವಂತಿವೆ ಎಂದು ಅನ್ನಿಸಿತು. ಈ ಅತ್ಯಲ್ಪ ಜ್ಞಾನದೊಂದಿಗೆ ಬಾರ್ಟನಿಗೆ ವ್ಯಾಸಂಗಕ್ಷೇತ್ರದ ದ್ವಾರವನ್ನೇ ತೆರೆದಂತಾಯಿತು. ಇಂದು ಅದೇ ಬಾಲಕ ಬಾರ್ಟ್ ಕಾಲೇಜಿನಲ್ಲಿ ವ್ಯಾಸಂಗ ನಿರತನಾಗಿದ್ದಾನೆ.

೮ ವರ್ಷದ ಬಾಲಕಿ ಜೆನೆತ್ ತನ್ನ ಪುಸ್ತಕದ ಹಾಳೆಗಳಲ್ಲೆಲ್ಲ ಲೆಕ್ಕಗಳನ್ನು ಗೀಚುತ್ತಿದ್ದಳು. ಆಕೆಗೆ ಲೆಕ್ಕ ಮಾಡುವುದು ಒಂದು ಸಮಸ್ಯೆಯಾಗಿತ್ತು. ಒಂದು ವಿಶೇಷ ನಾಟ್ಯ ಕಾರ್ಯಕ್ರಮವನ್ನು ಕಂಡಾಗ ಆಕೆಗೆ ತನ್ನ ದೈಹಿಕ ಚಲನೆಗಳನ್ನು ಹೇಗೆ ವ್ಯವಸ್ಥೆಗೊಳಿಸಬೇಕೆಂದು ತಿಳಿಯಿತು. ಈ 'ಗತಿ-ಯೋಜನೆ' ಆಕೆಯ ಮನಸ್ಸಿನಲ್ಲಿ ಒಂದು ವಿಧಾನವನ್ನು ರೂಪಿಸಿತು. ಬಳಿಕ ಆಕೆ ಅದನ್ನು ಅಂತಿಮವಾಗಿ ಕಾಗದದ ಮೇಲೆ ವ್ಯವಸ್ಥಿತವಾಗಿ ಭಾಷಾಂತರಿಸಿದಳು. ಅಂದಿನಿಂದ ಆಕೆಗೆ ಲೆಕ್ಕ ಒಂದೇ ಸಮಸ್ಯೆಯಾಗಲಿಲ್ಲ.

ರೇಮಂಡ್ ಎಂಬ ಬಾಲಕನಿಗೆ ಹನ್ನೆರಡನೇ ವಯಸ್ಸಿನಲ್ಲಿ ವೀಕ್ಷಣ–ಏಕಾಗ್ರತೆ ಎಂಬುದೇ ಇರಲಿಲ್ಲ. ಆತನಿಗೆ 'ಪಿನ್, ಪೆನ್, ಪ್ಯಾನ್'ಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಲು ಆಗುತ್ತಿರಲಿಲ್ಲ. ಸ್ಫೂರ್ತಿದಾಯಕ ಫಿಲಂಗಳನ್ನು ಮಾಡುವುದನ್ನು ಅವನಿಗೆ ಕಲಿಸಿದುದರಿಂದ ಅದು ಆತನಿಗೆ ಚಿಕ್ಕಪುಟ್ಟ ವಿಷಯಗಳ ಕಡೆಗೂ ಮನಸ್ಸನ್ನು ಕೇಂದ್ರೀಕರಿಸುವ ಅಭ್ಯಾಸವನ್ನು ಬೆಳೆಸಿತು. ಕಥಾ ಸಾಲು ಸಾಲು ಫಿಲಂಗಳ ತಯಾರಿಕೆಯಿಂದ ಆತನಿಗೆ ದೃಶ್ಯಗಳನ್ನು ಅನುಕ್ರಮವಾಗಿ ಜೋಡಿಸಲು ಕಲಿಸಿತು. ಈ ಬಗೆಯ ಕೌಶಲಗಳು ಆತನಿಗೆ ಶೈಕ್ಷಣಿಕ ವ್ಯಾಸಂಗದಲ್ಲಿ ಪ್ರಗತಿ ಸಾಧಿಸಲು ನೆರವಾದುವು.

ಹೆನ್ರಿ ಎಂಬ ಬಾಲಕನಿಗೆ ಹತ್ತನೆಯ ವರ್ಷದಲ್ಲಿ ನಿರ್ದೇಶನಗಳನ್ನು ಅನುಸರಿಸಲು ಗೊತ್ತಿರಲಿಲ್ಲ. ಆತನಿಗೆ ಸರಿಯಾಗಿ ಕಿವಿ ಕೇಳಿಸದಿರುವುದೇ ಇದಕ್ಕೆ ಕಾರಣವೆಂದು ಅರಿತುಕೊಂಡ ಆತನ ನಾಟಕ ಶಿಕ್ಷಕಿ ಆತನನ್ನು ಸ್ಪೇಸ್ ಕ್ಯಾಪ್ಸ್ಯೂಲಿನ ಕಾರ್ಯ ನಿರ್ವಾಹಕನನ್ನಾಗಿ ನೇಮಿಸಿದಳು. ಆತ ಆಗ ಒಂದು ಹೆಲ್ಮೆಟ್ ಧರಿಸಬೇಕಾಗಿತ್ತು. ಮತ್ತು ಹುಡುಗರ ಸಾಲಿನಲ್ಲಿ ಮೊದಲನೆಯವನಾಗಿ ಕುಳಿತುಕೊಳ್ಳಬೇಕಾಗಿತ್ತು. ಶಿಕ್ಷಕಿ–'ಮಿಶನ್–ನಿಯಂತ್ರಕಿ'ಯಾಗಿದ್ದರು. ಮತ್ತು ಅವನು ಆಕೆಯ ಆಜ್ಞೆಗಳನ್ನು ಪಾಲಿಸದಿದ್ದರೆ ಮಿಶನ್ 'ಸ್ವಯಂ–ನಾಶಕವಾಗಿ ಪರಿಣಮಿಸುತ್ತಿತ್ತು. ಹೀಗಾಗಿ ಹೆನ್ರಿಯು ತನ್ನ ಶಿಕ್ಷಕಿಯ ಆಜ್ಞೆಯನ್ನು ಏಕಾಗ್ರಚಿತ್ತದಿಂದ ಆಲಿಸಿದನು ಮತ್ತು ಆಕೆಯ ಆದೇಶಗಳನ್ನು ಪಾಲಿಸಿದನು ಇದೇ ರೀತಿಯಲ್ಲಿ ಅಭ್ಯಾಸ ಮಾಡುತ್ತ ಮಾಡುತ್ತ ಆತನ ಶ್ರವಣ–ಸಾಮರ್ಥ್ಯ ಕುದುರಿತು; ಬಳಿಕ ಆಕೆಯು ಬಾಯಿಯಿಂದ ನೀಡಿದ ಸೂಚನೆಗಳನ್ನು ಅನುಸರಿಸುವ ಆತನ ಸಾಮರ್ಥ್ಯ ಶಕ್ತಿ ಹೆಚ್ಚಿತು.

ಶಾಲೆಯಲ್ಲಿ ತೇರ್ಗಡೆಯಾಗದಂಥ ಮಕ್ಕಳು ಆಟದಲ್ಲಿ ಹೆಚ್ಚಿನ ಬುದ್ಧಿಯನ್ನು ತೋರುತ್ತವೆ ಎಂಬುದನ್ನು ಸ್ಯಾಲೀ ಕಂಡುಕೊಂಡಳು. ಹೀಗಾಗಿ ಆಕೆ "ಶೈಕ್ಷಣಿಕ–ಕ್ಲಬ್"ಗಳನ್ನು ಆರಂಭಿಸಿದಳು. ಮಕ್ಕಳಿಗೆ ಏನು ಮಾಡಲು ಇಷ್ಟ ಎಂಬುದನ್ನು ತಿಳಿಯುವುದು ಮತ್ತು ಅವರಿಗೆ ಏನೇನು ತಿಳಿಯಬೇಕೆಂಬ ಅಪೇಕ್ಷೆ ಇದೆಯೋ ಅದನ್ನು ಕಲಿಸಲು ಈ ಕ್ಲಬ್‌ನ್ನು ಒಂದು ಆಧಾರವನ್ನಾಗಿ ಬಳಸಬೇಕೆಂದು ಸ್ಯಾಲೀ ಯೋಚಿಸಿದಳು. "ತಾವು ಪರಿತ್ಯಕ್ತರೆಂದು ಭಾವಿಸಬಹುದಾದ ಕಲಿಯಲು ಅಸಮರ್ಥರಾದ ಮಕ್ಕಳಿಗೆ ಒಂದು ಸ್ವಾಗತಾರ್ಹ ನೆಲೆಯನ್ನು ದೊರಕಿಸಿಕೊಡಬೇಕೆಂಬ ಅರ್ಥದಲ್ಲಿ ಸ್ಯಾಲೀ "ಕ್ಲಬ್" ಎಂಬ ಪದವನ್ನು ಆಯ್ದುಕೊಂಡಳು.

ಕೇವ್ ಮನ್ಸ್‌ಕ್ಲಬ್: ಒಂದು ದಿನ ೬ ವರ್ಷದ ರೋನಾಲ್ಡ್ ಎಂಬ ಬಾಲಕ ಶಾಲೆಯ ಅಸ್ತಿಭಾರದ ಆತನ 'ಕೇವ್ ಮನ್ಸ್‌ಕ್ಲಬ್'ನ ಹೊರ ಭಾಗದಲ್ಲಿ ನಿಂತಿರುವ ಒಬ್ಬ "ಕೇವ್-ಲೇಡಿ"ಯನ್ನು ಕಂಡು 'ಫಾಸಿಲ್' ಎಂದು ಉದ್ರೇಕಗೊಂಡು ಉಸುರಿಸಿದನು. "ಆಗ ಆತನ ಶಿಕ್ಷಕಿಯು ಪೂರ್ತಿ ಹೇಳು ಮರಿ, ಸರಿಯಾಗಿ ಹೇಳಿದ್ದೀಯ" ಎಂದಳು. ರೋನಾಲ್ಡನು ತನ್ನ ಉಡುಗೆಯ ಮೇಲೆ ಒಂದು ಚಿರತೆ ಮಾದರಿಯ ಅಂಗಿಯನ್ನು ಧರಿಸಿದ್ದನು. ಆತನು ಇತರ ಎಂಟು ಮಂದಿ ಬಾಲಕರ ಜೊತೆಯಲ್ಲಿ ಬೆಂಕಿಯ ಸುತ್ತಲೂ ಕುಳಿತಿದ್ದರು. ಆಗ ಕೆಂಪು ಟಿಶ್ಯೂ ಕಾಗದದ ಮೂಲಕ ಟಾರ್ಚ್‌ಬೆಳಕು ಮಿಂಚುತಿತ್ತು. ಅಲ್ಲಿ ತರಗತಿ ನಡೆಸುತ್ತಿದ್ದಾಗ ಆ ಬಾಲಕರೆಲ್ಲ ಗುಹಾ ನಿವಾಸಿಗಳ ಹಾಗೆ ನಟನೆ ಮಾಡಿದರು. ಶಿಲ್ಪ-ತಥ್ಯಗಳನ್ನು ಮಾಡಿದರು; ಆಹಾರಕ್ಕಾಗಿ "ಬೇಟೆಯಾಡಿ"ದರು ಮತ್ತು ವನ್ಯಪ್ರಾಣಿಗಳಿಂದ ತಮ್ಮನ್ನು "ರಕ್ಷಿಸಿಕೊಂಡ" ಹಾಗೆ ನಟಿಸಿದರು. ಅದು ಆಟದ ಹಾಗೆ ಕಂಡು ಬಂದಾಗ ಅವರಿಗೆ ಕ್ಲಬ್-ತಂತ್ರವು ಪ್ರಾಗೈತಿಹಾಸಿಕ ಮಾನವನ ಇತಿಹಾಸ, ಕಲೆ ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಪಾಠವನ್ನು ಕಲಿಸಿತು.

ಈ ಕ್ಲಬ್-ಆಟದಲ್ಲಿ ಮುಂದುವರಿದಂತೆ ಅವರು ವಯಸ್ಸಿನಲ್ಲಿಯೂ ಬೆಳೆದರು. ಆಗ ಸ್ಮಾಲೀಯ ವಿದ್ಯಾರ್ಥಿಗಳು ಈಜಿಪ್ಷಿಯನ್‌ರವರಾದರು. ಗ್ರೀಕ್ ಮತ್ತು ರೋಮನ್ ದೇವತೆಗಳಾದರು ಮತ್ತು ಮಧ್ಯಯುಗದ ಹಾಗೂ ಪುನರುಜ್ಜೀವನ ಕಾಲದ ಪಾತ್ರಗಳಾದರು. ಅವರು ತಮಗೆ ವಹಿಸಿದ್ದ ಪಾತ್ರಗಳನ್ನು ಅಭಿನಯಿಸುತ್ತಿದ್ದ ಹಾಗೆಯೇ ಇತಿಹಾಸವನ್ನು ಕಲಿತರು ಮತ್ತು ಸಂಶೋಧನೆಯನ್ನು ಮಾಡಿದರು, ಜನರ ಬಗೆಗೆ, ಅವರ ಸಂಪ್ರದಾಯಗಳ ಬಗ್ಗೆ ರೀತಿ ರಿವಾಜುಗಳ ಬಗ್ಗೆ ಮತ್ತು ವಿವಿಧಯುಗಗಳ ಮುಖ್ಯ ಘಟ್ಟಗಳ ಬಗೆಗೆ ಆಳವಾಗಿ ಸಂಶೋಧನೆ ಮಾಡಿದರು.

ಮೇಧಾವಿ ಗ್ರಂಥಪಾಲರಾಗಿದ್ದ ಅಂಟಾಯ್ನೆಟ್ಟೀ ಮೇಯರ್ ಎಂಬವರು ಒಂದು ಪ್ರಯೋಗಾಲಯ ಶಾಲಾ ಮಾಧ್ಯಮ ಕೇಂದ್ರವೊಂದನ್ನು ಸ್ಥಾಪಿಸಿದರು. ಅಲ್ಲಿ ವಿದ್ಯಾರ್ಥಿಗಳು ಅಂಧರ ನುಡಿ-ಪುಸ್ತಕಗಳಿಂದ ಟೇಪುಗಳನ್ನು ಮತ್ತು ರೆಕಾರ್ಡುಗಳನ್ನು ಮತ್ತು ಶಿಕ್ಷಕರ ರೆಕಾರ್ಡಿಂಗ್‌ಗಳನ್ನೂ ಕೇಳುವ ಸೌಲಭ್ಯವನ್ನು ಒದಗಿಸಲಾಯಿತು. ಆಗ ಈ ವರೆಗೆ ಲಲಿತ ಸಾಹಿತ್ಯವನ್ನೇ ಕೇಳಿ ಅರಿಯದ, ಓದಿ ತಿಳಿಯಲು ಸಾಮರ್ಥ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಹೊಸ ದಿಗಂತಗಳೆಡೆಗೆ ಪಯಣಿಸುವುದರ ಜೊತೆಗೆ ಭಾಷೆಯನ್ನು ಸರಿಯಾಗಿ ಬಳಸಲು

ಕಲಿಸುವುದೂ ಆವಶ್ಯಕವಾಗಿದೆ ಎಂದು ಸ್ಯಾಲೀ ಭಾವಿಸಿದಳು.

ಈ ಮಾಧ್ಯಮ ಕೇಂದ್ರವು ಸ್ಯಾಲಿಯ ಮಗ ಗ್ಯಾರಿಯಲ್ಲಿ ಪುಸ್ತಕ ಪ್ರೇಮವನ್ನು ಬೆಳೆಸಿತು, ಪೋಷಿಸಿತು. ಆವನು ಏಳು ವರ್ಷಗಳವರೆಗೆ ಕಠಿಣವಾದ ಪರಿಹಾರಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ, ಆತನು ಓದಲು ಕಲಿತನು. ತದನಂತರ ಅತ್ಯಲ್ಪ ಕಾಲದಲ್ಲಿಯೇ ಆತನು ತನ್ನ ಮೊದಲನೆಯ ಪುಸ್ತಕವನ್ನು ಕೊಳ್ಳಲು ಹೋದನು. ಅನಂತರ ವ್ಯಾಸಂಗವನ್ನು ಮುಂದುವರಿಸಿ ಗ್ಯಾರಿಯು ಹೈಸ್ಕೂಲು ವ್ಯಾಸಂಗವನ್ನು ಪೂರ್ತಿಗೊಳಿಸಿ ಅರ್ಹತಾ ಪತ್ರವನ್ನು ಪಡೆದನು.

ಇಂದು ಸ್ಯಾಲಿಯ ಶಾಲೆಯಲ್ಲಿ ಒಂಬತ್ತು ಮಂದಿ ಪೂರ್ಣಾವಧಿಯ ಶಿಕ್ಷಕರಿದ್ದಾರೆ, ಜೊತೆಗೆ ಅನೇಕ ಮಂದಿ ಕಲಾವಿದರು ಒಪ್ಪೊತ್ತಿನ ಕೆಲಸದ ಮೇಲೆ ನೇಮಕಗೊಂಡಿದ್ದಾರೆ ಈ ಶಾಲೆಯಲ್ಲಿ ೬ ರಿಂದ ೧೬ರ ವಯೋಮಿತಿಯೊಳಗಿನ ೮೦ ಮಂದಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ, ಇನ್ನೂ ಪ್ರವೇಶ ಪಡೆಯಲೆಂದು ಕಾದಿರುವವರ ಪಟ್ಟಿ ಸಾಕಷ್ಟು ಉದ್ದವಾಗಿಯೇ ಇದೆ. ಒಂದಕ್ಕೊಂದು ಸೇರಿದಂತಿರುವ ಮೂರು ಮನೆಗಳಲ್ಲಿ ಈಗ ಈ ಶಾಲೆ ನಡೆಯುತ್ತಿದೆ.

ಪ್ರಯೋಗಾಲಯ ಶಾಲೆಯಲ್ಲಿ ಬೋಧಿಸುವುದೆಂದರೆ ಒಂದು ಆಗ್ರಹಕಾರೀ ಕೆಲಸವೂ ಹೌದು ಮತ್ತು ಆಗಾಗ್ಗೆ ಸುಸ್ತುಗೊಳಿಸುವ ಕಾರ್ಯವೂ ಹೌದು. ಒಂಭತ್ತು ಮಂದಿ ಬಾಲಕರನ್ನೊಳಗೊಂಡ ಒಂದು ತರಗತಿಯಲ್ಲಿ, ಒಂಬತ್ತು ವಿಭಿನ್ನ ಪರಿಹಾರ ಕಾರ್ಯಕ್ರಮಗಳು—ಪ್ರತಿಯೊಂದು ಕಾರ್ಯಕ್ರಮವೂ ಒಬ್ಬೊಬ್ಬ ವಿದ್ಯಾರ್ಥಿಯ ಅಗತ್ಯಗಳಿಗೆ ಅನುಗುಣವಾಗಿ ರೂಪಿತವಾಗಿವೆ. ಹಾಗೆ ಅವರು ಅದನ್ನು ಉಪಯೋಗಿಸಬಹುದು. ಆದಾಗ್ಯೂ ಬೋಧನಾ ಕಾರ್ಯದ ಮೇಲೆ ಇಷ್ಟವುಳ್ಳವರನ್ನು ಹಲವಾರು ಸವಾಲುಗಳು ಎದುರಿಸುತ್ತವೆ. ಕರೀನ್ ಡಂಕನ್ ಅವರು ಸರ್ಕಾರೀ ಮತ್ತು ಖಾಸಗೀ ಶಾಲೆಗಳಲ್ಲಿ ಸಮಸ್ಯಾ ವ್ಯಾಸಂಗಮಾಡುವವರಿಗೆ ಬೋಧಿಸಿದ್ದಾರೆ. ಆಕೆ ಸ್ಯಾಲಿಯ ಶಾಲೆಯ ಬಗ್ಗೆ ಎಷ್ಟೊಂದು ಪ್ರಭಾವಿತರಾದರೆಂದರೆ ೧೯೭೮ರಲ್ಲಿ ಆಕೆ ತನ್ನ ವೇತನ ಕಡಿಮೆಯಾಗುವುದೆಂದು ತಿಳಿದರೂ ಕೂಡ ಸ್ಯಾಲಿಯ ಶಾಲೆಯನ್ನು ಸೇರಿದರು ಮತ್ತು ಆ ಶಾಲೆಯ ಮುಖ್ಯೋಪಾಧ್ಯಾಯಿನಿಯಾದರು.

ಸ್ಯಾಲಿಯು, ಮಕ್ಕಳ ಬಗ್ಗೆ ಹತಾಶರಾಗಿರುವ ನೂರಾರು ತಾಯಿತಂದೆಗಳಿಗೆ ಪ್ರೋತ್ಸಾಹ, ಧೈರ್ಯಗಳನ್ನೀಯುತ್ತಾಳೆ ಮತ್ತು ಬೆಂಬಲವನ್ನು ಕೊಡುತ್ತಾಳೆ. ಅವರಲ್ಲಿ ಎಷ್ಟೋ ಮಂದಿ ತಂದೆತಾಯಿಗಳು ತಮ್ಮ ಮಕ್ಕಳು ಮುಂದೆ ಸುಧಾರಿಸಲಾರರು ಎಂಬ ಯಥಾರ್ಥ ಸಾಕ್ಷ್ಯಾಧಾರಗಳಿಂದ ಕಂಗಾಲಾಗಿರು

ತ್ತಾರೆ. ಮಕ್ಕಳು ಎರಡನೆಯ ವರ್ಷದ ಉತ್ತರಾರ್ಧದವರೆಗೂ ಹೇಳಿಸಿಕೊಳ್ಳು ವಂಥ ಫಲವನ್ನು ಪಡೆಯಲಾರರು ಎಂದು ಆಕೆ ಹೇಳುತ್ತಾಳೆ. ಅಷ್ಟಾದರೂ ಅವಳು ತೀವ್ರಪ್ರಯತ್ನದಿಂದ ಮುಂದವರಿಯುವ ಮುನ್ನ ಅನೇಕ ತಿಂಗಳ ಕಾಲ ಕಾಯುತ್ತಿರುತ್ತಾರೆ. ಕಲೆಗಳಲ್ಲಿ ರೂಪಿಸಲಾಗಿರುವ ಚಟುವಟಿಕೆ ಸಾಮರ್ಥ್ಯ ಶಕ್ತಿಗಳ ಶೈಕ್ಷಣಿಕ ತರಗತಿಗಳಲ್ಲಿ ಮಕ್ಕಳಿಗೆ ವ್ಯಾಸಂಗಮಾಡಲು ಸಾಧನೆಗಳಾಗಿವೆ ಎಂಬ ಬಗ್ಗೆ ಹೆತ್ತವರು ದನಿಗೂಡಿಸುತ್ತಾರೆ.

ಸ್ಯಾಲಿ ಸ್ಮಿತ್ ಕೇವಲ ಕಲಾಕಾರ್ಯಕ್ರಮಗಳನ್ನೇ ಅಳವಡಿಸಿರುವುದನ್ನು ಕಂಡ ಒಬ್ಬ ತಂದೆ "ಸಾಕು ; ಹುಡುಗಾಟವನ್ನು ನಿಲ್ಲಿಸಿಬಿಡಿ ಮತ್ತು ಪಾಠ ಕಲಿಸಿ ನನ್ನ ಮಗು ವರ್ತಮಾನ ಪತ್ರಿಕೆ ಓದಬೇಕು. ಹಾಗೆ ಕಲಿಸಿ" ಎಂದು ಆಕೆಗೆ ಹೇಳಿದನು.

ಆಗ ಸ್ಯಾಲಿಯು "ಆತನು ಈ ವರ್ಷ ಐದು ಹೊಸ ಪದಗಳನ್ನು ಕಲಿತು ಕೊಂಡರೆ ಅದೊಂದು ದೊಡ್ಡ ಸಾಧನೆಯಾಗುತ್ತದೆ. ಆದರೆ ಆ ಹುಡುಗ ಒಂದು ದಿನ ಕಾಲೇಜಿಗೆ ಹೋಗುವಂತಾಗುತ್ತಾನೆ; ನನ್ನಮೇಲೆ ಭರವಸೆ ಯಿರಲಿ" ಎಂದು ಉತ್ತರಿಸಿದಳು ಮತ್ತು ಸ್ಯಾಲಿಯ ವ್ಯಕ್ತಿತ್ವದ ಪ್ರಭಾವವೇ ಹಾಗಿತ್ತು. ಸ್ಯಾಲಿಯು ನೀಡಿದ ಆಶ್ವಾಸನೆಯ ಮೇಲೆ ಮಕ್ಕಳ ತಂದೆ ತಾಯಿ ಗಳೂ ಸಂಪೂರ್ಣ ಭರವಸೆ ತಾಳಿದರು. ಒಂದು ಅತ್ಯಂತ ಅನುಕೂಲಕರ ಅಂಶ ವೆಂದರೆ, ನಿಮ್ಮ ಮಕ್ಕಳು ಎಲ್ಲಿರುತ್ತಾರೆಯೋ ಅಲ್ಲಿಯೇ ನಾನು ಇರುತ್ತೇನೆ ; ನೀವೇನೂ ಚಿಂತೆ ಮಾಡಬೇಡಿ, "ಏನೊಂದು ಕಾಳಜಿ ವಹಿಸಬೇಡಿ" ಎಂದು ಸ್ಯಾಲಿ ಅವರಿಗೆ ಹೇಳತೊಡಗಿದಳು.

ಆಕೆಯ ಮಗ ಗ್ಯಾರೀಯಂತೆ ಸ್ಯಾಲೀ ಕಟ್ಟಿದ ಶಾಲೆಯ ವಿದಾರ್ಥಿಗಳೆಲ್ಲರೂ ನಿಯತ ಶಾಲೆಗಳಿಗೆ ಸೇರಿಸಿದ್ದಲ್ಲಿ ತೇರ್ಗಡೆಯಾಗಲಾರರೆಂಬುದು ನಿಜ ; ಆದರೆ ಆಕೆಯ ಪ್ರಯೋಗಾಲಯ ಶಾಲೆಗೆ ಸೇರಿದ ನೂರಾರು ವಿದ್ಯಾರ್ಥಿಗಳಲ್ಲಿ ಶೇ. ೯೦ ಕ್ಕಿಂತ ಹೆಚ್ಚಿನ ಮಕ್ಕಳು ಅಲ್ಲಿ ಯಶಸ್ವಿಯಾಗಿ ವ್ಯಾಸಂಗ ಮುಗಿಸಿ, ನಿಯತ ಶಾಲೆಗಳಿಗೆ ಸೇರಿಕೊಂಡು ಪ್ರೌಢಶಾಲಾ ವ್ಯಾಸಂಗವನ್ನು ಮುಗಿಸಿ ಅರ್ಹತಾ ಪತ್ರಗಳನ್ನು ಗಳಿಸಿದ್ದಾರೆ. ಅಷ್ಟೇ ಅಲ್ಲ; ಅವರಲ್ಲಿ ಅನೇಕರು ಕಾಲೇಜುಗಳನ್ನೂ ಸೇರಿದ್ದಾರೆ.


ಯಶಸ್ಸಿನ ಕಂಪು : ಸ್ಯಾಲೀಯ ಮೇಲಿನ ನಂಬಿಗೆಯ ಕಂಪು ದೇಶದ ಎಲ್ಲೆಡೆ ಪಸರಿಸಿತು, ಜಗತ್ತಿನಾದ್ಯಂತ ಆಕೆಯ ಮೇಲೆ ಭರವಸೆ ಮೂಡಿತು. ೧೯೭೬ರಲ್ಲಿ ವಾಷಿಂಗ್‌ಟನ್ನಿನ ಅಮೆರಿಕನ್ ವಿಶ್ವವಿದ್ಯಾನಿಲಯವು ಸ್ಯಾಲಿಯನ್ನು

ಅವರ ವ್ಯಾಸಂಗ–ಅಸಾಮರ್ಥ್ಯ ಪರಿಹಾರ ಕಾರ್ಯಕ್ರಮದಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕರನ್ನಾಗಿ ನೇಮಿಸಿತು.

ಸಂಯುಕ್ತ ಸಂಸ್ಥಾನಗಳು ಆಕೆಯನ್ನು ೧೯೧ ರಾಷ್ಟ್ರಗಳ ಬೋಧಕರಿಗಾಗಿ ವ್ಯಾಸಂಗ–ಅಸಾಮರ್ಥ್ಯ–ಪರಿಹಾರಗಳ ಬಗ್ಗೆ ಒಂದು ಪ್ರಬಂಧ ಸಿದ್ಧಪಡಿಸಬೇಕೆಂದು ಕೋರಿ ಆ ಕಾರ್ಯಕ್ರಮವನ್ನು ಆಕೆಗೆ ವಹಿಸಿಕೊಟ್ಟಿತು.

೧೯೬೦ರ ಮಧ್ಯಕಾಲದಲ್ಲಿ 'ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್‌ನ ನಿರ್ದೇಶಕರೂ ಹಿಂದೆ ಯುಎಸ್‌ನ ಸಹಾಯಕ ಸರ್ಜನ್ ಜನರಲ್‌ರೂ ಆಗಿದ್ದ ಡಾ|| ಬರ್ಟ್ರಮ್ ಬ್ರೌನ್ ಅವರು ಸ್ಯಾಲೀ ಕಟ್ಟಿದ ಶಾಲೆಯ ಬಗ್ಗೆ ತೀವ್ರವಾಗಿ ವಿಶ್ಲೇಷಣ ಮಾಡಿದರು "ಮೊದಲು ನನಗೆ ಸ್ಯಾಲೀ ಕಟ್ಟಿದ ಶಾಲೆಯ ಬಗ್ಗೆ ಸಂದೇಹವಿತ್ತು, ಆದರೆ ಆಕೆ ತನ್ನ ಮಗನಷ್ಟೇ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದಾಗಲೇ ವೀರಾವೇಶದಿಂದ ಮೇಲೆದ್ದು, ಅಂಥದ್ದೇ ಸಮಸ್ಯೆಗಳನ್ನು ಎದುರಿಸುತ್ತಿರುವ ದೇಶದ ಇತರರಿಗೂ ತಂತಮ್ಮ ಸಮಸ್ಯೆಗಳ ಪರಿಹಾರ ಕಾಣಲು ನೆರವಾದಳು. ಅದರಲ್ಲಿಯೇ ಈ ಮಹಿಳೆಯ ಯಶಸ್ಸು ಕೀರ್ತಿ ಮತ್ತು ಆಕೆ ಕಟ್ಟಿದ ಶಾಲೆಯ ಸಾಮರ್ಥ್ಯ ಶಕ್ತಿ"ಯ ಗುಟ್ಟು ಅಡಗಿದೆ" ಎಂದು ಅವರು ಸ್ಯಾಲೀ ಸ್ಮಿತ್‌ಳ ಬಗ್ಗೆ ಪ್ರಶಂಸಿಸಿದ್ದಾರೆ.

ಎಂ. ಜಯಂತಿಬಾಯಿ



ಎಲ್ಲಿ ಎಲ್ಲರೂ ಸ್ವಾರ್ಥಿಗಳಾಗಿರುವರೋ, ಅಲ್ಲಿ ಬುದ್ಧಿವಂತರು ಮೂರ್ಖರಿಗಿಂತ ಹೆಚ್ಚಿನವರೇನೂ ಅಲ್ಲ. ಪ್ರಾಯಶಃ ಹೆಚ್ಚು ಅಪಾಯಕಾರಿ ಅಷ್ಟೇ.

—ಫ್ರಾಯ್ಡ್

ಪುಸ್ತಕ ವಿಮರ್ಶೆ

ಯೋಗಪ್ರವೇಶ: ಲೇಖಕರು: ಅಜಿತಕುಮಾರ, 'ಕೇಶವಕೃಪಾ', ಬೆಂಗಳೂರು ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ, ಗವಿಪುರಂ ಮಾರ್ಗ, ಕೆಂಪೇಗೌಡ ನಗರ, ಬೆಂಗಳೂರು ೫೬೦೦೧೯, ಪುಟಗಳು: ೪೫೧, ಬೆಲೆ: ಸಾದಾಪ್ರತಿ ರೂ. ೩೦-೦೦, ಕ್ಯಾಲಿಕೋ ಪ್ರತಿ ರೂ. ೩೫.೦೦, ಪ್ರಥಮ ಮುದ್ರಣ ೧೯೮೪.

ಯೋಗಾಸನಗಳ ಬಗ್ಗೆ ಇತ್ತೀಚಿಗೆ ಜನತೆಯಲ್ಲಿ ಅದರಲ್ಲೂ ಯುವಕರಲ್ಲಿ ಒಲವು ತೋರುತ್ತಿದೆ. ಇದಕ್ಕೆ ಕಾರಣ ಡಾ|| ರಾಜಕುಮಾರರ ಯೋಗಾಸನ ಪ್ರದರ್ಶನ 'ಕಾಮನಬಿಲ್ಲು' ಚಿತ್ರದಲ್ಲಿ ಮೂಡಿಬಂದುದರಿಂದಲೋ ಅಥವಾ ಗಗನಯಾತ್ರಿಗಳಲ್ಲೊಬ್ಬರಾದ ರಾಕೇಶಶರ್ಮರು ಅಂತರಿಕ್ಷದಲ್ಲಿ ಯೋಗಾಸನ ಮಾಡಿದ್ದರಿಂದಲೋ ಏನೋ. ಅಂತೂ ಯೋಗಾಸನಗಳಿಗೆ 'ಯೋಗ' ಬಂದಂತೆ ತೋರುತ್ತಿದೆ.

ಜನತೆಯ ಅಪೇಕ್ಷೆ ಒಂದು ವಿದ್ಯೆಯ ಬಗ್ಗೆ ಉತ್ಕಟವಾದಾಗ ಅದಕ್ಕೆ ಸಂಬಂಧಿಸಿದ ಸಾಹಿತ್ಯ ಹೊರಬರಬೇಕಾದುದು ಅಪೇಕ್ಷಣೀಯ ಮಾತ್ರವಲ್ಲ, ಅಗತ್ಯವೂ ಹೌದು. ಈ ದಿಶೆಯಲ್ಲಿ ಅಜಿತಕುಮಾರರ 'ಯೋಗಪ್ರವೇಶ'ಕ್ಕೆ ಒಂದು ವಿಶಿಷ್ಟಸ್ಥಾನವಿದೆ. ಶ್ರೀಯುತರು ಯೋಗಾಭ್ಯಾಸದಲ್ಲಿ ಪರಿಣತರು ಮಾತ್ರವಲ್ಲದೆ ಬೆಂಗಳೂರಿನ ರಾಷ್ಟ್ರೋತ್ಥಾನ ಶಾರೀರಿಕ ಶಿಕ್ಷಾ ಕೇಂದ್ರದ ಪ್ರಮುಖ ಸಲಹೆಗಾರರು. ಹಿಂದು ಸೇವಾ ಪ್ರತಿಷ್ಠಾನದ ನಿರ್ದೇಶಕರಾದ ಇವರು ರಾಷ್ಟ್ರೀಯ ಸ್ವಯಂಸೇವಕರಲ್ಲಿ ಅಗ್ರಗಣ್ಯರು; ನೈಷ್ಠಿಕ ಬ್ರಹ್ಮಚಾರಿಗಳು ಹಾಗೂ ಸೇವಾಮನೋಭಾವವುಳ್ಳ ಧೀಮಂತರು.

ಏಳು ಅಧ್ಯಾಯಗಳುಳ್ಳ 'ಯೋಗಪ್ರವೇಶ'ವು ವಿಶೇಷವಾಗಿ ಯೋಗಾಸನಗಳಿಗೆ ಸಂಬಂಧಿಸಿದ ಪುಸ್ತಕವಾದರೂ ಇದರಲ್ಲಿ ಪ್ರಾಣಾಯಾಮ, ಬಂಧ, ಮುದ್ರೆ ಮತ್ತು ಷಟ್ಕರ್ಮಗಳ ಪರಿಚಯ ಮಾಡಿಕೊಟ್ಟಿದ್ದಾರೆ.

ಮೊದಲನೇ ಅಧ್ಯಾಯದಲ್ಲಿ ಯೋಗವೆಂದರೇನೆಂಬುದನ್ನು ವಿಶದಪಡಿಸಿ ಅಂಗ ಸಾಧನೆ ಮತ್ತು ಯೋಗಾಸನಗಳಿಗಿರುವ ವ್ಯತ್ಯಾಸವನ್ನು ಪಟ್ಟಿಮಾಡಿದ್ದಾರೆ. ಯೋಗಾಭ್ಯಾಸದ ಅಗತ್ಯವನ್ನು ಕಾಂತಾ ಸಮ್ಮಿತದಂತೆ ಮನಗಾಣಿಸಿ ಅದಕ್ಕೆ ಶರೀರ ಮತ್ತು ಮನಸ್ಸು ಇರುವ ಎಲ್ಲರೂ ಅರ್ಹರೆಂಬುದನ್ನು ಒತ್ತಿ ಹೇಳಿ

ದ್ದಾರೆ. ಅಲ್ಲದೆ ಯೋಗಾಭ್ಯಾಸದ ಬಗ್ಗೆ ತಪ್ಪು ಕಲ್ಪನೆಗಳನ್ನು ಕಲ್ಪಿಸಿಕೊಂಡು ಬಂಧಿತರಾಗಿರುವವರಿಗೆ ಉತ್ತರ ನೀಡಿದ್ದಾರೆ. ಮದ್ಯಪಾನ ಮತ್ತು ಧೂಮಪಾನ ಮಾಡುವವರಿಗೆ ಯೋಗಾಭ್ಯಾಸ ದಕ್ಕುವುದಿಲ್ಲವೆಂಬ ಮಾತನ್ನು ಅಲ್ಲಗಳೆದು ಇಂತಹ ಚಟಗಳಿಗೆ ತುತ್ತಾದವರಿಗೆ ಯೋಗವೇ ಅಚಲ ಆಸರೆಯಾದಾಗ ಅಂತಹ ಚಟಗಳಿಂದ ಮನಸ್ಸು ತಾನಾಗಿಯೇ ವಿಮುಖವಾಗುತ್ತದೆಂದು ಹೇಳಿರುವುದು ಒಪ್ಪತಕ್ಕ ಮಾತಾಗಿದೆ.

ಆದರೆ "ಯೋಗಾಭ್ಯಾಸ ಪ್ರಾರಂಭಮಾಡಲು ಶಿಕ್ಷಕನ ಅಗತ್ಯವೇನಿಲ್ಲ. ಇದರಲ್ಲಿ ಪರಿಣತಿ ಹೊಂದಲು. ತುತ್ತತುದಿಯನ್ನು ಮುಟ್ಟಲು ಗುರು ಬೇಕು. ಎಲ್ಲ ಕಲಿಕೆಗಳಿಗೂ ಇದೇ ಸೂತ್ರ. ಯೋಗ ಇದರಿಂದ ಹೊರತೇನಲ್ಲ. ಯೋಗ್ಯನಾದ ಶಿಕ್ಷಾರ್ಥಿ ಅಥವಾ ಸಾಧಕನಿದ್ದರೆ ಗುರು ತಾನಾಗಿಯೇ ಸಿಕ್ಕಿ ಅವಕಾಶವೂ ಕೂಡಿ ಬರುತ್ತದೆ" (ಪುಟ [illegible]. ಕೊನೆಯ ವಾಕ್ಯವೃಂದ) ಎಂದು ಹೇಳಿರುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಕಾರಣ ಯಾವುದೇ ಶಿಕ್ಷಣಕ್ಕೆ ಗುರುವಿನ ಅಗತ್ಯವನ್ನು ಅಲ್ಲಗಳೆಯಲಾಗದು. ಪರಿಣತಿ ಹೊಂದಲು, ತುತ್ತತುದಿಯನ್ನು ಮುಟ್ಟಲು ಗುರು ಎಷ್ಟರಮಟ್ಟಿಗೆ ಆವಶ್ಯಕವೋ, ಪ್ರಾರಂಭಿಕ ದಿಶೆಯಲ್ಲಿ ಅದಕ್ಕಿಂತಲೂ ಹೆಚ್ಚು ಆವಶ್ಯಕ. ಗುರುವಿಲ್ಲದೆ ಅಕ್ಷರಾಭ್ಯಾಸ ಸಾಧ್ಯವಿಲ್ಲ. ಆದ್ದರಿಂದಲೇ 'ಹಠಯೋಗ ಪ್ರದೀಪಿಕೆ'ಯೆಂಬ ಯೋಗಗ್ರಂಥ ಕರ್ತೃಗಳಾದ ಸ್ವಾತ್ಮಾರಾಮ ಯೋಗೀಂದ್ರರು, "ಗುರೂಪದಿಷ್ಟ ಮಾರ್ಗೇಣ ಯೋಗಮೇವ ಸಮಭ್ಯಸೇತ್" ಎಂದು ಹೇಳಿದ್ದಾರೆ.

ಶಿಕ್ಷಕನ ಅಗತ್ಯವನ್ನು ಆಸನದ ಹಂತಕ್ಕೆ ಮಾತ್ರ ಸೀಮಿತಗೊಳಿಸದಿದ್ದರೆ ತಡೆದುಕೊಳ್ಳಬಹುದಿತ್ತು. ಆದರೆ ಲೇಖಕರು ಇನ್ನೂ ಮುಂದಕ್ಕೆ ಹೋಗಿ "ಎಲ್ಲ ಕಲಿಕೆಗಳಿಗೂ ಇದೇ ಸೂತ್ರ" ಎಂದು ಹೇಳಿರುವುದಂತೂ ಒಪ್ಪತಕ್ಕ ಮಾತೇ ಅಲ್ಲ. ವೇದಾಧ್ಯಯನ, ಮತ್ತು ಸಂಗೀತಾಭ್ಯಾಸಗಳಿಗೆ ಗುರುವಿನ ಅಗತ್ಯವನ್ನು ನಿರಾಕರಿಸುವಂತೆಯೇ ಇಲ್ಲ.

ಯೋಗ್ಯನಾದ ಶಿಕ್ಷಾರ್ಥಿಯಿದ್ದರೆ ಗುರು ತಾನಾಗಿಯೇ ಸಿಗುವುದು ಬಹು ಹಿಂದಿನ ಮಾತಾಯಿತು.

"ಉದ್ಯಮೇ ನೈವ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ|"

ಎಂಬ ಸುಭಾಷಿತದಂತೆ ನಮ್ಮ ಪ್ರಯತ್ನದಿಂದಲೇ ಗುರುವನ್ನು ದೊರಕಿಸಿಕೊಳ್ಳಬೇಕೇ ವಿನಾ ವೃಥಾ ಗುರುವಿಗಾಗಿ ಕಾಯುವುದರಿಂದ ಕಾಲಹರಣ ಮಾಡಿದಂತಾಗುತ್ತದೆ.

ಎರಡನೇ ಅಧ್ಯಾಯವಾದ 'ನಮ್ಮ ಆರೋಗ್ಯ'ದಲ್ಲಿ ಯೋಗಾಭ್ಯಾಸಿಗಳು ಸೇವಿಸಬೇಕಾದ ಆಹಾರದ ಬಗ್ಗೆ ದೀರ್ಘವಾಗಿ ಪ್ರಸ್ತಾಪಿಸಿ ವರ್ಜ್ಯಾವರ್ಜ್ಯಗಳನ್ನು ಪಟ್ಟಿಮಾಡಿದ್ದಾರೆ. ಅಲ್ಲಲ್ಲಿ ವೇದ, ಚರಕ ಸುಶ್ರುತರ ವಾಣಿ, ಸುಭಾಷಿತ ಮೊದಲಾದವುಗಳ ಅರ್ಥವನ್ನು ನೀಡಿದ್ದಾರೆ. ಹೀಗೆ ಕೇವಲ ಅರ್ಥವನ್ನು ಕೊಡುವುದರ ಜತೆಗೆ ಮೂಲ ಮಂತ್ರ ಹಾಗೂ ಶ್ಲೋಕಗಳನ್ನು ಉದ್ಧರಿಸಿದ್ದರೆ ಆ ಮಾತುಗಳಿಗೆ ಹೆಚ್ಚು ಪುಷ್ಟಿ ದೊರೆಯುತ್ತಿತ್ತು. ಯುಕ್ತಾಹಾರಗಳ ತಾಪಮಾನಗಳನ್ನು ಪಟ್ಟಿಯ ರೂಪದಲ್ಲಿ ಒದಗಿಸಿರುವುದು ಸ್ಥೂಲದೇಹಿಗಳಿಗೆ ತಾವೆಷ್ಟು ಆಹಾರ ಸೇವಿಸಬೇಕೆಂಬುದರ ಬಗ್ಗೆ ಅರಿವು ಮೂಡಿಸಲು ಸಹಾಯಕವಾಗಿದೆ.

ಮೂರನೇ ಅಧ್ಯಾಯದಲ್ಲಿ ಯೋಗಶಿಕ್ಷಕನಿಗಿರಬೇಕಾದ ಅರ್ಹತೆಗಳ ಬಗ್ಗೆ ತಿಳಿವಳಿಕೆ ಇತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಶಾಲಾಕಾಲೇಜುಗಳಲ್ಲಿ ಯೋಗಶಿಕ್ಷಣವನ್ನು ಜಾರಿಗೆ ತರಬೇಕೆಂದಿರುವುದು ಸೂಕ್ತ ಸಲಹೆಯಾಗಿದೆ. ಆದರೆ ಇಂತಹ ಯೋಗಿವರೇಣ್ಯರ ಶಿಫಾರಸುಗಳನ್ನು ಸರಕಾರ ಎಷ್ಟರಮಟ್ಟಿಗೆ ಪುರಸ್ಕರಿಸುತ್ತದೆಂಬುದು ಕಾದು ನೋಡಬೇಕಾದ ವಿಚಾರ.

ಯೋಗಾಸನಗಳನ್ನು ಅಭ್ಯಸಿಸಲು ಪೂರ್ವಸಿದ್ಧತೆ ಮತ್ತು ನಿಯಮಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ. ಶಿಕ್ಷಕನಿದ್ದಾಗ, ಶಿಕ್ಷಕನಿಲ್ಲದಿದ್ದಾಗ, ಹಾಗೂ ಸಾಮೂಹಿಕವಾಗಿ ಅಭ್ಯಾಸ ಮಾಡಿದಾಗ ಯಾವ ಯಾವ ಕ್ರಮಗಳನ್ನು ಅನುಸರಿಸಬೇಕೆಂಬುದನ್ನು ತಿಳಿಸಿದ್ದಾರೆ.

ಯೋಗದ ಬಗ್ಗೆ ಮಹಿಳೆಯರು ಹೆಚ್ಚು ಆಸಕ್ತಿವಹಿಸದಿರುವುದು ತಿಳಿದ ಸಂಗತಿಯೇ ಆಗಿದೆ. ಅದಕ್ಕಾಗಿ 'ಸ್ತ್ರೀಯರಿಗಾಗಿ ಯೋಗಾಸನ' ಎಂಬ ಶೀರ್ಷಿಕೆಯಡಿಯಲ್ಲಿ "ಮಹಿಳೆಯರು ಪುರುಷರಂತೆ ಸಮಾನವಾಗಿ ಯೋಗಕ್ಕೆ ಮತ್ತು ಯೋಗದ ಪರಿಣಾಮಗಳಿಗೆ ಅರ್ಹರು" (ಪು. ೮೧) ಎಂದು ಹೇಳಿರುವುದು ಸೂಕ್ತವಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ 'ಸೂರ್ಯ ನಮಸ್ಕಾರ'ದ ಅಗತ್ಯ ಮತ್ತು ಕ್ರಮಗಳನ್ನು ಚಿತ್ರ ಮತ್ತು ಬೀಜಮಂತ್ರಗಳ ಸಮೇತ ನೀಡಿದ್ದಾರೆ. ಸೂರ್ಯ ನಮಸ್ಕಾರದಲ್ಲಿ ಹಲವು ವಿಧಗಳಿರುವುದರಿಂದ ಲೇಖಕರು ತಮ್ಮದೇ ಆದ ಕ್ರಮವನ್ನು ವಿವರಿಸಿದ್ದಾರೆ. ಇತರ ವಿಧಗಳನ್ನೂ ಸೂಚಿಸಬಹುದಿತ್ತು.

ಯೋಗಾಸನಗಳನ್ನು ಅಭ್ಯಸಿಸುವುದಕ್ಕೆ ಮೊದಲು ಕೀಲುಗಳ ಮತ್ತು ಸ್ನಾಯುಗಳ ಸರಾಗವಾದ ಚಲನೆಗೆ ಶರೀರ ಸಂಚಾಲನ' ಎಂದು ಹೇಳಿದ್ದಾರೆ.

ಸೂರ್ಯ ನಮಸ್ಕಾರವನ್ನು ಮಾಡಿ ಯೋಗಾಸನ ಪ್ರಾರಂಭ ಮಾಡುವವರಿಗೆ ಇದರ ಅಗತ್ಯವೇನಿಲ್ಲ. ಸೂರ್ಯ ನಮಸ್ಕಾರದಿಂದಲೇ ಶರೀರ ಸಂಚಾಲನೆಯಾಗಿ ಕೀಲು ಮತ್ತು ಸ್ನಾಯುಗಳು ಯೋಗಾಸನಕ್ಕೆ ಅನುವಾಗುತ್ತವೆ. ಪುರಸತ್ತು ವಿಪುಲವಾಗಿದ್ದವರು ಇದನ್ನೂ ಅಭ್ಯಸಿಸಲು ಅಭ್ಯಂತರವೇನಿಲ್ಲ.

ಆದರೆ ಇಲ್ಲಿ ಬರುವ ಸಂಚಾಲನೆಗಳು ಯೋಗಾಸನಗಳೇ ಆಗದೆ. 'ಜಾನು ಸಂಧಿ' ಎಂಬುದು ಉತ್ಕಟಾಸನಕ್ಕೂ 'ಕಟಿ' ಎಂಬುದು ಊರ್ಧ್ವಾಸನ, ಹಸ್ತಪಾದಾಸನ, ಉತ್ಥಿತ ತ್ರಿಕೋಣಾಸನ, ಮತ್ತು ಪರಿವೃತ್ತ ತ್ರಿಕೋಣಾಸನಕ್ಕೂ 'ಎದೆಯುಗೂಡು' ಎಂಬುದು ನಮಸ್ಕಾರಾಸನಕ್ಕೂ 'ಗ್ರೀವ' ವೆಂಬುದು ಶಶಾಂಗಾಸನಕ್ಕೂ ೧೪ ಮತ್ತು ೧೫ ನೇ ಸಂಚಾಲನೆಗಳು ಉತ್ಥಿತ ಏಕೈಕಪಾದಾಸನ ಮತ್ತು ಸರ್ಪಾಸನಕ್ಕೂ ೧೮ನೇ ಸಂಚಾಲನವು ಉತ್ಥಿತ ದ್ವಿಪಾದಾಸನ ಮತ್ತು ಸುಪ್ತ ಪಾದಾಂಗುಷ್ಠಾಸನಕ್ಕೂ ೨೩ ನೇ ಸಂಚಾಲನವು ನಾವಾಸನಕ್ಕೂ ಸಂವಾದಿಯಾದುವಾಗಿವೆ.

ಆಸನಗಳನ್ನು ನಿಂತು, ಕುಳಿತು, ಮಲಗಿ, ತಿರುಗಿ, ತಲೆಕೆಳಗು ಮಾಡಿ, ಸಮತೋಲನದಿಂದ ಮಾಡುವ ಆಸನಗಳು, ಚತುಷ್ಪಾದ, ಹಿಂದೆ ಬಾಗುವ, ಮುಂಬಾಗುವ ಆಸನಗಳು ಎಂದು ವಿಭಾಗ ಮಾಡಿಕೊಂಡು ಅವುಗಳನ್ನು ಅಭ್ಯಸಿಸುವ ಕ್ರಮ ಮತ್ತು ಪ್ರತಿಯೊಂದು ಆಸನದ ಪರಿಣಾಮಗಳನ್ನು ನೀಡಿದ್ದಾರೆ. ಹೇಳಿರುವ ರೀತಿ ಸರಳವಾಗಿದ್ದು ಪ್ರಾರಂಭಿಕ ಅಭ್ಯಾಸಿಗಳೂ ಅರ್ಥ ಮಾಡಿಕೊಳ್ಳಬಹುದಾಗಿವೆ.

ಇಲ್ಲಿ ಹೇಳಿರುವ ಎಲ್ಲ ಆಸನಗಳು ಶ್ರೀ ಬಿ. ಕೆ. ಎಸ್. ಅಯ್ಯಂಗಾರ್ಯರ 'ಯೋಗದೀಪಿಕಾ' ಎಂಬ ಗ್ರಂಥದಲ್ಲೇ ಸಿಗುವುದರಿಂದ ಲೇಖಕರು ಅಲ್ಲಿಲ್ಲದ ಕೆಲವು ಆಸನಗಳನ್ನು ನೀಡಿದ್ದಿದ್ದರೆ ಅಭ್ಯಾಸಿಗಳಿಗೆ ಹೊಸ ಆಸನಗಳ ಪರಿಚಯವಾದಂತಾಗುತ್ತಿತ್ತು.

ಐದನೇ ಅಧ್ಯಾಯದಲ್ಲಿ ಪ್ರಾಣಾಯಾಮದ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿ ಕುಂಭಕ ರಹಿತ ಮತ್ತು ಕುಂಭಕ ಸಹಿತ ಪ್ರಾಣಾಯಾಮಾಭ್ಯಾಸದ ಕ್ರಮಗಳನ್ನು ವಿವರಿಸಿದ್ದಾರೆ. ಪ್ರಾಣಾಯಾಮದ ಅಗತ್ಯವೇನೆಂಬುದನ್ನು ಹೃದ್ಯವಾಗಿ ವಿವರಿಸಿದ್ದಾರೆ. 'ಉದರಶ್ವಾಸ, ಗ್ರೀವಶ್ವಾಸವೇ ಆದಿಯಾಗಿ ಕೆಲವು ಪ್ರಾಣಾಯಾಮದ ಚಿತ್ರಗಳನ್ನು ಬೇರೆಡೆ ನೀಡುವುದರ ಬದಲು ಆಸನ ವಿಭಾಗದಲ್ಲಿದ್ದಂತೆ ಅಲ್ಲಲ್ಲಿಯೇ ಕೊಟ್ಟಿದ್ದಿದ್ದರೆ ಆದರಿಂದ ಅಭ್ಯಾಸಿಗಳಿಗೆ ಹೆಚ್ಚು ಅನುಕೂಲವಾಗುತ್ತಿತ್ತು.

ಅಪೂರ್ಣ ಉಷ್ಟ್ರಾಸನ, ಪೂರ್ಣ ಉಷ್ಟ್ರಾಸನ, ಅಪೂರ್ಣ ಶಶಾಸನ, ಅಪೂರ್ಣ ಮತ್ಸ್ಯಾಸನ, ಪೂರ್ಣ ಮತ್ಸ್ಯಾಸನ, ಪೂರ್ಣಶಶಾಸನ, ಪರಿಪೂರ್ಣ ಶಶಾಸನ, ನಿಕುಂಜಾಸನ, ಶರಭಾಸನ—ಇವೆಲ್ಲವೂ ಆಸನಗಳೇ ಆಗಿರುವುದರಿಂದ ಇವುಗಳನ್ನು ಪ್ರಾಣಾಯಾಮದ ಅಧ್ಯಾಯದಲ್ಲಿ ಕೊಟ್ಟಿರುವ ಔಚಿತ್ಯವೇನೆಂಬುದು ತಿಳಿಯುವುದಿಲ್ಲ. ಇವುಗಳಲ್ಲಿ ಕೆಲವನ್ನು ಆಸನ ವಿಭಾಗ ದಲ್ಲಿಯೂ ಕೊಟ್ಟಿರುತ್ತಾರೆ. ಇಲ್ಲಿ ವಿವರಿಸಿರುವ ಶ್ವಾಸಕ್ರಿಯೆಯನ್ನು ಅಲ್ಲಿಯೇ ವಿವರಿಸಿದ್ದಿದ್ದರೆ ಮತ್ತೊಮ್ಮೆ ಅವುಗಳ ಬಗ್ಗೆ ಹೇಳಬೇಕಾದ ಅಗತ್ಯ ವಿರಲಿಲ್ಲ.

ಈ ಅಧ್ಯಾಯದಲ್ಲೇ ಮುದ್ರೆಗಳ ಬಗ್ಗೆ ಸಂಕ್ಷಿಪ್ತಮಾಹಿತಿ ನೀಡಿದ್ದಾರೆ. ಈ ಮುದ್ರೆಗಳನ್ನು ಪ್ರಾಣಾಯಾಮಕ್ಕೆ ಸಂಬಂಧಿಸಿದಂತೆ ಹೇಳಿದ್ದಾರೆ. ಈ ಮುದ್ರೆಗಳ ಜತೆಗೆ ಇತರ ಕೆಲವು ಯೋಗ ಗ್ರಂಥಗಳಲ್ಲಿ ಸಿಗದ ನಭೋಮುದ್ರಾ, ಮಾಂಡೂಕಿ, ತಡಾಗಿ, ಪಾಶಿನಿ, ಭುಜಂಗಿನಿ—ಇತ್ಯಾದಿ ಮುದ್ರೆಗಳ ಬಗ್ಗೆ ಮಾಹಿತಿ ನೀಡಿದ್ದಿದ್ದರೆ ಯೋಗಾಭ್ಯಾಸಿಗಳಿಗೆ ಅನುಕೂಲವಾಗುತ್ತಿತ್ತು.

ಆರನೇ ಅಧ್ಯಾಯದಲ್ಲಿ ಬಂಧ ಮತ್ತು ಕೆಲವು ಮುದ್ರೆಗಳ ಬಗ್ಗೆ ಹೇಳಿದ್ದಾರೆ. ಯೋಗ ಷಟ್ಕರ್ಮಗಳಾದ ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿ ಮತ್ತು ಕಪಾಲಭಾತಿಗಳನ್ನು ತಿಳಿಸಿರುವುದು ಈ ಗ್ರಂಥದ ಮತ್ತೊಂದು ವೈಶಿಷ್ಟ್ಯ. ಆದರೆ ಇವುಗಳನ್ನು ಗುರುಮುಖೇಣ ಅಭ್ಯಾಸಮಾಡಿ ಕಲಿಯಬೇಕಲ್ಲದೆ ಸ್ವತಂತ್ರಿಸಿ ತಾವೇ ಅಭ್ಯಾಸ ಮಾಡುವುದು ಅಪಾಯವೆಂದು ತಿಳಿಸಬಹುದಿತ್ತು. ಇದನ್ನು ನೋಡಿ ಅಭ್ಯಾಸ ಮಾಡಲಾಗದಿದ್ದರೂ ಸಹ ಅಂತಹ ಕೆಲವು ಕರ್ಮ ಗಳು ಯೋಗದಲ್ಲಿ ಇದೆಯೆಂಬುದು ಎಲ್ಲರಿಗೂ ತಿಳಿಯುವಂತಾಗಿದೆ. ಈ ಎಲ್ಲ ಯೋಗಕ್ರಿಯೆಗಳನ್ನೂ ಒಂದು ನಕ್ಷೆಯ ರೂಪದಲ್ಲಿ ಕೊಟ್ಟಿರುವುದು ವಾಚಕರಿಗೆ ಬಹಳ ಅನುಕೂಲವಾಗಿದೆ.


ಕೊನೆಯ ಅಧ್ಯಾಯವನ್ನು ಧ್ಯಾನಕ್ಕೆ ಮೀಸಲಿಟ್ಟಿರುವುದು ಯೋಗದ ಗುರಿ ಯೇನೆಂಬುದನ್ನು ಸೂಚಿಸುವಂತಿದೆ. ರೂಪಧ್ಯಾನ ಮತ್ತು ಶಬ್ದಧ್ಯಾನ ಗಳೆರಡರ ಬಗ್ಗೆಯೂ ವಿವರಣೆಯಿತ್ತಿದ್ದಾರೆ. ಏಕಾಗ್ರತೆಯ ಮುಂದಿನ ಹಂತ "ಧಾರಣೆ" ಎಂದು ಹೇಳುವುದಕ್ಕಿಂತ "ಪ್ರತ್ಯಾಹಾರ"ದ ಮುಂದಿನಹಂತ ಎಂದು ಹೇಳಿದ್ದಿದ್ದಾದರೆ ಹೆಚ್ಚು ಸಮಂಜಸವಾಗುತ್ತಿತ್ತು. ಧ್ಯಾನವು ನಿರಂತರ ನಡೆದರೆ ಅದೇ 'ಸಮಾಧಿ' ಅದೇ ಯೋಗದ ಪರಮಗಂತವ್ಯವೆಂದು ಹೇಳ ಬಹುದಿತ್ತು. ಆದರೆ ಸಮಾಧಿಸ್ಥಿತಿಯನ್ನು ತಲುಪುವುದು ಸಾಮಾನ್ಯರಿಗೆ ಸಾಧ್ಯ

ವಾಗದುದರಿಂದ ಅದನ್ನು ಬಿಟ್ಟಿರಬಹುದೆಂದು ತೋರುತ್ತದೆ.

ಕೊನೆಯಲ್ಲಿ ಪರಿಶಿಷ್ಟವೊಂದನ್ನು ಸೇರಿಸಿರುವುದು ಬೇಕಾದ ಆಸನವನ್ನು ತೆಗೆದು ನೋಡಲು ಸಹಕಾರಿಯಾಗಿದೆ. ಯೋಗಾಭ್ಯಾಸಗಳನ್ನು ಅವರವರ ಅಪೇಕ್ಷೆಗಳಿಗೆ ಅನುಗುಣವಾಗಿ ಮೂರು ಗುಂಪುಮಾಡಿ ಗ್ರಂಥವನ್ನು ಮುಕ್ತಾಯ ಮಾಡಿದ್ದಾರೆ.

ಒಟ್ಟಿನಲ್ಲಿ ಯೋಗದ ಎಲ್ಲ ಅಂಗಗಳನ್ನೊಳಗೊಂಡ ಈ ಗ್ರಂಥವು ಯೋಗ ಸಾಹಿತ್ಯ ಭಂಡಾರಕ್ಕೆ ಒಂದು ಕೊಡುಗೆಯಾಗಿದೆ.

ಯೋಗಾಚಾರ್ಯ ಕೆ. ಕೇಶವಮೂರ್ತಿ



ದಾನ ಧರ್ಮಗಳು ಪರಮಾತ್ಮನಲ್ಲಿ ಅನೇಕ ಪಾಪಗಳಿಗೆ ಪರಿಹಾರವಾಗುವಂತೆ ವಿನಮ್ರತೆಯು ಮಾನವರೆದುರು ಮಹತ್ವದ ಶಕ್ತಿಯಾಗುತ್ತದೆ.

—ಗ್ರೆವಿಲ್

ಮಾನವನ ಸಮಸ್ತ ದುರ್ಗುಣ ದುರಾಪರಾಧಗಳಲ್ಲಿ ಅತ್ಯಂತ ಕರಾಳವಾದ ಅಪರಾಧವೊಂದಿದ್ದರೆ ಅದು ಕೃತಘ್ನತೆ.

—ಬ್ರೂಕ್

ನಮ್ಮೊಳಗೆಯೇ ಇರುವ ಸದಸದ್ವಿವೇಕದಷ್ಟು ಪ್ರಭಾವಶಾಲಿಯಾಗಿ ನಮ್ಮ ತಪ್ಪನ್ನೆತ್ತಿ ಹೇಳಬಲ್ಲ, ನಮ್ಮ ಪ್ರತಿ ತಪ್ಪಿಗೂ ಪ್ರಚಂಡ ಸಾಕ್ಷಿಯಾಗಿ ನಿಲ್ಲಬಲ್ಲ ಬೇರೆ ಯಾವ ಶಕ್ತಿಯೂ ಇಲ್ಲ.

—ಸೊಫೋಕ್ಲೆಸ್

ವಯಸ್ಕ ಮತದಂತೆ ನಾವು ನಡೆದಿದ್ದೇವೆ. ಬಹುಮತದವರು ಮೂರ್ಖರಾದರೆ ಬುದ್ಧಿವಂತರೇ ಹುಚ್ಚರಾಸ್ಪತ್ರೆಯಲ್ಲಿ ಇರಬೇಕಾಗುತ್ತದೆ.

—ಎಚ್. ಮಾನ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ನಳಚರಿತ್ರೆಯ ಸಂಗ್ರಹ

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಕನ್ನಡ ಪರಂಪರೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited & Printed by H. G. Ramaswamy Iyengar, Karnataka St
Adult Education Council Press and Published by Karnataka St
Adult Education Council, Mysore city (India)